Private Member's Bills—Introduction.
Hindu Marriage (Mysore Amendment) Bill, 1969.

Introduction

Sri L. SRIKANTIAH.—I beg leave of the House to introduce the Hindu Marriage (Mysore Amendment) Bill, 1969.

Mr. DEPUTY SPEAKER.—Has the House its leave to the hon members to introduce the Hindu Marriage (Mysore Amendment) Bill, 1969?

HON. MEMBERS.—Yes.

Sri L. SRIKANTIAH.—I beg to introdnce the Hindu Marriage (Mysore Amendment) Bill, 1969.

Mr. DEPUTY SPEAKER.—The Bill is introduced.

Sri H. N. NANJE GOWDA.—I have also given notice that the Mysore Public Men Enquiries Bill, 1969 be taken for consideration. I have given this notice about 25 days ago. This may be taken up next Friday.

Mr. DEPUTY SPEAKER.—It will be taken for consideration during the next non-official day.

Mr. Jwalaniah to move his Mysore Sales Tax (Amendment) Bill. 1969. The member is absent.

Mr. K. H. Patil to move his Mysore Agricultural Produce Market Committees (Amendment) Bill, 1969. He is also absent.

(*Sri K. H. Patil entered the House.*)

Sri K. H. PATIL.—I am not keen to take up my Bill today. The debate on it may be postponed. I was all along on the Speaker's Tea Table. Therefore it may be taken up next week.

Mr. DEPUTY SPEAKER.—I will consider the suggestion.

Sri B. P. GANGADHAR.—I will speak on my resolution. On the other day I had not completed my speech.

Private Member's Resolutions *re*: Changing of name of Mysore State as "Kannada Nadu".

(*Debate continued*)

†ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಸ್ವಾಮಿ, ನಾನು ಹಿಂದಿನ ಸಾರಿ ಇಲ್ಲಿ ಮಾತನಾಡುವಾಗ ಪುರಾತನ ಕಾಲದಿಂದಲೂ ಈ ಭೂಭಾಗಕ್ಕೆ ಕರ್ಣಾಟಕ ಎಂದು ಕರೆಯುತ್ತಿದ್ದರು ಎಂದು ಹೇಳಿದ್ದೆ. ಇದರ ಬಗ್ಗೆ ಹಿಂದಿನ ಪುರಾಣಗಳಲ್ಲಿ ಹಾಗೂ ಸಾಹಿತ್ಯಗಳಲ್ಲಿ ಯಾವ ರೀತಿ ಇದೆ ಎಂದು ನೋಡಿಕೊಂಡು ಬಂದರೆ ಇದರಲ್ಲೂ ಕೂಡ ಕರ್ಣಾಟಕ ಎನ್ನುವ ಪದಗಳೇ ಇರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದರ ಬಗ್ಗೆ ಕೆಲವು ವಿಷಯಗಳನ್ನು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಬಹಳ ಪ್ರಾಚೀನ ಕಾಲದಲ್ಲಿ ಆಗಿನ ಪ್ರಮುಖರು ಹಾಗೂ ಮೇಧಾವಿಗಳೂ ಆಗಿದ್ದ ನಾಗವರ್ಮಾ ಎಂಬ ಒಬ್ಬರು ದೊಡ್ಡ ಕವಿಪುಂಗವರು ಅವರು ಬರೆದಿರುವ 'ಭಾಷಾ ಭೂಷಣ'

ಎನ್ನುವ ಉದ್ಗ್ರಂಥದಲ್ಲಿ ಹಲವಾರು ಕಡೆ ಕರ್ಣಾಟಕ ಎನ್ನುವ ಶಬ್ದಗಳನ್ನು ಉಪಯೋಗಿಸಿರುತ್ತಾರೆ. ಹಾಗೆ ಕೆಲವು ಪ್ರಾಚೀನ ಸಾಹಿತ್ಯಗಳಲ್ಲೂ ಕರ್ಣಾಟಕ ಎನ್ನುವ ಪದಗಳನ್ನು ಉಪಯೋಗಿಸಿರುವುದನ್ನು ನಾವು ಕಾಣಬಹುದು. ಹಲವಾರು ಪಕ್ಷಗಳು ಕೂಡ ವಿವೇಚನೆ ಮಾಡಿ ಕರ್ಣಾಟಕ ಎನ್ನುವ ಹೆಸರನ್ನು ಇಟ್ಟುಕೊಂಡಿದೆ. ಉದಾಹರಣೆಗೆ ಕರ್ಣಾಟಕ ಪ್ರಜಾ ಸೋಷಿಯಲಿಸ್ಟ್ ಪಾರ್ಟಿ ಎಂದು ಒಂದು ರಾಜಕೀಯ ಪಕ್ಷದವರು ಹೆಸರು ಇಟ್ಟುಕೊಂಡಿದ್ದಾರೆ. ಇದರಂತೆ ಕಾಂಗ್ರೆಸ್ ಪಕ್ಷದವರೂ ಕೂಡ ಕರ್ಣಾಟಕ ಕಾಂಗ್ರೆಸ್ ಸಮಿತಿ ಎಂದು ಇಟ್ಟುಕೊಂಡಿದ್ದಾರೆ. ಇದೇ ರೀತಿ ಕರ್ಣಾಟಕ ಜನಸಂಘ, ಕರ್ನಾಟಕ ಕಮ್ಯುನಿಸ್ಟು ಪಾರ್ಟಿ, ಕರ್ನಾಟಕ ಸಂಯುಕ್ತ ಸೋಷಿಯಲಿಸ್ಟು ಪಾರ್ಟಿ, ಕರ್ಣಾಟಕ ಮಾರ್ಕ್ಸಿಸ್ಟ್ ಪಾರ್ಟಿ ಹಾಗೂ ರೈಟಿಸ್ಟ್ ಪಾರ್ಟಿ, ಇತ್ಯಾದಿ ಹಲವಾರು ರಾಜಕೀಯ ಪಕ್ಷಗಳು ಕೂಡ ಕರ್ಣಾಟಕ ಎನ್ನುವ ಹೆಸರನ್ನು ಉಪಯೋಗಿಸಿಕೊಂಡು ಬರುತ್ತಿವೆ. ಇಂತಹ ಹಲವಾರು ಉದಾಹರಣೆಗಳನ್ನು ನಾವು ಕೊಡಬಹುದು.

4-00 P.M.

ಆದುದರಿಂದ ಎಲ್ಲಾ ರಾಜಕೀಯ ಪಕ್ಷಗಳೂ ಕರ್ಣಾಟಕ ಎಂಬ ಶಬ್ದವನ್ನು ಬಳಸಿಕೊಂಡಿವೆ. ಇದನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ನಾನು ಭಾವಿಸುತ್ತೇನೆ. ಇನ್ನೂ ಮುಂದಕ್ಕೆ ಹೋದರೆ ನಾವೆಲ್ಲರೂ ಚಿಕ್ಕವರಾಗಿದ್ದಾಗ ಅಭ್ಯಾಸಿಸಿರುವ ಕನ್ನಡ ಪದ್ಯಗಳ ಸರಣಿಯಲ್ಲಿ ಗೋವಿನ ಕಥೆ ಕಲಿತಿದ್ದೇವೆ. ಅದು ಹಿಂದಿನ ಮೈಸೂರು ದೇಶದಲ್ಲಿ ಈಗ ಕರ್ನಾಟಕ ಎಂದು ಕರೆಯುವ ಭೂಮಿಯಲ್ಲಿ ಎಲ್ಲಾ ಸ್ಕೂಲುಗಳಲ್ಲೂ ವ್ಯಾಸಂಗ ಮಾಡಲು ಅದನ್ನು ಪಠ್ಯಪುಸ್ತಕವನ್ನಾಗಿ ಇಟ್ಟಿದ್ದರು. ಈ ಪದ್ಯವನ್ನು ಬರೆದ ಕವಿಯ ಹೆಸರು, ಕಾಲ ಗೊತ್ತಿಲ್ಲ. ಆದರೆ ಇದರಲ್ಲಿ ಒಂದು ಶಬ್ದವನ್ನೂ ಕೂಡ ಸಂಸ್ಕೃತದಿಂದಾಗಲಿ ಅಥವಾ ಅನ್ಯಭಾಷೆಯಿಂದಾಗಲಿ ತೆಗೆದುಕೊಳ್ಳಲಿಲ್ಲ. ಆ ಪದ್ಯ ಈ ರೀತಿ ಇದೆ—

''ಧರಣಿ ಮಂಡಲ ಮಧ್ಯದೊಳಗೆ ಮೆರೆಯುತಿಹ ಕರ್ಣಾಟಕ ದೇಶದೊಳಿರುವ
ಕಾಳಿಂಗನೆಂಬ ಗೊಲ್ಲನ ಪರಿಯ ನಾನೆಂತ ಹೇಳ್ವೆನು...... ....''

ಈ ರೀತಿ ಬಹು ಸೊಗಸಾಗಿ ಒಬ್ಬ ಗೊಲ್ಲನನ್ನು ಬಹಳ ಜಾಣ್ಮೆಯಿಂದ ಉಲ್ಲೇಖ ಮಾಡಿ ಕರ್ಣಾಟಕ ಎನ್ನುವ ಶಬ್ದದಿಂದೊಡಗೂಡಿ ಪದ್ಯ ಬರೆದಿದ್ದಾರೆ.

ಇನ್ನೂ ಸ್ವಲ್ಪ ಮುಂದಕ್ಕೆ ಹೋಗಿ ನೋಡಿದರೆ ಇಲ್ಲಿಯ ಸದಸ್ಯರಾದ ಶ್ರೀಮಾನ್ ಕೆ. ಹೆಚ್. ಪಾಟೀಲರವರ ಊರಾದಂಥ ಗದಗಿನಲ್ಲಿ ನಾರಣಪ್ಪನವರು ಎನ್ನುವವರು ಇದ್ದರು. ಅವರಿಗೆ ಗದುಗಿನ ನಾರಣಪ್ಪ ಎಂದು ಕರೆಯುತ್ತಾರೆ. ಮತ್ತು ಅವರಿಗೆ ಕುಮಾರವ್ಯಾಸ ಎಂದು ಬಿರುದೂ ಇದೆ. ಮಹಾಭಾರತವನ್ನು ಮೊಟ್ಟಮೊದಲಿಗೆ ಕನ್ನಡಕ್ಕೆ ತರ್ಜುಮೆ ಮಾಡಿದ ಮಹಾಕವಿ ಕುಮಾರ ವ್ಯಾಸ. ಈ ಹೆಸರನ್ನೂ ತಾವು ಕೇಳಿರಬಹುದು. ಈ ಕವಿಪುಂಗನ ವಿಚಾರವಾಗಿ, ಕುವೆಂಪುರವರ ಮಾತಿನಲ್ಲಿ ಹೇಳುವುದಾದರೆ ''ಕುಮಾರವ್ಯಾಸನು ಹಾಡಿದನೆಂದರೆ, ಭಾರತ ಕಣ್ಣಲಿ ಕುಣಿಯುವುದು ಎಂದು ಹೇಳಿದ್ದಾರೆ. ನಮ್ಮ ಕವಿ ಕುವೆಂಪುರವರು, ಅವರ ಜಾಣ್ಮೆಯನ್ನೂ, ಅವರ ಮೇಲ್ಮೆಯನ್ನೂ ಹೊಗಳಿದ್ದಾರೆ. ಈ ಮಹಾಕವಿಗೆ ಅಂದರೆ ಗದುಗಿನ ನಾರಣಪ್ಪ ಅಥವಾ ಕುಮಾರವ್ಯಾಸನಿಗೆ ''ಕರ್ನಾಟಕ ಕವಿ ಚೂತವನ ಚೈತ್ರ'' ಎಂಬ ಬಿರುದೂ ಇದ್ದಿತು. ಈ ರೀತಿ ಕುಮಾರವ್ಯಾಸನು ಬರೆದಂಥ ಕರ್ನಾಟಕ ಎನ್ನತಕ್ಕಂಥ ಪವಿತ್ರವಾದ ಮಾತು ಪೂರ್ವಕಾಲದಿಂದಲೂ ನಡೆದುಕೊಂಡು ಬರುತ್ತಾ ಇದೆ. ಒಬ್ಬ ಕವಿಗೆ ಒಂದು ಬಿರುದನ್ನು ಕೊಡತಕ್ಕಂಥ ಪ್ರತಿಯೊಂದು ಸಂದರ್ಭದಲ್ಲೂ ಕೂಡ ನಾವು ಕರ್ನಾಟಕ ಎನ್ನುವ ಶಬ್ದವನ್ನು ಅನೂಚಾನವಾಗಿ ಉಪಯೋಗಿಸಿಕೊಂಡು ಬಂದಿದ್ದೇವೆ. ಇದರಲ್ಲಿ ಹೆಸರು ಹೇಳುವುದು ಮುಖ್ಯವಲ್ಲ, ಹೆಸರು ಹೇಳುವುದು ಮಹತ್ವ ಪ್ರಶ್ನೆಯಲ್ಲ. ಅದನ್ನು ಬಾಯಿಯಲ್ಲಿ ಹೇಳುವುದಕ್ಕಿಂತ ಮುಖ್ಯವಾಗಿ ಮನಸ್ಸಿನಲ್ಲಾಗುವ ಒಂದು ಪರಿಣಾಮ, ಒಂದು ಸಂತೋಷ, ಒಂದು ಆತ್ಮ ವಿಕಾಸ ಅದನ್ನು ಅರಿತುಕೊಳ್ಳಬೇಕು. ಈಗ ನಮ್ಮಲ್ಲಿ ಸಂಪಿಗೆ ಹೂವು, ಮಲ್ಲಿಗೆ ಹೂವುಗಳ ವಾಸನೆ ಹೇಗಿವೆ ಮತ್ತು ಇನ್ನೂ ಅನೇಕ ಹೂವುಗಳ ವಾಸನೆ ಹೇಗಿದೆ ಎನ್ನುವುದನ್ನು ಬಾಯಿಯಲ್ಲಿ ಹೇಳುವುದಕ್ಕಾಗುವುದಿಲ್ಲ, ಅದನ್ನು ಅನುಭವಿಸಿದರೇನೇ ಅವರ ಪರಿಣಾಮ ಗೊತ್ತಾಗುವುದು. ಹಾಗೆ ಈಗ ಕರ್ನಾಟಕ ಎನ್ನುವ ಹೆಸರು ನಮ್ಮ ದೇಶಕ್ಕೆ ಇರಬೇಕಾದ್ದು ನ್ಯಾಯವೆಂದು ಹೇಳುತ್ತೇನೆ. ಈ ಹೆಸರು ಒಬ್ಬ ವ್ಯಕ್ತಿಗಾಗಲಿ, ಧರ್ಮಕ್ಕಾಗಲಿ, ಸಂಪ್ರದಾಯಗಳಿಗಾಗಲಿ, ಯಾವ ಸಮಾಜಕ್ಕಾಗಲಿ ಸೀಮಿತವಾದುದಲ್ಲ. ಇದರ ಬೃಹತ್ ಅಭಿಪ್ರಾಯ ದೊಡ್ಡದೇಶ, ಅರವಿಂದ ದೇಶ ಎಂದು, ಇದರಲ್ಲಿ ಸಿಹಿ ಇದೆಯೋ ಏನಃ ಕಹಿ

(ಶ್ರೀ ಬಿ. ಪಿ. ಗಂಗಾಧರ್)

ಇಲ್ಲ. ಆದುದರಿಂದ ಇದು ಇಡೀ ಭೂಭಾಗದಲ್ಲಿ ಎಲ್ಲಾ ಜನಕ್ಕೂ ಸಂಬಂಧಪಟ್ಟ ವಿಷಯ ಎಂದು ಹೇಳುತ್ತೇನೆ. ಮತ್ತು ನಾನು ಅದನ್ನು ಪುಷ್ಟೀಕರಣ ಮಾಡುತ್ತಿದ್ದೇನೆ. ಈ ಕರ್ನಾಟಕ ಎನ್ನುವ ಶಬ್ದ ಸುಮಾರು ಒಂದನೆಯ ಶತಮಾನದ ಮೃಚ್ಛಕಟಿಕ ನಾಟಕದಿಂದ 20ನೆಯ ಶತಮಾನದ ಕುವೆಂಪುರವರು ಬರೆದಿರತಕ್ಕಂಥ 'ರಾಮಾಯಣ ದರ್ಶನಂ' ಒಳಗೆ ಪ್ರತಿಯೊಂದರಲ್ಲೂ ಹೇಳಿದ್ದಾರೆ. ಈ 2, 3, 5, 9 ನೆಯ ಶತಮಾನಗಳಿಂದಲೂ ಅನೂಚಾನವಾಗಿ ಕರ್ನಾಟಕ ಎನ್ನುವ ಶಬ್ದ ಮತ್ತೆ ಮತ್ತೆ ಬರುತ್ತಿದೆ. ಈ ರೀತಿ ಅನೂಚಾನವಾಗಿ ನಡೆದುಕೊಂಡು ಬಂದಿರುವ ದೇಶವನ್ನು ಕರ್ನಾಟಕ ಎಂದು ನಾಮಕರಣ ಮಾಡಿ, ಕರ್ನಾಟಕ ಎಂದು ಕರೆಯುವುದು ಅತ್ಯಗತ್ಯ ಎಂದು ಇಲ್ಲಿರತಕ್ಕ ಎಲ್ಲಾ ಸ್ನೇಹಿತರಲ್ಲೂ ಹೇಳಿ ಇದನ್ನು ಒಪ್ಪಿಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಆದುದರಿಂದ ಮೈಸೂರಿಗೆ ಬದಲಾಗಿ ಕನ್ನಡನಾಡು ಎಂದು ಸೂಚಿಸಿರತಕ್ಕ ಶ್ರೀಮಾನ್ ಶ್ರೀಕಂಠಯ್ಯನವರಿಗೂ ಕೂಡ ನಾನು ತಂದಿರತಕ್ಕಂಥ ಅಮೆಂಡ್‌ಮೆಂಟ್‌ನ್ನು ಒಪ್ಪಿಕೊಂಡು ಇದನ್ನು ಕರ್ನಾಟಕ ಎಂದು ಕರೆಯುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಂಡು, ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಹೆಚ್. ಎನ್. ನಂಜೇಗೌಡ.—ಮಾನ್ಯ ಅಧ್ಯಕ್ಷರೇ, ಈಹೊತ್ತು ಪ್ರಾಮುಖ್ಯವಾದಂಥ ಒಂದು ನಿರ್ಣಯವನ್ನು ಶ್ರೀಮಾನ್ ಶ್ರೀಕಂಠಯ್ಯನವರು ಈ ಸಭೆಯಲ್ಲಿ ತಂದು ಭಾರಿ ಉಪಕಾರ ಮಾಡಿದ್ದಾರೆ. ಅದೇನೆಂದರೆ ರಾಜ್ಯದ ಹೆಸರು ಕನ್ನಡನಾಡು ಎಂಬುದಾಗಿ ಇಡಬೇಕು ಎನ್ನುವ ನಿರ್ಣಯ. ಮತ್ತೊಂದು ನಿರ್ಣಯ ಶ್ರೀಮಾನ್ ಗಂಗಾಧರ್‌ರವರದ್ದು ಕರ್ನಾಟಕ ಮಾಡಬೇಕು ಎಂದು. ಇವೆರಡು ಬಂದಿರತಕ್ಕದ್ದು ನಮಗೆ ಆಲೋಚನೆ ಮಾಡಲು ಒಂದು ಅವಕಾಶ ಕಲ್ಪಿಸಿದೆ ಎಂದು ತಿಳಿಯಬಹುದು. 1956ನೇ ಇಸವಿಯಲ್ಲಿ ಈ ರಾಜ್ಯ ವಿಶಾಲವಾದಮೇಲೆ 1969ನೇ ಇಸವಿಯವರೆಗೂ ಅಂದರೆ 13 ವರ್ಷಗಳ ಕಾಲ ಸತತವಾಗಿ ಆ ಒಂದು ಪ್ರಯೋಗ ಅದನಂತರ, ಈಗ ವಿವೇಚನೆಯನ್ನು ಮಾಡಲಿಕ್ಕೆ ಶ್ರೀಮಾನ್ ಶ್ರೀಕಂಠಯ್ಯನವರು ಅವಕಾಶ ಮಾಡಿಕೊಟ್ಟಿದ್ದಾರೆ. ಆಗಿಂದಾಗ್ಗೆ ಇಂತಹ ಚರ್ಚೆಗಳು ಬರುವುದರಿಂದ ಕಣ್ಣುಬಿಟ್ಟು ನೋಡುವುದಕ್ಕಾದರೂ ಅವಕಾಶವಾಯಿತು. ಜವಾಬ್ದಾರಿಯಾದಂಥ ಮುಖಂಡರು ಇದುವರೆಗೆ ಕಣ್ಣು ತೆರೆಯಲಿಲ್ಲವೇ ಎನ್ನುವುದನ್ನು ತಿಳಿಯಬೇಕು. ಇದರಲ್ಲಿ ಇನ್ನೊಂದು ವಿಷಯವನ್ನು ಮಾತ್ರ ನಾನು ಸ್ಪಷ್ಟವಾಗಿ, ನಮ್ರತೆಯಿಂದ ತಿಳಿಸುತ್ತೇನೆ. ಅದೇನೆಂದರೆ ನಮ್ಮ ಸ್ನೇಹಿತರಾದಂಥ ಶ್ರೀಮಾನ್ ಶ್ರೀಕಂಠಯ್ಯನವರು, ಎಂ. ಎಸ್. ಕೃಷ್ಣನ್‌ರವರು ಮತ್ತು ಬಿ. ಪಿ. ಗಂಗಾಧರ್ ಇವರುಗಳ ಹಾಗೆ ನಾನು ಭಾಷಣ ಮಾಡುವ ಪ್ರವೀಣನಲ್ಲ. ಮತ್ತು ಅಂತಹ ಪ್ರವೀಣತೆಯಿಂದ, ಕಾರ್ಯಸಾಧನೆಯಾಗುವುದಿಲ್ಲ. ಸಾಮಾನ್ಯವಾಗಿ ಜ್ಞಾನಾರ್ಜನೆಯಿಂದ, ಪ್ರವೀಣತೆಯಿಂದ ನಮ್ಮ ಮನಸ್ಸಿಗೆ ಆದಂಥ ಪರಿಣಾಮದ ಮೇಲೆ ಈ ನಿರ್ಣಯವನ್ನು ಒಪ್ಪತಕ್ಕಂಥಾದ್ದು ಅಥವಾ ತಿರಸ್ಕಾರ ಮಾಡತಕ್ಕಂಥಾದ್ದು. ಇದನ್ನು ಸ್ಪಷ್ಟವಾಗಿ ತಿಳಿಸುವುದಕ್ಕೆ ಅಪೇಕ್ಷೆಪಡುತ್ತೇನೆ. ನಾನು ಈಗ ಒಬ್ಬ ಸಾಮಾನ್ಯ ಪ್ರಜೆಯಂತ ಮಾತನಾಡುತ್ತೇನೆ. ಈಗ ಬಂದಿರುವ ನಿರ್ಣಯ ಕನ್ನಡನಾಡು ಎಂಬ ಹೆಸರನ್ನು ಭಾಷೆಯ ಆಧಾರದಮೇಲೆ ಇಡಬೇಕು ಎನ್ನುವ ನಿರ್ಣಯ.

ಆ ನಿರ್ಣಯದ ಪರ ಅಥವಾ ವಿರೋಧ ಎನ್ನುವ ತೀರ್ಮಾನಮಾಡುವುದಕ್ಕೆ ಮುಂಚೆ ಸಾಮಾನ್ಯ ಪ್ರಜೆಯಂತೆ, ಒಬ್ಬ ಭಾರತೀಯನಾಗಿ, ಕನ್ನಡಿಗನಾಗಿ ಭಾಷಾವಾರು ಪ್ರಾಂತಗಳಾದ ನಂತರ ಏನಾಗಿದೆ, ಏನು ಆಗಬೇಕಾಗಿತ್ತು, ಮುಂದೆ ಏನಾಗಬಹುದು ಎನ್ನತಕ್ಕ ಒಂದು ಪ್ರಶ್ನೆಯನ್ನು ನಾನು ನೋಡುವುದಕ್ಕೆ ಪ್ರಯತ್ನಪಟ್ಟಿದ್ದೇನೆ ; ಒಬ್ಬ ಪ್ರಾಜ್ಞನಂತೆ ಅಲ್ಲ. ಇದರಲ್ಲಿರತಕ್ಕ ಭಾರೀ ಪ್ರಮುಖವಾಗಿರತಕ್ಕ ವಿಷಯವೆಂದರೆ ಭಾಷಾವಾರು ಪ್ರಾಂತ ರಚನೆಯಿಂದ ಏನೂ ಒಳ್ಳೆಯದಾಗಿಲ್ಲ. ಏನು ಒಳ್ಳೆಯದಾಗಿದೆ ಎನ್ನುವುದರಮೇಲೆ, ಪ್ರಜೆಯ ಮನೋಭೂಮಿಕೆಯಲ್ಲಿ ನಿರ್ಣಯದಪರ ಅಥವಾ ವಿರೋಧವಾಗಿ ಒಂದು ಅಭಿಪ್ರಾಯವನ್ನು ಸೂಚಿಸುವುದಕ್ಕೆ ತಯಾರಿಲ್ಲ. 1956ನೇ ಇಸವಿಯಲ್ಲಿ ರಾಜ್ಯಗಳಲ್ಲಿ ಪುನರ್ವಿಂಗಡಣೆಯಾದನಂತರದಿಂದ ಈವರೆಗೆ ಏನು ಒಳ್ಳೆಯದಾಗಿದೆ ಎಂದು ಹೇಳುತ್ತಿದ್ದೇನೆ. ಭಾಷಾವಾರು ಪ್ರಾಂತಗಳ ರಚನೆಯಿಂದ ಏನು ಒಳ್ಳೆಯದಾಗಿದೆ, ನಮಗೆ ಒದಗಿರತಕ್ಕ ಕಷ್ಟವೆಷ್ಟು, ಮುಂದೆ ಬರಬಹುದಾದ ಗಂಡಾಂತರಗಳೆಷ್ಟು, ಮುಂದೆ ಬರಬಹುದಾದ ಒಳ್ಳೆಯ ವಿಷಯಗಳೆಷ್ಟು, ಈ ಭಾಷಾವಾರು ಪ್ರಾಂತ ರಚನೆಯಿಂದ ಆಗಿರುವ ಪ್ರಯೋಜನವೆಷ್ಟು, ಆಗಿರತಕ್ಕ ಅಪ್ರಯೋಜನವೆಷ್ಟು, ಮುಂದೆ ಬರಬಹುದಾದ ಪ್ರಯೋಜನಗಳೆಷ್ಟು, ಕೆಡಕುಗಳೆಷ್ಟು, ಇವುಗಳನ್ನೆಲ್ಲ ಸ್ವಲ್ಪ ಭಾವುಕತೆಯನ್ನು ಬಿಟ್ಟು ನೋಡಬೇಕು. ಮಾನ್ಯ ಶ್ರೀಕಂಠಯ್ಯನವರಾಗಲೀ, ಮಾನ್ಯ ಗಂಗಾಧರ್

ಅವರಾಗಲೀ, ಮಾನ್ಯ ಕೃಷ್ಣನ್ ಅವರಾಗಲೀ ಕಾಲೇಜು ವ್ಯಾಸಂಗದಲ್ಲಿ ಏನೇನು ವಿಷಯಗಳನ್ನು ಆರಿಸಿಕೊಂಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ನಾನು ಐಚ್ಛಿಕ ಭಾಷೆಯಾಗಿ ಕನ್ನಡವನ್ನು ತೆಗೆದುಕೊಂಡು ದಿವಂಗತ ತೀ. ನಂ. ಶ್ರೀಕಂಠಯ್ಯ ಹಾಗೂ ಶ್ರೀಮಾನ್ ಪರಮೇಶ್ವರ ಭಟ್ಟರ ಬಳಿಯಲ್ಲಿ ಅಭ್ಯಾಸ ಮಾಡತಕ್ಕ ಸುಯೋಗ ವಿದ್ಯಾರ್ಥಿ ದೆಸೆಯಲ್ಲಿ ನನಗೆ ಲಭಿಸಿತ್ತು. ನನ್ನ ಬಗ್ಗೆ ಅವರು ಅಭಿಮಾನಪೂರ್ವಕವಾಗಿ ಕನ್ನಡದಲ್ಲಿ ನಾನು ಸ್ಪಷ್ಟವಾಗಿ ಮಾತನಾಡುತ್ತೇನೆ ಎನ್ನುವ ಅಭಿಪ್ರಾಯವನ್ನು ಇಟ್ಟುಕೊಂಡಿದ್ದರು. ರಾಜಕೀಯ ಸಂಪರ್ಕ ನನಗೆ ಬಂದಮೇಲೆ ನನ್ನ ಭಾಷೆ ಒರಟಾಗಿರಬಹುದು. ನಾನು ಮಾತನಾಡತಕ್ಕ ಕಾಲದಲ್ಲಿ ಕನ್ನಡ ಭಾಷೆಯನ್ನು ಕಂಡರೆ ಇವನಿಗೆ ದ್ವೇಷವಿದೆ ಎನ್ನುವ ಭಾವನೆ ಯಾರಿಗೂ ಬರಬಾರದು ಎಂದು ನಾನು ಮೊದಲೇ ಹೇಳುತ್ತೇನೆ. ಭಾಷೆಯ ಬಗ್ಗೆ ಪ್ರೇಮವಿರತಕ್ಕುದು ಭಾರಿ ಮುಖ್ಯವಾದುದು. ನಮ್ಮ ದಿನಚರಿಯ ರಾಜಕೀಯದಲ್ಲಿ, ನಮ್ಮ ಅಧಿಕಾರದ ಹೋರಾಟದ ಜೊತೆಗೆ ಭಾಷೆಯ ಹೆಸರನ್ನು ಬೆರೆಸಿ ನಾವೂ ಕೆಡುವುದರ ಜೊತೆಗೆ, ನಾವು ತಪ್ಪು ಮಾಡುವುದರ ಜೊತೆಗೆ ಭಾಷೆಗೆ ಮಸಿ ಬಳಿಯತಕ್ಕ ವ್ಯವಸ್ಥೆಯನ್ನು ನಾನು ಮೆಚ್ಚುವುದಿಲ್ಲ. ನಿರ್ಣಯದಮೇಲೆ ಮಾತನಾಡತಕ್ಕ ಕಾಲದಲ್ಲಿ ಯಾರಾದರೂ ಕೂಡ ಕನ್ನಡವನ್ನು ಕಂಡರೆ ನನಗೆ ಅಭಿಮಾನವಿಲ್ಲ ಎನ್ನುವ ಭಾವನೆಯನ್ನು ಮಾಡಬಾರದಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ನಮ್ಮ ಮುಂದೆ ಎರಡು ನಿರ್ಣಯಗಳಿವೆ. ''ಕನ್ನಡ ನಾಡು'' ಎಂಬ ಹೆಸರನ್ನು ಇಡಬೇಕು ಎನ್ನುವುದು ಮೂಲ ನಿರ್ಣಯ ''ಕರ್ಣಾಟಕ'' ಎಂಬ ಹೆಸರನ್ನು ಇಡಬೇಕು ಎನ್ನುವುದು ತಿದ್ದುಪಡಿ ನಿರ್ಣಯ. ಇದರಲ್ಲಿ ಒಂದು ಮಾತನ್ನು ಮಾತ್ರ ನಾನು ಹೇಳಬೇಕಾಗಿದೆ. ಭಾಷೆಯ ಆಧಾರದಮೇಲೆ ಭಾಷಾವಾರು ಪ್ರಾಂತಗಳನ್ನು ರಚನೆ ಮಾಡಿದಮೇಲೆ ಒಂದು ದೃಷ್ಟಿಯಿಂದ ನೋಡಿದಾಗ ಒಂದು ಅನಿಷ್ಟಕಾರಕ, ಪಾಪಕಾರಕ ಕಾರ್ಯ ರಾಷ್ಟ್ರದಲ್ಲಿ ನಡೆದುಹೋಯಿತೋ ಏನೋ ಎನ್ನುವ ಅಭಿಪ್ರಾಯ ನನಗೆ ಬಂತು. ಅದೇ ರೀತಿಯಾಗಿ ಹಿಂದೆರಡು ಪುಣ್ಯ ಕಾರ್ಯಗಳೂ ಆಗಿವೆ. ರಾಷ್ಟ್ರದ ಭಾವೈಕ್ಯತೆ ಸಾಧಕವಾಗುವಂಥ ಎರಡು ವಿಶಿಷ್ಟ ಸಂಗತಿಗಳು ನಮ್ಮ ರಾಷ್ಟ್ರದಲ್ಲಿ ಅನೇಕ ಕಷ್ಟಗಳುಂಟಾದರೂ ಕೂಡ ನಡೆದುಹೋದುವು. ಆ ಪುಣ್ಯ ಕಾರ್ಯಗಳು ಎಂದರೆ ಚೀಣಾ ದೇಶದವರು ನಮ್ಮಮೇಲೆ ಆಕ್ರಮಣ ನಡೆಸಿದ್ದು ಮತ್ತು ಪಾಕಿಸ್ತಾನದವರು ನಮ್ಮ ಮೇಲೆ ಆಕ್ರಮಣ ನಡೆಸಿದ್ದು. ಇದು ಒಳ್ಳೆಯ ಪುಣ್ಯಕಾರ್ಯ ಸ್ಮರಣೀಯಾಗಿದೆ ಇಡೀ ಭಾರತದ ಚಾರಿತ್ರ್ಯದಲ್ಲಿ ಎಂದು ನನ್ನ ಅಭಿಪ್ರಾಯ. ಈ ಕಾರ್ಯ ನಡೆದಾಗ ಭಾರತದಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ಕನ್ನಡಿಗನಾಗಲೀ, ತಮಿಳನಾಗಲೀ, ಯಾರೇ ಆಗಲಿ ಒಂದು ಭಾಷೆಯ ವ್ಯಕ್ತಿ ಎಂದು ಹೇಳದಂತೆ ಒಬ್ಬ ಇಡೀ ರಾಷ್ಟ್ರದ ವ್ಯಕ್ತಿ ಎಂದು ನಡೆದುಕೊಂಡು ಹೋಗಲು ಈ ಎರಡು ಪುಣ್ಯ ಕಾರ್ಯಗಳೂ ಸಹಾಯ ಮಾಡಿದುವು. ಈ ಸಂದರ್ಭದಲ್ಲಿ ಭೌತಿಕವಾಗಿ ಕಷ್ಟಕಾರ್ಪಣ್ಯಗಳೂ ನಷ್ಟಗಳೂ ಸಂಭವಿಸಿರಬಹುದು. ಆದರೆ ನಮ್ಮ ಭಾರತೀಯರ ಮನಸ್ಸಿನಲ್ಲಿ ನಾನು ಕನ್ನಡಿಗನಲ್ಲ, ತಮಿಳನಲ್ಲ, ಮಹಾರಾಷ್ಟ್ರೀಯನಲ್ಲ, ನಾನು ಒಬ್ಬ ಭಾರತೀಯ ಎಂದು ಸೂಚಿಸಲು ನೆರವಾದಂಥ ಎರಡು ಸಂದರ್ಭಗಳಾಗಿವೆ ಎಂದು ನಾನು ಬಹಳ ಹೆಮ್ಮೆಯಿಂದ ಸ್ಮರಿಸುವುದಕ್ಕೆ ಪ್ರಯತ್ನ ಪಡುತ್ತಿದ್ದೇನೆ. ಇದೇ ರೀತಿಯಲ್ಲಿ ಒಂದು ಅನಿಷ್ಟಕಾರಕ, ಒಂದು ಪಾಪಕಾರಕ ಕಾರ್ಯ ನಡೆದು ಹೋಯಿತೋ ಏನೋ ಎನ್ನುವ ಅನುಮಾನವನ್ನೂ ನಾನು ವ್ಯಕ್ತಪಡಿಸಿದೆ. ಅದು ಭಾಷಾವಾರು ಪ್ರಾಂತ ರಚನೆಯ ಒಂದು ವಿಶೇಷ ಎನ್ನುವುದನ್ನು ಭಾರೀ ದುಃಖದಿಂದ, ವಿಷಾದದಿಂದ ನಾನು ಹೇಳಬೇಕಾಗಿದೆ. ಏನು ಕಾರಣದಿಂದ ನಾನು ಈ ಅಭಿಪ್ರಾಯಕ್ಕೆ ಬಂದೆ ಎನ್ನುವುದನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಭಾಷಾವಾರು ಪ್ರಾಂತ ರಚನೆಯಾಗಬೇಕೆಂದು ಅದರ ಪರವಾಗಿ ಹೋರಾಟ ನಡೆಸಿದಂಥವರೇ ಸಂಪೂರ್ಣವಾಗಿ ನಡೆಸಲಿಲ್ಲ. ಇದರಲ್ಲಿ ರೀಸನಬಲ್ ಅಂಡ್ ಸೆಂಟಿಮೆಂಟಲ್ ಎಂದು ಏನು ಹೇಳುತ್ತಾರೆ, ಹಾಗೆ ಸೆಂಟಿಮೆಂಟಲ್ ಆಗಿ ಹೋರಾಟ ನಡೆಯಿತೋ ಏನೋ ಎನ್ನುವ ಅಪ ಧೈರ್ಯ ಬರುತ್ತಿದೆ. ಭಾಷೆಯ ವ್ಯಾಮೋಹದಿಂದ ದಿನಚರಿಯಲ್ಲಿ ಬರತಕ್ಕ ಕಷ್ಟ ಕಾರ್ಪಣ್ಯಗಳನ್ನು ಮರೆತು, ಜನ ಹಿತವನ್ನು ಮರೆತು, ಭಾವಪರತೆಯಿಂದ ಇದು ಉಂಟಾಯಿತೋ ಏನೋ ಎಂದು 13 ವರ್ಷಗಳ ಚರಿತ್ರೆಯನ್ನು ಅವಲೋಕಿಸಿದರೆ ನನ್ನ ಮನಸ್ಸಿಗೆ ಬರುತ್ತದೆ. ಭಾಷಾವಾರು ಪ್ರಾಂತ ರಚನೆಯಾದನಂತರ ಭಾಷೆಯ ಬಗ್ಗೆ ಅಭಿಮಾನವೇ ಹೊರಟು ಹೋಯಿತೋ ಏನೋ ಎಂದೆನ್ನಿಸುತ್ತದೆ. ನಾನು ಏಕೆ ಈ ಮಾತನ್ನು ಹೇಳಬೇಕಾಯಿತು ಎಂದರೆ ಭಾಷಾವಾರು ಪ್ರಾಂತಗಳ ರಚನೆಗೆ ಮುಂಚೆ ಭಾಷೆಯ ಬಗ್ಗೆ ಯಾವ ಉತ್ತೇಜನ, ಯಾವ ಉತ್ಸಾಹ ಇತ್ತೋ ಅದು ಈಗ ಕಾಣಬರುತ್ತಿಲ್ಲ. ಕನ್ನಡ ಎಂದ ಕೂಡಲೇ ನಮಗೆಲ್ಲಾ ಕು.ವೆಂ.ಪು., ಬೇಂದ್ರೆ, ಮಾಸ್ತಿ, ಕಾರಂತ, ಇವರ ನೆನಪು ಬರುತ್ತಿತ್ತು ನಮ್ಮ ವಿದ್ಯಾರ್ಥಿ ದೆಸೆಯಲ್ಲಿ. ಈ ಹೊತ್ತು ಕನ್ನಡವೆಂದರೆ ಪರ ಭಾಷೆಯನ್ನು ಟೀಕಿಸುವುದು, ಬೀದಿಯಲ್ಲಿ ಹೋಗುವಾಗ ಪರಭಾಷಾ ಚಿತ್ರಗಳು ನಡೆಯುವ ಸಿನಿಮಾ ಕಟ್ಟಡಗಳಮೇಲೆ ಕಲ್ಲು ಹೊಡೆಯು

(ಶ್ರೀ ಎಚ್. ಎನ್. ನಂಜೇಗೌಡ)

ವುದು ಇವೆಲ್ಲ ನೆನಪಿಗೆ ಬರುತ್ತವೆ. ಕನ್ನಡ, ಕನ್ನಡ ನಾಡು ಎಂದಕೂಡಲೇ ಕು.ವೆಂ.ಪು. ಅವರು ಕನ್ನಡಿಗರು ಎನ್ನಿಸುತ್ತಿತ್ತು, ಮಾಸ್ತಿಯವರು ಕನ್ನಡಿಗರು ಎಂದನ್ನಿಸುತ್ತಿತ್ತು, ಇಂಥ ಭಾವನೆಗಳು ಬರುತ್ತಿದ್ದುವು. ಆದರೆ ಈಗ ಲಿಂಗಾಯಿತ, ಒಕ್ಕಲಿಗ ಎಂಬ ಭಾವನೆಗಳು ಬರುವುದಕ್ಕೆ ಪ್ರಾರಂಭವಾಗಿವೆ. ಇದ್ದುದನ್ನು ಇದ್ದಹಾಗೆ ಅರ್ಥ ಮಾಡಿಕೊಳ್ಳತಕ್ಕ ಧೈರ್ಯ ಬೇಕು ಎಂದು ನಾನು ಮಾನ್ಯ ಸಭೆಯ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಮೊದಲು ಭಾಷಾವಾರು ಪ್ರಾಂತ ರಚನೆಯಾಗುವುದಕ್ಕೆ ಮುಂಚೆ ಸಿನಿಮಾ ಮಂದಿರಗಳಮೇಲೆ ಕಲ್ಲುಗಳನ್ನು ಎಸೆದರು ಎಂದು ಕೇಳಿಬಂತು, ಬೊಂಬಾಯಿನಲ್ಲಿ ಶಿವಸೇನೆಯವರು ಧಾಳಿ ಮಾಡಿದರು, ಸೌಜನ್ಯ ಮೀರಿ ನಡೆದುಕೊಂಡರು ಎಂದು ಕೇಳಿಬಂತು. ಇದೇ ರೀತಿಯಲ್ಲಿ ಹಿಂದಿ ಮಾತನಾಡುವವರು ಹಿಂದಿಯೇತರರಮೇಲೆ ಧಾಳಿ ಮಾಡಿದ್ದಾರೆ. ಆದರೆ ಪಂಡಿತ ನೆಹರೂರವರು ಭಾಷಾವಾರು ಪ್ರಾಂತ ರಚನೆ ಮಾಡಬೇಕೆಂದು ಹೇಳಿದ ಉದ್ದೇಶವೇ ಬೇರೆ. ರಾಷ್ಟ್ರದ ಐಕ್ಯತೆಗೆ ಅದರಿಂದ ನೆರವಾಗಬೇಕು, ಅವಕ್ಕೆ ಪೂರಕವಾಗುವುದು ಎಂದು ಆ ಮಹಾ ಉದ್ದೇಶದಿಂದ ದಿವಂಗತ ನೆಹರೂರವರು ಭಾಷಾವಾರು ಪ್ರಾಂತ ರಚನೆಯಾಗಬೇಕೆಂದು ಹೇಳಿದರು. ಆದರೆ ಆ ಉದ್ದೇಶ ಎಷ್ಟುಮಟ್ಟಿಗೆ ಸಾಧಿಸಲ್ಪಟ್ಟಿದೆ ಎಂಬುದನ್ನು ನೋಡಬೇಕು. ಯೂನಿಟಿ ಮತ್ತು ಸೆಕ್ಯೂರಿಟಿ ಇರಬೇಕೆಂಬುದೇ ಅವರ ಮುಖ್ಯೋದ್ದೇಶವಾಗಿತ್ತು. ಇಡೀ ಇಂಡಿಯಾದಲ್ಲೆಲ್ಲಾ ಐಕ್ಯತೆ ಇರಬೇಕು, ಎಲ್ಲರೂ ಸೌಜನ್ಯದಿಂದ ನಡೆದುಕೊಳ್ಳಬೇಕು, ದೇಶದಲ್ಲಿ ಒಂದು ಒಳ್ಳೆಯ ವಾತಾವರಣ ಉಂಟಾಗಬೇಕು, ಯಾರ ಆಸ್ತಿಪಾಸ್ತಿಗೂ ಧಕ್ಕೆ ಉಂಟಾಗಬಾರದು ಎಂಬ ಘನೋದ್ದೇಶದಿಂದ ಭಾಷಾವಾರು ಪ್ರಾಂತಗಳು ರಚನೆಯಾದುವು. ರಾಷ್ಟ್ರದ ಐಕ್ಯತೆಯನ್ನು ದೃಷ್ಟಿಯಲ್ಲಿಟ್ಟು ರೀ ಆರ್ಗನೈಜೇಷನ್ ಮಾಡಿದರು. ಭಾಷೆಯ ಬಗ್ಗೆ ನನಗೂ ಗೌರವವುಂಟು. ರಾಷ್ಟ್ರವನ್ನು ಪುನರ್ವಿಂಗಡಣೆ ಮಾಡುವಾಗ ಬಹಳ ಪ್ರಾಮುಖ್ಯವಾಗಿದ್ದ ಉದ್ದೇಶ ರಾಷ್ಟ್ರವನ್ನು ದಷ್ಟಪುಷ್ಟವಾಗಿ ಬೆಳೆಸಬೇಕು, ಜಾತಿಗಳ ಗೊಂದಲಕ್ಕೆಡೆಕೊಡಬಾರದು, ಭಾವೈಕ್ಯ ಸಾಧನೆಯಾಗಬೇಕು ಎಂಬ ಉದ್ದೇಶವಿತ್ತು. ಅದಕ್ಕೆ ಪೂರಕವಾಗಬಹುದು ಎಂದು ಒಂದು ಪ್ರಯೋಗ ನಡೆಯಿತು. ಆದರೆ ದುರದೃಷ್ಟವಶಾತ್ ಈ ಪ್ರಯೋಗ ಅನಿಷ್ಟಕಾರಕವಾಯಿತು. ಕೈಕಾಲು, ತಲೆ, ಮೂಗು ಸ್ಪಷ್ಟವಾಗಿರುವ ಒಂದು ಮಗು ಹುಟ್ಟುವುದಕ್ಕೆ ಬದಲಾಗಿ ಒಂದು ಭೂತ ಜನನವಾದ ಹಾಗಾಯಿತು. ಇದನ್ನು ನೋಡಿ ವಿಷಾದವಾಗುತ್ತಿದೆ.

ಸ್ವಾಮಿ, ನಾನು ಎಷ್ಟೋ ಜನ ಸಾಹಿತಿಗಳೊಡನೆ ಮಾತನಾಡಿದ್ದೇನೆ. ಅವರು ದುಃಖಪಡುತ್ತಿದ್ದಾರೆ. ನನಗೆ ಸಾಹಿತಿಗಳ ಸ್ನೇಹವಿಲ್ಲದಿದ್ದರೂ ಕೂಡ ಅವರ ಸಂಪರ್ಕವುಂಟು. ನಾನು ವಿದ್ಯಾರ್ಥಿಯಾಗಿದ್ದಾಗ ಹಾಸನದಲ್ಲಿ ಕರ್ಣಾಟಕ ಸಂಘಕ್ಕೆ ಸೆಕ್ರೆಟರಿಯಾಗಿದೆ. ಆಗ ಸುಮಾರು 52 ಸಾಹಿತಿಗಳು ಒಂದೂವರೆ ವರ್ಷದಲ್ಲಿ ಹಾಸನಕ್ಕೆ ಬಂದಿದ್ದರು, ಅವರ ನುಡಿಮುತ್ತುಗಳನ್ನು ಕೇಳುವ ಸೌಲಭ್ಯ ನನಗೆ ದೊರಕಿತ್ತು. ಇಂದು ಅವರು ಬಹಳವಾಗಿ ನೊಂದುಕೊಳ್ಳುತ್ತಿದ್ದಾರೆ, ಏಕೆಂದರೆ ಇಂದೇನು ನಡೆಯುತ್ತಿದೆಯೆಂಬುದನ್ನು ಅವರು ಕಣ್ಣು ಬಿಟ್ಟು ನೋಡುತ್ತಿದ್ದಾರೆ. ಮನನೊಂದು ಕೆಲವರು ಇಂದೇಕೆ ಭಾಷಾವಾರು ಪ್ರಾಂತಗಳ ರಚನೆಯಾಯಿತೆಂದು ತಳಮಳವನ್ನು ವ್ಯಕ್ತಮಾಡುತ್ತಿದ್ದಾರೆ. ಈಗ ಭಾಷಾವಾರು ಪ್ರಾಂತಗಳಿಂದ ರಾಷ್ಟ್ರದ ಐಕ್ಯತೆಗೆ ಧಕ್ಕೆ ಬರುತ್ತಿದೆ, ಪ್ರಜಾಪ್ರಭುತ್ವಕ್ಕೆ ಧಕ್ಕೆ ಬರುತ್ತಿದೆ. ಆರ್ಥಿಕೋನ್ನತಿಯಾಗುವ ಬದಲು ಜಾತೀಯತೆ ತಲೆದೋರಿ ಜನತೆಗೆ ಅನ್ಯಾಯವಾಗುತ್ತಿದೆ ಎಂಬ ಭಾವನೆ ಜನರಲ್ಲಿ ಮೂಡುತ್ತಿದೆ. ಹೀಗಾದರೆ ಪ್ರಜಾಪ್ರಭುತ್ವ ಬೆಳೆಯುವುದಿಲ್ಲ. ಭಾಷಾವಾರು ಪ್ರಾಂತವಾದಮೇಲೆ ರಾಜ್ಯದ ಬೆಳವಣಿಗೆ ಕುಂಠಿತವಾಗಿದೆ. ಇದನ್ನು ಒಪ್ಪಬಹುದು ಅಥವಾ ಒಪ್ಪದಿರಬಹುದು. ಆದರೆ ಇದರಲ್ಲಿ ನಿಜಾಂಶವಿದೆ. ಒಂದೇ ಭಾಷೆಯವರೆಲ್ಲಾ ಒಂದು ಕಡೆ ಸೇರಿದಾಗ ಅಲ್ಪ ಸಂಖ್ಯಾತರು ಮೊದಲುಗೊಂಡು ಎಲ್ಲರಿಗೂ ಸಮಾನವಾದ ಸಹಾಯ ಸೌಲಭ್ಯ ದೊರೆಯಬೇಕಾಗಿತ್ತು. ಆದರೆ ಹಾಗೆ ದೊರೆಯಲಿಲ್ಲ. ಅಂದಾಜು ಸಮಿತಿ ಸದಸ್ಯನಾಗಿ ನಾನು ಕೆಲವು ಕಡೆ ಪ್ರವಾಸ ಹೋಗಿದ್ದೆ. ಭಿಲಾಯ್, ದುರ್ಗಾಪುರ ಮುಂತಾದ ಕಡೆಗಳಿಗೆ ಹೋಗಿದ್ದೆ. ಅಲ್ಲಿ ಕನ್ನಡಿಗರನೇಕರು ನೌಕರಿಯಲ್ಲಿದ್ದಾರೆ ರಾಜ್ಯ ಪುನರ್ವಿಂಗಡಣೆ ಆದಮೇಲೆ ನಮಗೆ ಕಷ್ಟ ಹೆಚ್ಚಾಗಿದೆ ಎಂದು ಅವರು ಹೇಳುತಾರೆ. ಏಕೆ ? ಬೇರೆ ಭಾಷೆಯವರೇಕೆ ಇತರ ರಾಜ್ಯಗಳಲ್ಲಿ ಕೆಲಸದಲ್ಲಿರಬೇಕು ಎಂದು ಜನರು ಹೋರಾಟ ಆರಂಭಿಸಿದ್ದಾರೆ. ಇದು ತಪ್ಪು ಎಂದು ಹೇಳುವುದಿಲ್ಲ. ಹಿಂದೆ ಕೇಂದ್ರ ಸರ್ಕಾರದ ಅನೇಕ ಕೈಗಾರಿಕೆಗಳೇನು ನಮ್ಮ ರಾಜ್ಯದಲ್ಲಿವೆ ಅಲ್ಲಿ ಕನ್ನಡಿಗರಿಗೆ ಬಹುಭಾಗದ ಕೆಲಸಗಳನ್ನು ಕೊಡಬೇಕೆಂದು

ನಾನೇ ಹೇಳಿದ್ದೆ. ಅದರಿಂದ ಹೆಚ್ಚು ಲಾಭವಾಗಬಹುದು. ಕನ್ನಡಿಗರಿಗೆ ಮೈಸೂರು ರಾಜ್ಯದಲ್ಲಿರುವ ಕೇಂದ್ರದ ಕೈಗಾರಿಕೆಗಳಲ್ಲಿ ಕೆಲಸ ಸಿಕ್ಕಿದರೆ ನಿರುದ್ಯೋಗ ಸಮಸ್ಯೆ ಪರಿಹಾರವಾಗಬಹುದು. ಆದರೆ ಅದಕ್ಕೆ ಸಂತೋಷಪಡುವುದಿಲ್ಲ.

ಏಕೆಂದರೆ ನನ್ನ ಪ್ಲಾನ ಸದಸ್ಯನಾಗಿದ್ದಾಗ ಏನಿತ್ತೋ ಅದಕ್ಕಿಂತ ಈಗ ಸ್ವಲ್ಪ ಬೆಳೆದಿದೆ. ಇವತ್ತು ಈ ನೀತಿಯನ್ನನುಸರಿಸಿ ಈ ರಾಷ್ಟ್ರದಲ್ಲಿ ಭಾವೈಕ್ಯವಾಗಲಿಕ್ಕೆ ಸಾಧ್ಯವಿಲ್ಲ, ಕನ್ನಡ ದೇಶದಲ್ಲಿ ಇತರ ಭಾಷೆ ಆಡತಕ್ಕ ಜನ ಇರಕೂಡದು ಎಂದರೆ ಬೇರೆ ರಾಜ್ಯದಲ್ಲಿ ಕನ್ನಡ ಮಾತನಾಡತಕ್ಕ ಜನ ಭಿಲಾಯಿನಲ್ಲಿರಬಹುದು, ದುರ್ಗಾಪುರದಲ್ಲಿರಬಹುದು ಅವರು ಅಲ್ಲಿ ಇರಕೂಡದು ಅಂತ ಬರುತ್ತದೆ. ಪಾಪ ಹೊರಗಡೆ ಇರತಕ್ಕ ಆ ಜನ ಅನೇಕರು ಈ ಒಂದು ಪರಿಸ್ಥಿತಿಯನ್ನು ತಿಳಿಸಿ ಕಣ್ಣಿನಲ್ಲಿ ನೀರು ಸುರಿಸಿದರು, ಈ ಭಾಷಾವಾರು ಪ್ರಾಂತ ರಚನೆಯಾಗುವುದಕ್ಕೆ ಮುಂಚೆ ನಮ್ಮ ಹೆಂಡರು ಮಕ್ಕಳು ಸುರಕ್ಷಿತವಾಗಿದ್ದರು ಇವತ್ತು ಕಚೇರಿಗಳಿಗೆ ಹೋಗಿದ್ದವರು ಮನೆಗೆ ವಾಪಸು ಹೋಗುವ ಹೊತ್ತಿಗೆ ಏನು ಗಂಡಾಂತರ ಕಾದಿರುತ್ತದೆಯೋ ಗೊತ್ತಾಗುವುದಿಲ್ಲ ಎಂದು ಹೇಳಿ ವ್ಯಸನವನ್ನು ವ್ಯಕ್ತಪಡಿಸಿದರು. ಆದರೆ ಒಂದು ಮಾತನ್ನು ಒಪ್ಪಿಕೊಳ್ಳುತ್ತೇನೆ, ಕನ್ನಡಿಗರಲ್ಲಿ ಸೌಜನ್ಯತೆ ಇದೆ, ಇದೇಒಂದು ಸೌಜನ್ಯತೆಯನ್ನು ಇತರ ಜನ ಉಳಿಸಿಕೊಂಡಿಲ್ಲ ಬಹಳ ಆಕ್ರೋಷದಿಂದ ವರ್ತನೆ ಮಾಡಿದ್ದಾರೆ ಎಂಬುದನ್ನು ಅಷ್ಟೇ ಶೋಚನೀಯವಾಗಿ, ವಿಷಾದದಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ.

4-30 P.M.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಸ್ವಲ್ಪ ಜಾಗ್ರತೆಯಾಗಿ ಭಾಷಣ ಮುಗಿಸಬೇಕು.

ಶ್ರೀ ಎಚ್. ಎನ್. ನಂಜೇಗೌಡ.—ನನಗೆ ಇನ್ನೂ ಎರಡು ಮೂರು ಗಂಟೆಗಳ ಕಾಲವಾದರೂ ಕೊಡಬೇಕು.

ಉಪಾಧ್ಯಕ್ಷರು.—ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ ಅಷ್ಟೊಂದು ಕಾಲ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಇದು ಬಹಳ ಪ್ರಾಮುಖ್ಯವಾದ ವಿಷಯ ಎಂಬುದು ಸಭೆಗೆ ಗೊತ್ತಿದೆ. ಮಾನ್ಯ ಶ್ರೀಕಂಠಯ್ಯನವರು ಈ ನಿರ್ಣಯವನ್ನು ತಂದಾಗ ಅವರು ಹೇಳುವುದನ್ನೆಲ್ಲಾ ಸಂಪೂರ್ಣವಾಗಿ ಕೇಳಿ ತಿಳಿದುಕೊಂಡಿದ್ದೇವೆ. ಎಷ್ಟು ಜನ ಈ ಸಭೆಯಲ್ಲಿ ಮಾತನಾಡುವುದಕ್ಕೆ ಉದ್ದೇಶ ಪಟ್ಟಿದ್ದಾರೋ ಅವರೆಲ್ಲರಿಗೂ ಅವಕಾಶ ದೊರಕಿಸಿ ಕೊಡಬೇಕೆಂಬುದನ್ನು ಮಾನ್ಯ ಸ್ಪೀಕರ್‌ರವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಮಾನ್ಯ ನಂಜೇಗೌಡರಾಗಲಿ ಇತರ ಮಾನ್ಯ ಸದಸ್ಯರಾಗಲಿ ಅವರ ಅಭಿಪ್ರಾಯಗಳನ್ನು ಹೇಳಬೇಕೆಂದಿರುವಾಗ ಅವರಿಗೆ ಪೂರ್ಣ ಕಾಲಾವಕಾಶ ಕೊಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷರು.—ಇನ್ನೂ ಮಾತನಾಡುವ ಸದಸ್ಯರು ಇರುವುದರಿಂದ ಜಾಗ್ರತೆ ಮುಗಿಸಿ ಅಂತ ಹೇಳಿದೆ ಅಷ್ಟೆ.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಬಹಳ ಬೇಗ ಎಂದರೆ ಎರಡು ಮೂರು ಗಂಟೆಯಲ್ಲಿ ಮುಗಿಸುವುದಕ್ಕೆ ಪ್ರಯತ್ನಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಪ್ರಜಾಪ್ರಭುತ್ವದ ಯಶಸ್ಸಿಗೆ ಭಾಷಾವಾರು ಪ್ರಾಂತ್ಯ ರಚನೆಯಿಂದ ಧಕ್ಕೆಯಾಗುತ್ತಾ ಇದೆ ಎಂದು ಹೇಳುತ್ತಾ ಇದ್ದೆ. ಏಕೆಂದರೆ ಪ್ರಜಾಪ್ರಭುತ್ವದ ಯಶಸ್ಸಿಗೆ ಇದರಿಂದ ಹೆಚ್ಚಿನ ಅನುಕೂಲವಾಗುತ್ತದೆ, ರಾಷ್ಟ್ರದ ಐಕ್ಯತೆಗೆ ಹೆಚ್ಚು ಸಹಾಯವಾಗುತ್ತದೆ ಎಂಬ ಉದ್ದೇಶದಿಂದ ಈ ಭಾಷಾವಾರು ಪ್ರಾಂತ ರಚನೆಯಾಯಿತು, ಆದರೆ ಅದು ಈಗ ಸಾಧ್ಯವಾಗಲಿಲ್ಲವಲ್ಲಾ ಎಂಬ ಒಂದು ದುಃಖದ ಸಂಗತಿಯನ್ನು ಭಾರಿ ದುಃಖದಿಂದ ಒಪ್ಪಿಕೊಳ್ಳಬೇಕಾಗಿದೆ. ಒಂದು ರಾಜ್ಯಾಂಗದ ಅಡಿಯಲ್ಲಿ ಕೆಲಸ ಮಾಡತಕ್ಕ ಈ ಒಂದು ಪ್ರಜಾಪ್ರಭುತ್ವದ ಪದ್ಧತಿಗೆ ಒಗ್ಗದೆ ಇರತಕ್ಕ ಕೆಲವಾರು ಪಕ್ಷಗಳು ಉದ್ಭವವಾಗುವುದಕ್ಕೆ ಇದು ಕಾರಣವಾಯಿತು. ಇವತ್ತು ಭೀಮಸೇನೆ ಅಂತ ಹೇಳುತ್ತಾರೆ, ಶಿವಸೇನೆ ಅಂತ ಹೇಳುತ್ತಾರೆ, ಬಸವಸೇನೆ ಅಂತ ಹೇಳುತ್ತಾರೆ, ಒಕ್ಕಲಿಗ ಸೇನೆ, ಲಿಂಗಾಯಿತ ಸೇನೆ ಆಗುವುದರಲ್ಲಿ ಇವೆಯೋ ಏನೋ ಗೊತ್ತಿಲ್ಲ, ಇಂತಹ ಸೇನೆಗಳ ಒಂದು ಹುಚ್ಚಾಟಕ್ಕೆ ಈ ಭಾಷಾವಾರು ಪ್ರಾಂತ ರಚನೆಯಾದನಂತರ ಅವಕಾಶವಾಯಿತಲ್ಲಾ ಎಂದು ನನ್ನ ಮನಸ್ಸಿನಲ್ಲಿ ದುಃಖವುಂಟಾಗುತ್ತಾ ಇದೆ. ಕೆಲವರು ರಾಜ್ಯಾಂಗಕ್ಕೆ ವಿರೋಧವಾದ, ಪ್ರಜಾಪ್ರಭುತ್ವ ಪದ್ಧತಿಗೆ ಒಗ್ಗದ, ಹೇಳುವುದಕ್ಕೂ ನಾಚಿಕೆಯಾಗತಕ್ಕ ಕೆಲಸಗಳನ್ನು ಮಾಡಿದ್ದು ತಮ್ಮ ನೆನಪಿನಲ್ಲಿ

(ಶ್ರೀ ಎಚ್. ಎನ್. ನಂಜೇಗೌಡ)

ಇರಬಹುದು. ರಾಜ್ಯಾಂಗವನ್ನು ಸುಟ್ಟಂಥ ಪಕ್ಷಗಳು ಈ ರಾಜ್ಯದಲ್ಲಿ ಬೆಳೆದಿವೆ, ರಾಜ್ಯಾಂಗವನ್ನು ಸುಟ್ಟದ್ದನ್ನು ನೋಡಿಕೊಂಡು ಲಕ್ಷಾಂತರ ಜನ, ಬೆಂಕಿ ಹಚ್ಚುವವರು ಹಚ್ಚಲಿ ನಮಗೇನು ಅಂತ ಹೇಳಿ ನಗುತ್ತಾ ಇದ್ದುದನ್ನು ನಾವು ನೋಡಿದ್ದೇವೆ. ಎಂದರೆ ಈ ಪ್ರಜಾಪ್ರಭುತ್ವದಲ್ಲಿ ರಾಜ್ಯಾಂಗವನ್ನು ಸುಟ್ಟರೆ ಅದನ್ನು ನೋಡಿ ಸಂತೋಷಪಡತಕ್ಕ ಒಂದು ಭಾವಪ್ರೇರಿತವಾದಂತಹ ಮನಸ್ಸು ಈ ಭಾಷಾವಾರು ಪ್ರಾಂತ ರಚನೆಯಿಂದಾಗಿ ರೂಢಿತವಾದಂತಾಯಿತು. ಇದಕ್ಕಿಂತ ದುರ್ದೈವದ ಸಂಗತಿ ಬೇಕೇ? ಇವತ್ತು ಎಲ್ಲರಲ್ಲೂ ಸೇನೆಗಳನ್ನು ಮಾಡಿಕೊಳ್ಳುವ ಅವಕಾಶ ಯಾವಾಗ ಉಂಟಾಯಿತೋ ನಾನು ಮೊದಲೇ ಹೇಳಿದಹಾಗೆ ರಾಜ್ಯಾಂಗದಲ್ಲಿ ಅವಕಾಶವಿದೆಯಲ್ಲಾ ಅದನ್ನು ಪಯೋಗಿಸಿ ಆ ಸೇನೆಗಳನ್ನು ಏಕೆ ನಿರ್ಮೂಲ ಮಾಡಬಾರದಾಗಿತ್ತು ಎಂಬ ಪ್ರಶ್ನೆಯನ್ನು ಯಾರಾದರೂ ಕೇಳಬಹುದು. ಸ್ವಾಮಿ, ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ, ನಾವು ಪ್ರಜಾಪ್ರಭುತ್ವದಲ್ಲಿದ್ದೇವೆ, ಪ್ರಜಾಪ್ರಭುತ್ವದಲ್ಲಿ ಬಹುಮತದ ಅಭಿಪ್ರಾಯಕ್ಕೆ ಮನ್ನಣೆ ಇದೆ. ಈ ಸಭೆಯಲ್ಲೂ ಕೂಡ ಬಹುಮತ ಯಾವ ರೀತಿ ಅಭಿಪ್ರಾಯ ಬರುತ್ತದೆಯೋ ಅದಕ್ಕೆ ಓಟು ಕೊಡಬೇಕಾಗುತ್ತದೆ ಏಕೆಂದರೆ ನಾವು ಪ್ರಜಾಪ್ರಭುತ್ವದ ಪದ್ಧತಿಯಲ್ಲಿದ್ದೇವೆ. ಆದರೆ ರಾಜಕೀಯ ಕಾರಣಗಳಿಗಾಗಿ ನಮ್ಮ ಬೇಳೆ ಬೇಯಿಸಿಕೊಳ್ಳುವುದಕ್ಕಾಗಿ ಅಂತಹ ಒಂದು ಕ್ಷುಲ್ಲಕವಾದಂತಹ ಪಕ್ಷಗಳಿಗೆ, ಕ್ಷುಲ್ಲಕವಾದ ಆರ್ಗನೈಸೇಷನ್‌ಗಳಿಗೆ ಆಶೀರ್ವಾದ ಮಾಡಿಕೊಂಡು ಬರುವುದಕ್ಕೆ ಎಡೆ ಕೊಟ್ಟಿದ್ದೇವೆ. ಇವತ್ತು ನಾನು ಮೊದಲು ಹೇಳುತ್ತಾ ಇದ್ದೆ ಶಿವಸೇನೆಯವರು ಕನ್ನಡಿಗರನ್ನು ಬಗ್ಗುಬಡಿದರು ಎಂದು. ಈ ಶಿವಸೇನೆ ಏನಿದೆಯೋ ಇದನ್ನು ರಾಜ್ಯಾಂಗ ಬಾಹಿರ ಸಂಸ್ಥೆ ಎಂದು ಹೇಳಿ ತೀರ್ಮಾನಮಾಡಿ ಮಹಾರಾಷ್ಟ್ರ ಸರ್ಕಾರದವರು ರಾಜ್ಯಾಂಗದತ್ತವಾದ ಅಧಿಕಾರವನ್ನು ಚಲಾಯಿಸಿ ಇದನ್ನು ಬಗ್ಗುಬಡಿಯಬಹುದಾಗಿತ್ತು, ಆದರೆ ಬಹುಮತದ ಅಭಿಪ್ರಾಯಗಳಿಗೆ ಅನುಗುಣವಾಗಿ ಮಹಾರಾಷ್ಟ್ರದಲ್ಲಿ ಅಧಿಕಾರರೂಢವಾಗಿರತಕ್ಕ ಜನ ಅದನ್ನು ಆಶೀರ್ವಾದ ಮಾಡಿಕೊಂಡು ಬಂದು, ತಮ್ಮ ಸ್ವಂತ ಅನುಕೂಲಕ್ಕೆ, ತಮ್ಮ ಅಧಿಕಾರದ ಚ್ಯುತಿಯನ್ನು ತಡೆದುಕೊಳ್ಳುವುದಕ್ಕೆ, ತಮ್ಮ ಅಧಿಕಾರವನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಈ ಪ್ರಜಾವಿರೋಧಿ ಚಟುವಟಿಕೆಗೆ ಆಶ್ರಯ ಮಾಡಿಕೊಟ್ಟಂಥ ಒಂದು ಪರಿಸ್ಥಿತಿ ಇವತ್ತು ಬಂದಿದೆ. ಇವತ್ತು ಹೇಳುತ್ತೇನೆ ರಾಷ್ಟ್ರೀಯ ಮಟ್ಟದ ವ್ಯಕ್ತಿಗಳು ಯಾರ್ಯಾರು ಇದ್ದಾರೆ ಇದು ಕೆಟ್ಟದ್ದು ಅಂತ ಹೇಳಿ ಅವರೆಲ್ಲರಿಗೂ ಗೊತ್ತಿದೆ. ಆದರೆ ರಾಜಕೀಯ ಕಾರಣಗಳಿಗಾಗಿ ಇದನ್ನು ಇಟ್ಟುಕೊಂಡು ಬಂದಿದ್ದಾರೆ, ಪ್ರೋತ್ಸಾಹಿಸಿಕೊಂಡು ಬಂದಿದ್ದಾರೆ. ಇದರಿಂದ ಭಾಷೆಗೂ ಏನೂ ಅನುಕೂಲವಾಗುವುದಿಲ್ಲ, ರಾಷ್ಟ್ರಕ್ಕೂ ಏನೂ ಅನುಕೂಲವಾಗುವುದಿಲ್ಲ, ಇವತ್ತಿನ ಪರಿಸ್ಥಿತಿ ಏನಾಗಿದೆಯೆಂದರೆ ಬಹುಭಾಷಾ ಸಂಖ್ಯಾತರು ಅಲ್ಪಭಾಷಾ ಸಂಖ್ಯಾತರಮೇಲೆ ಧಾಳಿ ಮಾಡಬಹುದು, ಬಹುಭಾಷಾ ಸಂಖ್ಯಾತರು, ಅಲ್ಪಭಾಷಾ ಸಂಖ್ಯಾತರ ಮೇಲೆ ದಾಂಧಲೆ ಮಾಡಬಹುದು ಅನ್ನತಕ್ಕ ಒಂದು ತತ್ವ ರೂಢಿತವಾಯಿತು. ಭಾಷಾ ಬೆಳವಣಿಗೆಗೆ ಬಹುಭಾಷಾ ಸಂಖ್ಯಾತರಾಗಿರತಕ್ಕವರಿಗೆ ಒಂದು ಭೂಮಿಕೆಯನ್ನು ಒದಗಿಸಿಕೊಟ್ಟರೆ ಅನುಕೂಲವಾದೀತು ಎಂಬ ಒಂದು ಅಭಿಪ್ರಾಯ 1956 ಕ್ಕೆ ಮುಂಚೆ ಇತ್ತು. ಆದರೆ ಇವತ್ತು ಅದದ್ದು ಏನು? ಬಹುಭಾಷಾ ಸಂಖ್ಯಾತರು ಅಲ್ಪಭಾಷಾ ಸಂಖ್ಯಾತರನ್ನು ಬಗ್ಗುಬಡಿಯಬಹುದು ಎಂಬ ಭಾವನೆ ರೂಢಿತವಾದಂತಾಯಿತು. ದುರದೃಷ್ಟವಶಾತ್ ಇಷ್ಟು ಆದದ್ದೇ ತಡ ರಾಜಕಾರಣಿಗಳ ಮನೋಭೂಮಿಕೆಯಲ್ಲಿ ಅನೀತಿ ಮೂಡಲು ಪ್ರಾರಂಭವಾಯಿತು. ಯಾವಾಗ ವ್ಯಕ್ತಿಯ ಮನಸ್ಸು ಬದಲಾವಣೆಯಾಗುತ್ತದೋ ಆಗ ಆ ವ್ಯಕ್ತಿಯಲ್ಲಿದ್ದಂಥ ನೈತಿಕ ತತ್ವಗಳು, ನೇಮನಿಷ್ಠೆಗಳೆಲ್ಲಾ ಸಡಿಲವಾಗಿ ಅವು ಕೆಳಕ್ಕೆ ಉರುಳಲಾರಂಭಿಸುತ್ತವೆ. ಯಾವಾಗ ಆ ನಿಷ್ಠೆ ನೇಮಗಳು ವ್ಯಕ್ತಿಯಲ್ಲಿ ಇಳಿಮುಖವಾಗುತ್ತವೋ ಆಗ ಭಾಷಾ ಅಲ್ಪಸಂಖ್ಯಾತರನ್ನು, ಭಾಷಾ ಬಹುಸಂಖ್ಯಾತರು ಬಗ್ಗುಬಡಿಯುವುದಕ್ಕೆ ಅವಕಾಶ ಆಗುತ್ತದೆ. ಇನ್ನುಳಿದವುಗಳಿಗೂ ಇದೇ ತತ್ವ ಅನ್ವಯಿಸುತ್ತದೆ. ಅಂದರೆ ಬಹುಭಾಷಾ ಸಂಖ್ಯಾತರು ಅಲ್ಪ ಭಾಷಾ ಸಂಖ್ಯಾತರನ್ನು ಬಗ್ಗುಬಡಿಯುವುದಕ್ಕೆ ಅವಕಾಶ ಸಿಕ್ಕಿದಂತೆ ಬಹುಸಂಖ್ಯಾತ ಜನಾಂಗಕ್ಕೆ ಅಲ್ಪ ಸಂಖ್ಯಾಂತ ಜನಾಂಗವನ್ನು ಬಗ್ಗುಬಡಿಯುವುದಕ್ಕೆ ಅವಕಾಶ ಸಿಕ್ಕುತ್ತದೆ. ಹೀಗೆ ಆ ರಾಜ್ಯಗಳ ವಿಭಜನೆಯಾದನಂತರ ಎಷ್ಟೋ ದುರದೃಷ್ಟಕರವಾದ ಸಂಗತಿಗಳು ನಡೆದುಹೋದವು. ನಾನು ಸಾಮಾನ್ಯವಾಗಿ ಈ ರಾಜಕಾರಿಣಿಗಳನ್ನು ಹೆಂಗಸರಿಗೆ ಹೋಲಿಸಬಹುದೆಂಬ ಅಭಿಪ್ರಾಯಕ್ಕೆ ಬಂದಿದ್ದೇನೆ.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ನಂಜೇಗೌಡರು ನನಗೆ ದಯವಿಟ್ಟು ಒಂದು ವಿಷಯದಲ್ಲಿ ಒಂದು ಕ್ಲಾರಿಫಿಕೇಷನನ್ನು ಕೊಡಬೇಕೆಂದು ಕೋರುತ್ತೇನೆ. ಮಾನ್ಯ ನಂಜೇಗೌಡರು ತಮ್ಮ ಭಾಷಣದಲ್ಲಿ ಈ ಅಕ್ರಮ ಘಟನೆಗಳಿಗೆಲ್ಲಾ ರಾಜಕೀಯ ಮುಖಂಡರೇ ಕಾರಣವೆಂದು ಅವರನ್ನು ಕ್ರಿಟಿಸೈಜ್ ಮಾಡುತ್ತಿದ್ದಾರೆ. ಆ ರಾಜಕಾರಿಣಿಗಳಲ್ಲಿ ಆಡಳಿತ ಪಕ್ಷದಲ್ಲಿರತಕ್ಕವರು—ಅದರಲ್ಲಿ

ಇಲ್ಲದಿರತಕ್ಕವರು ಎಲ್ಲರೂ ಆ ಕ್ರಿಟಿಸಿಸಂನಲ್ಲಿ ಸೇರಿಬಿಡುತ್ತಾರೆ. ಆ ಒಂದು ನೆಪವನ್ನು ಮುಂದಿಟ್ಟುಕೊಂಡು ಆಡಳಿತವರ್ಗದವರು ಮಾನ್ಯ ನಂಜೇಗೌಡರು ನಮ್ಮ ಹೆಸರನ್ನು ಹಿಡಿದು ಏನೂ ಬೈಯಲಿಲ್ಲ, ಅವರು ಎಲ್ಲಾ ರಾಜಕೀಯ ಕಾರಣಿಗಳನ್ನೂ ಸೇರಿಸಿ ಮಾತನಾಡಿದ್ದಾರೆಂದು ಸುಮ್ಮನಾಗುವುದಕ್ಕೂ ಇದೊಂದು ಅವಕಾಶ ಮಾಡಿಕೊಡಬಹುದಾದುದರಿಂದ ಮಾನ್ಯ ನಂಜೇಗೌಡರು ಆ ಬಗ್ಗೆ ಸ್ವಲ್ಪ ವಿವರಣೆ ಕೊಟ್ಟರೆ ಅನುಕೂಲವೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಸ್ನೇಹಿತರು ಕೇಳಿರತಕ್ಕ ಕ್ಲಾರಿಫಿಕೇಷನ್ನಿನಿಂದ ನನಗೆ ಬಹಳ ಸಂತೋಷವಾಯಿತು. ನಾನು ಆದುದರಿಂದಲೇ ಆ ನಮ್ಮ ಸ್ನೇಹಿತರಿಗೆ ನಾನು ಮೊದಲೇ ಹೇಳಿದೆ ಇದು ಕನ್ನಡಿಗರಲ್ಲಿ ಒಬ್ಬರಲ್ಲೇ ಅಲ್ಲದೆ ಆ ತಮಿಳರಲ್ಲೂ ಇದೆ, ಹಿಂದಿಯವರಲ್ಲೂ ಇದೆ ಎಂದು ಹೇಳಿದೆ. ನಾನು ಎಲ್ಲ ಗಾಳಿಯಲ್ಲೋ ತೇಲಾಡಿದ್ದೇನೆ. ಸ್ವತಂತ್ರ ಪಕ್ಷ, ಕಾಂಗ್ರೆಸ್ ಪಕ್ಷ, ಕಮ್ಯುನಿಸ್ಟ್ ಪಕ್ಷ ಹೀಗೆ ಇನ್ನೂ ಅನೇಕ ಗಾಳಿಯಲ್ಲಿ ತೇಲಾಡಿದ್ದೇನೆ. ಈ ಒಂದು ಸಮಸ್ಯೆಯನ್ನು ನೋಡಿದರೆ ಈ ರಾಜಕೀಯ ದುಷ್ಟ ಶಕ್ತಿ ಒಂದು ಪಕ್ಷದಲ್ಲೇ ಅಲ್ಲ ಅದು ಎಲ್ಲಾ ಪಕ್ಷಗಳಲ್ಲೂ ಸೇರಿಕೊಂಡಿದೆ ಅದಕ್ಕೆ ಇಂಥ ಪಕ್ಷದಲ್ಲೇ ಇರಬೇಕು ಇಂಥ ಪಕ್ಷದಲ್ಲಿ ಇರಕೂಡದು ಎಂಬ ಕರಾರೇನೂ ಇರುವುದಿಲ್ಲ. ರಾಷ್ಟ್ರದ ಐಕಮತ್ಯಕ್ಕೆ ಭಂಗತರುವಂಥ ಈ ಒಂದು ದುಷ್ಟಶಕ್ತಿ ಇರುವುದಕ್ಕೆ ಸ್ಥಳ ಎಲ್ಲಿ ಬೇಕಾದರೂ ಇದೆ. ರಾಷ್ಟ್ರವನ್ನು ಬಗ್ಗುಬಡಿಯಲು ಅದು ಯಾವ ಕ್ಷೇತ್ರವೇ ಇರಲಿ ಆ ಮಿಲಿಟರಿ ಕ್ಷೇತ್ರದಿಂದ ಹಿಡಿದು ಕಾರ್ಮಿಕ ಕ್ಷೇತ್ರದವರೆಗೂ ಅದಕ್ಕೆ ಅವಕಾಶ ಇದ್ದೇ ಇದೆ. ಭಾಷಾವಾರು ತಳಹದಿಯ ಮೇಲೆ ರಾಜ್ಯಗಳನ್ನು ವಿಭಜನೆಮಾಡಿದಮೇಲೆ ಹಿಂದಿಯೇತರ ಜನಾಂಗಗಳಮೇಲೆ ಹಿಂದೀ ಜನರು ಧಾಳಿಮಾಡುವುದಕ್ಕೆ ಪ್ರಾರಂಭಮಾಡಿದರು. ಹೀಗೆ ರಾಜ್ಯವಿಭಜನೆಯನಂತರ ಇದು ಆ ಉತ್ತರಭಾಗದ ಹಿಂದೀ ಜನರನ್ನು ಹಿಂದೀ ಭಾರತದ ದಕ್ಷಿಣಭಾಗದ ಜನರಮೇಲೆ ಎತ್ತಿಗಟ್ಟಲು ಒಂದು ಪೆಡಂಭೂತವಾಗಿ ನಿಂತಿತು. ಈ ಸ್ವಾತಂತ್ರ ಬರುವುದಕ್ಕೆ ಪೂರ್ವ ರಾಜ್ಯ ರಾಜ್ಯಗಳಲ್ಲಿ ಎಲ್ಲರೂ ಒಂದು ಐಕಮತ್ಯ ಭಾವನೆಯಿಂದ ಅನ್ಯೋನ್ಯಭಾವನೆಯಿಂದ ಇರುತ್ತಿದ್ದರು. ಹಾಗೆ ರಾಷ್ಟ್ರಕ್ಕೆ ಸ್ವಾತಂತ್ರ್ಯಬಂದ ತರುವಾಯ ಪ್ರಜಾಪ್ರಭುತ್ವವನ್ನು ಊರ್ಜಿತ ಸ್ಥಿತಿಗೆ ತರುವುದಕ್ಕಾಗಿ ಭಾಷವಾರು ರಾಜ್ಯಗಳನ್ನು ನಿರ್ಮಾಣಮಾಡಲಾಯಿತು. ಹಾಗೆ 1956 ರಲ್ಲಿ ಯಾವಾಗ ಈ ಹೊಸ ರಾಜ್ಯಗಳು ನಿರ್ಮಾಣವಾದವೋ ಆಗಲೇ ಆ ರಾಜಕೀಯ ಮುಖಂಡರಲ್ಲಿ ಇವನು ಉತ್ತರೇಯ, ಇವನು ದಕ್ಷಿಣದವರು ಎಂಬ ಭಿನ್ನಭೇದಗಳಿಗೆ ಪ್ರಾರಂಭವಾಯಿತು. ರಾಜ್ಯವಿಭಜನೆಗೆ ಪೂರ್ವದಲ್ಲಿ ಯಾವ ಒಬ್ಬ ಭಾರತೀಯನ ಮನೋಭೂಮಿಕೆಯಲ್ಲೂ ಇಂಥ ಒಂದು ಅಭಿಪ್ರಾಯ ಮೂಡುವುದಕ್ಕೆ ಅವಕಾಶವಿರಲಿಲ್ಲ. ರಾಜ್ಯವಿಭಜನೆಯಾದಮೇಲೆ ಉತ್ತರಭಾರತದಲ್ಲಿರತಕ್ಕ ಹಿರಿಯ ರಾಜಕಾರಣಿಗಳು ಪ್ರಥಮವಾಗಿ ಹಾಕಿಕೊಟ್ಟ ಒಂದು ಒಳ್ಳೆಯ ಮಾರ್ಗದರ್ಶನ ಏನೆಂದರೆ ಬಹುಸಂಖ್ಯಾತರಾಗಿರತಕ್ಕ ಹಿಂದೀ ಜನಾಂಗದವರು ಅಲ್ಪ ಸಂಖ್ಯಾತರಾಗಿರತಕ್ಕ ಹಿಂದೀಯೇತರ ಜನಾಂಗಗಳನ್ನು ಬಗ್ಗುಬಡಿಯಬಹುದು. ಅವರಮೇಲೆ ಸವಾರಿ ಮಾಡಬಹುದು ಎಂಬುದನ್ನು ತೋರಿಸಿಕೊಟ್ಟರು. ಇದೇ ಆ ಹಿಂದೀಜನರು ಇತರರಿಗೆ ಹಾಕಿಕೊಟ್ಟ ಒಂದು ಮಾರ್ಗದರ್ಶನ. ನಾನು ಇಲ್ಲಿಯವರೆಗೂ ಮಾತನಾಡಿದ್ದು ರಾಷ್ಟ್ರದಮಟ್ಟದ ಮಾತಾಯಿತು. ಅದೇ ತತ್ವಗಳು ರಾಜ್ಯಮಟ್ಟಕ್ಕೂ ಅನ್ವಯಿಸುತ್ತವೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಇತ್ತೀಚೆಗೆ ಇಲ್ಲಿಯೂ ಸಹಾ ಬಹುಭಾಷಾ ಸಂಖ್ಯಾತರು ಅಲ್ಪಭಾಷಾಸಂಖ್ಯಾತರನ್ನು ಬಗ್ಗುಬಡಿಯುವುದಕ್ಕೆ ಮಟ್ಟಕ್ಕೆ ನಾವು ಬರುತ್ತಿದ್ದೇವೆ.

ಅಧ್ಯಕ್ಷರೆ, ನಾನು ಈ ಹಿಂದೆ ರಾಜಕಾರಣಿಯನ್ನು ಒಬ್ಬ ಸ್ತ್ರೀಗೆ ಹೋಲಿಕೆಮಾಡಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತ ಇದ್ದೆ. ಅಷ್ಟರಲ್ಲೇ ನನ್ನ ಸ್ನೇಹಿತರು ಒಂದು ಕ್ಲಾರಿಫಿಕೇಷನ್ ಕೇಳಿದ್ದರಿಂದ ಇಷ್ಟೆಲ್ಲವನ್ನೂ ಹೇಳಬೇಕಾಯಿತು. ಈ ದಿವಸ ಇಲ್ಲಿ ನಡೆಯುತ್ತಿರುವ ಚರ್ಚೆ ರಾಜ್ಯದ ಹೆಸರು ಕನ್ನಡನಾಡೆಂದಿರಬೇಕೋ ಅಥವಾ ಕರ್ಣಾಟಕ ಎಂದಿರಬೇಕೋ ಎಂಬುದು. ಆದರೆ ಅದಕ್ಕೆ ತಕ್ಕಂಥ ವಾತಾವರಣವಿದೆಯೇ ಎಂದು ನಾನು ಕೇಳುತ್ತಿದ್ದೇನೆ? ಈ ವಿಷಯ ಹಾಗಿರಲಿ. ಒಬ್ಬ ನಾರಿಯು ನೀತಿವಂತಳಾಗಿ ತಾನು ಪತಿವ್ರತೆಯಾಗಿರುವವರೆಗೂ ಆಕೆಯ ನೈತಿಕಬಲವನ್ನು ಯಾರೂ ಕೆಳಮಟ್ಟಕ್ಕೆಳೆಯಲು ಸಾಧ್ಯವಿಲ್ಲ. ಆಕೆ ತನ್ನ ಆ ಪಾತಿವ್ರತ್ಯವನ್ನು ಹಾಗೇ ಕಾಪಾಡಿಕೊಂಡು ಬರುತ್ತಾಳೆ. ಈ ರಾಜಕಾರಣಿಯ ವಿಚಾರವಾದರೂ ಅಷ್ಟೇ. ಆದರೆ ಆ ಪತಿವ್ರತೆಯಾಗಿದ್ದ ಹೆಂಗಸು ಒಮ್ಮೆ ಪಾತಿವ್ರತ್ಯದಿಂದ ಜಾರಿದಳೆಂದರೆ ಅವಳು ಯಾವಾಗಲೂ ಜಾರುತ್ತಲೇ ಇರುವಳು ಹಾಗೆಯೇ ಒಬ್ಬ ರಾಜಕಾರಣಿಯು ಒಮ್ಮೆ ತನ್ನ ನೇಮನಿಷ್ಠೆಗಳಿಂದ ಜಾರಿದರೆ ಅವನು ಸದಾ ಹಾಗೇ ಜಾರುತ್ತಿರುವನು. ಹೀಗೇ ಒಮ್ಮೆ ಒಂದು ವಿಚಾರದಲ್ಲಿ ಅಲ್ಪಸಂಖ್ಯಾತರನ್ನು ಬಗ್ಗುಬಡಿಯುವುದಕ್ಕೆ ಬಹುಸಂಖ್ಯಾತರು ಕೈಹಾಕಿದಮೇಲೆ ಅವರನ್ನು ಸದಾ ಹಾಗೇ ಇನ್ನುಳಿದ ಬಾಬುಗಳಲ್ಲೂ ಬಗ್ಗುಬಡಿಯುವುದಕ್ಕೆ ಪ್ರಯತ್ನಗಳನ್ನು

(ಶ್ರೀ ಎಚ್. ಎನ್. ನಂಜೇಗೌಡ)

ಮಾಡೇ ಮಾಡುತ್ತಾರೆ. ಇದು ನೈತಿಕಪತನವಾದ ರಾಜಕಾರಿಣಿಗಳ ಮಟ್ಟ. ನಾನು ಒಂದು ವಿಚಾರವನ್ನು ಹಿಂದೆಯೂ ಬಹಳ ಸಾರಿ ಹೇಳಿದ್ದೇನೆ. ಅದೇ ವಿಚಾರವನ್ನು ಈಗಲೂ ಹೇಳುತ್ತಿದ್ದೇನೆ. ಅದೇನೆಂದರೆ ಅದರೆ ನನ್ನ ಅಭಿಪ್ರಾಯ ಯಾವಾಗಲೂ ಸುಸ್ಪಷ್ಟ. ನಾನು ಯಾವ ಮನೋವಿಕಾಸಗಳಿಗೂ ಒಳಗಾಗಿ ಮಾತನಾಡತಕ್ಕವನಲ್ಲ. ನಾನು ಬಹುಸಂಖ್ಯಾತ ಜಾತಿಯವರು ಅಲ್ಪಸಂಖ್ಯಾತ ಜಾತಿಯವರನ್ನು ಬಗ್ಗುಬಡಿಯುತ್ತಾರೆಂದು ಹೇಳಿದಾಗ ತಾವುಗಳು ಯಾರೂ ನಾನು ಜಾತೀಯ ಆರೋಪಣೆ ಮಾಡುತ್ತಿದ್ದಾನೆಂದು ಭಾವಿಸಬಾರದು. ನನ್ನಲ್ಲಿ ಅಂಥ ಯಾವ ಜಾತಿಮಾತ್ಸರ್ಯವೂ ಇರುವುದಿಲ್ಲ. ಭಾಷಾವಾರು ರಾಜ್ಯಗಳು ತಲೆಯೆತ್ತುವುದಕ್ಕೆ ಮೊದಲು ಸಮಾಜದಲ್ಲಿ ಜಾತಿ ಜಾತಿಗಳಿಗೆ ಯಾವ ಭೇದವೂ ಇರಲಿಲ್ಲ. ಒಂದು ಜಾತಿಗೂ ಇನ್ನೊಂದು ಜಾತಿಗೂ ಜಗಳಗಳೂ ಅಷ್ಟಾಗಿರಲಿಲ್ಲ. ಆದರೆ ಭಾಷಾವಾರು ರಾಜ್ಯಗಳು ನಿರ್ಮಾಣವಾದ ಮೇಲೆ ಈ ಜಾತೀಯ ವಾದಗಳು ಕಲಹಗಳೂ ಹೆಚ್ಚಾದವು. ಈ ದಿವಸ ಆ ಆರ್ಟಿಕಲ್ 29 – 30 ರಲ್ಲಿ ಏನು ಹೇಳಿದ್ದಾರೆ ? 'Protection of interests of minorities; Right of minorities to establish and administer educational institutions.''

ಇದನ್ನೆಲ್ಲಾ ನಾನು ಏಕೆ ಹೇಳುತ್ತಿದ್ದೇನೆಂದರೆ ಈ ರಾಜ್ಯಾಂಗದಲ್ಲಿ ಹೇಳಿರತಕ್ಕ ನೇಮಗಳನ್ನು ಪಾಲಿಸಬೇಕಾದ್ದು ಅಡಳಿತವರ್ಗದವರ ಜವಾಬ್ದಾರಿ. ಮೈನಾರಿಟಿ ಇಂಟ್ರೆಸ್ಟನ್ನು ಸೇಫ್‌ಗಾರ್ಡ್ ಮಾಡತಕ್ಕ ಜವಾಬ್ದಾರಿ ಸರ್ಕಾರದಮೇಲಿದೆ. ಆದರೆ ಅದು ಈ ದಿವಸ ನಡೆಯುತ್ತಿಲ್ಲ. ಇಲ್ಲಿ ರಾಜ್ಯಂಗದಲ್ಲಿ ಹೇಳಿತಕ್ಕ ನೇಮಗಳನ್ನು ಕಾಪಾಡುವುದಕ್ಕೆ ಭಾಷಾವಾರು ರಾಜ್ಯಗಳ ನಿರ್ಮಾಣ ಒಂದು ಮಾರಕವಾಗಿ ಪರಿಣಮಿಸಿದೆ, ಎಂದು ಹೇಳುತ್ತೇನೆ. ಈ ಪಿಡುಗನ್ನು ತಪ್ಪಿಸುವುದಕ್ಕೆ ಮಾರ್ಗವನ್ನು ಹುಡುಕಬೇಕಾಗಿದೆ. ಕೆಲವರು ಈಗ ಈ ರಾಜ್ಯಕ್ಕೆ ಕನ್ನಡನಾಡು ಎಂಬುದಾಗಿ ಹೆಸರು ಇಡಬೇಕೆಂದು ಹೇಳಿದರು. ಮಾನ್ಯ ಶ್ರೀ ಗಂಗಾಧರ್ ಅವರು ಈ ರಾಜ್ಯಕ್ಕೆ ಕರ್ಣಾಟಕ ವೆಂದು ಹೆಸರು ಇಡಬೇಕೆಂದು ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಮಲವಳ್ಳಿ). —ಇದಕ್ಕೆ ನಾವು ಅದಿಕರ್ಣಾಟಕ ಸ್ಟೇಟ್ ಎಂದು ಇಡಬೇಕೆಂದು ಹೇಳುತ್ತೇವೆ. ಏಕೆಂದರೆ, ಆದಿಯಲ್ಲಿ ಕರ್ಣಾಟಕ ಹರಿದು ಹಂಚಿಹೋಗಿತ್ತು. ಈಗ ಒಂದಾಗಿದೆ. ಆ ಕಾರಣದಿಂದ ಈ ರೀತಿ ಹೇಳುತ್ತಿದ್ದೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಭಾಷಾವಾರು ಪ್ರಾಂತ ರಚನೆಯಲ್ಲಿ ಹುಟ್ಟಿದಂಥ ಕೂಸು. ಅದು ಎಷ್ಟು ಸುಂದರವಾಗಿದೆ ? ಈ ಭಾಷಾವಾರು ಪ್ರಾಂತ ರಚನೆಯಿಂದ ಜಾತೀಯತೆ ಹೆಚ್ಚು ಬೆಳೆದಿದೆ. ಮಾನ್ಯ ಶ್ರೀ ಗಂಗಾಧರ್ ಅವರು ಚಾರಿತ್ರಿಕ ಆಧಾರ, ಸಾಹಿತ್ಯ ಆಧಾರ, ಇನ್ನೂ ಕೆಲವು ಪುಸ್ತಕಗಳನ್ನು ಉದಹರಿಸಿಕೊಂಡು ಕರ್ಣಾಟಕವೆಂದು ಹೆಸರು ಇಡಬೇಕೆಂದು ಹೇಳಿದರು. ಕೆಲವರು ಕನ್ನಡನಾಡು ಎಂತಲೂ, ಮತ್ತೆ ಕೆಲವರು ಕರ್ಣಾಟಕವೆಂತಲೂ ಹೆಸರಿಡಬೇಕೆಂದು ಅನೇಕ ಉದಾಹರಣೆಗಳನ್ನು ಕೊಟ್ಟು ಹೇಳಿದರು. ಈ ರಾಷ್ಟ್ರಕ್ಕೆ ರಾಷ್ಟ್ರವುಟ್ಟದಲ್ಲಿ ಏನೇನೋ ಹೆಸರು ಗಳಿದ್ದುವು. ಈಗ ಭರತಖಂಡ, ಹಿಂದೂಸ್ಥಾನವೆಂಬ ಹೆಸರುಗಳು ಹಾರಿಹೋಗುವು. It is also a kind of revolution. History cannot be revolution. History can only be an evolution. Science is also an evolution. ಇವತ್ತು ರಾಜಕೀಯ ಸಿದ್ಧಾಂತದ ತಳಹದಿ ನಿಂತಿರುವುದು ಎವಲ್ಯೂಷನ್ ಆಧಾರದಮೇಲೆ ಮಹಾತ್ಮ ಗಾಂಧೀಜಿಯವರು ಈ ರೀತಿ ಹೇಳಿದ್ದಾರೆ. Modern inventions are the greatest enemy of our society. 16 ಸಾವಿರ ಜನರು ಮಾಡುವ ಕೆಲಸವನ್ನು ಕೇವಲ ಕೆಲವೇ ಜನರು ಮಾಡುವಂತಹ ಕಾರ್ಯ ಯೂರೋಪ್ ಖಂಡದಲ್ಲಿ ಪ್ರಾರಂಭವಾಯಿತು. ಅವರು ಇಂಡಸ್ಟ್ರಿಯನ್ನು ರೂಢಿಸಿದರು. ಎವಲ್ಯೂಷನ್ ಪ್ರಾರಂಭವಾಯಿತು. ಕೆಲವೇ ಜನರಿಂದ ಬಹು ಸುಲಭದಲ್ಲಿ ಜಾಸ್ತಿ ಉತ್ಪತ್ತಿಮಾಡಿಕೊಳ್ಳುವ ಉದ್ದೇಶದಿಂದ ವಿಜ್ಞಾನ ಮುಂದುವರಿಯಿತು. ಹಾಗೆಯೇ ಎವಲ್ಯೂಷನ್ನಿನಿಂದ ರಾಷ್ಟ್ರದ ಹೆಸರನ್ನು ಕೂಡ ಬದಲಾವಣೆ ಮಾಡು ವುದಕ್ಕಾಗುತ್ತದೆ. ಈಗ ನವ ಮೈಸೂರು ಕರ್ಣಾಟಕದ ಎಲ್ಲಾ ಭಾಗಗಳನ್ನು ಒಳಗೊಂಡಿರುತ್ತದೆ. ಈ ರಾಜ್ಯಕ್ಕೆ ಕನ್ನಡನಾಡು ಎಂದು ಹೆಸರಿಡೋಣವೆಂದು ಹೇಳುತ್ತಿದ್ದಾರೆ. ಮೊದಲು ಈ ಒಂದು ಮನೋಭೂಮಿಕೆಯನ್ನು ತಯಾರುಮಾಡಿ, ಈ ರಾಜ್ಯದಲ್ಲಿ ಆ ಅಭಿಪ್ರಾಯ ರೂಪಿತವಾದಮೇಲೆ, ಈ ರಾಜ್ಯದಲ್ಲಿಂತಕ್ಕಂಥ ಎಲ್ಲಾ ಐತಿಹಾಸಿಕ ಆಧಾರಗಳಮೇಲೆ ಈ ರಾಜ್ಯಕ್ಕೆ ಒಂದು ಹೆಸರನ್ನು ಇಡ ಬೇಕಾಗಿದೆ. ಅದಿಲ್ಲದೆ ಸಮ್ಮನೆ ಹೋರಾಟ ಮಾಡಿದರೆ, ಅನೇಕ ಜನರು ದಾಂಧಲೆಗೆ, ಕಷ್ಟಕ್ಕೆ, ಗೊಂದಲಕ್ಕೆ ಈಡಾಗುತ್ತಾರೆ. ರಾಷ್ಟ್ರದ ಹೆಸರು ವಿಶಾಲಭಾವನೆಯಿಂದ ಕೂಡಿರಬೇಕು. ಇವತ್ತು ಡಿ. ಎಂ. ಕೆ. ಪಕ್ಷ ಮದ್ರಾಸಿನಲ್ಲಿ ಮುಂದುವರಿಸಿಕೊಂಡು ಬಂದಿದ್ದಾರೆ. ಅವರು ರಾಜ್ಯಾಂಗಕ್ಕೆ

ಬದ್ಧವಾದ ಮಾರ್ಗಗಳನ್ನು ಅನುಸರಿಸಿದ್ದರಿಂದ ಅವರು ಯಾರ ಕೆಟ್ಟದೃಷ್ಟಿಗೂ ಬಿದ್ದಿಲ್ಲ. ಡಿ. ಎಂ. ಕೆ. ಪಕ್ಷ ರಾಜ್ಯಾಂಗವನ್ನು ಬಗ್ಗಿ ಬಡಿಯುವ ಕಾರ್ಯಗಳನ್ನು ನಿಲ್ಲಿಸಿತು. ಆ ರೀತಿ ಸೆಂಟಿಮೆಂಟಲ್ ಭಾವನೆ ಈ ಭಾಷಾವಾರು ಪ್ರಾಂತಗಳಿಗೂ ಬಂತು ಗೌಡರು ಬಂದಿದ್ದಾರೆಂದರೆ, ಜನಿವಾರದವರು ನಮ್ಮ ಎದುರಿಗೇ ನಿಲ್ಲುವುದಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಶಿವದಾರದವರು.

ಶ್ರೀ ಎಚ್. ಎನ್. ನಂಜೇಗೌಡ.—ಅವರಿಗೂ ಕಷ್ಟ. ಶಿವದಾರದವರು ಗೆಲ್ಲುವುದಕ್ಕೆ ಆಗುವುದಿಲ್ಲ. ಈಗ ಮಾನ್ಯ ಶ್ರೀ ಚನ್ನಬಸಪ್ಪನವರು, ಶ್ರೀ ಸಿದ್ಧಯ್ಯನವರು ಮತ್ತು ಶ್ರೀ ಕೆ. ಹನುಮಂತಯ್ಯನವರು ಈ ರಾಷ್ಟ್ರದ ಪ್ರಮುಖ ವ್ಯಕ್ತಿಗಳು. ದೇಶ ಸ್ವತಂತ್ರವಾದ ಹೊಸದರಲ್ಲಿ ಯಾವ ರಾಷ್ಟ್ರದ ಪ್ರಜೆಯಾಗಲೀ, ಒಳ್ಳೆಯ ಮನಸ್ಸಿನಿಂದ, ಉದಾತ್ತ ಧ್ಯೇಯಗಳಿಂದ ಕೂಡಿದ್ದುದರಿಂದಲೇ ಮಹಾತ್ಮ ಗಾಂಧಿಯವರು ಹಾಕಿಕೊಟ್ಟ ತತ್ವಗಳ ಆಧಾರದಮೇಲೆ ದೇಶ ನಡೆಯುತ್ತಿತ್ತು. ಮಾನ್ಯ ಶ್ರೀ ಚನ್ನಬಸಪ್ಪನರ ಕ್ಷೇತ್ರದಲ್ಲಿ ನಾನು ಕೇಳಿದ ಪ್ರಕಾರ ಗೌಡರೇ ಸೇಕಡ 95ರಷ್ಟು ಇದ್ದಾರೆ, ಅಲ್ಲಿ ಜಾತೀಯತೆ ಇಲ್ಲದಿದ್ದಕಾರಣ ಮಾನ್ಯ ಶ್ರೀ ಚನ್ನಬಸಪ್ಪನವರೇ ಚುನಾಯಿತರಾದರು. ಇಲ್ಲದಿದ್ದರೆ ಅವರ ಠೇವಣಿ ಹೊರಟುಹೋಗಬೇಕಾಗಿತ್ತು.

SRI M. MALLIKARJUNASWAMY.—My friend, Sri Nanje Gowda, should understand that there is an ascending scale of irreverance and descending scale of reverance in our society, and that is why Sri Channabasappa is elected.

ಶ್ರೀ ಎಚ್. ಎನ್. ನಂಜೇಗೌಡ.—ಆದ್ದರಿಂದ ಇವತ್ತು ಮಾನ್ಯ ಅಧ್ಯಕ್ಷರಿಗೆ ಕರ್ಣಾಟಕದಲ್ಲಿ ಏನಾಗಿದೆಯೆಂಬುದನ್ನು ಹೇಳಬೇಕಾಗಿದೆ. ಈ ಸಂದರ್ಭದಲ್ಲಿ ನಮ್ಮ ಪ್ರಜಾವಾಣಿಯವರ ಧೂಬಾಣ ನನಗೆ ಅನೇಕಬಾರಿ ಜ್ಞಾಪಕಕ್ಕೆ ಬರುತ್ತದೆ. ಅವರು ಕರ್ಣಾಟಕವನ್ನು ಬಿಡಿಸಿ ಹೇಳಿದ್ದಾರೆ. ಕರ್ ಪ್ಲಸ್ ನಾಟಕ. ಕರ್ ಅಂದರೆ ಕಪ್ಪು ನಾಯಿ, ನಾಟಕ ಅಂದರೆ ನಾಟಕವೆಂದು ಧೂಬಾಣದಲ್ಲಿ ಬರೆದಿದ್ದಾರೆ. ಅವರು ಏನೋ ಒಂದು ತಮಾಷೆಗೆ ಆ ರೀತಿ ಬರೆದಿದ್ದಾರೆ. ಆದರೆ ಇದು ಬಹಳ ಗಂಡಾಂತರಕಾರಿಯಾಗುತ್ತದೆ. ನಮ್ಮ ರಾಜ್ಯದ ಪುನರ್ವಿಂಗಡಣೆಯು ಇಡೀ ಸಮಗ್ರ ಚಿತ್ರವನ್ನು ಕೊಡತಕ್ಕಂಥಾದ್ದು. ಆ ರೀತಿ ಅವರು ಬರೆದಿದ್ದಾರೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ.

[SRI D. M. SIDDAIAH in the Chair]

ಇದು ಒಂದು ಸ್ಪೈಕರ್ ಆಫ್ ಹಿಸ್ಟರಿಯಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದದನ್ನು ಇದ್ದ ಹಾಗೆ ಹೇಳುತ್ತೇನೆ. ಯಾರೂ ತಪ್ಪಾಗಿ ತಿಳಿಯಬಾರದು. ಬ್ರಾಹ್ಮಣರು ಬ್ರಾಹ್ಮಣೇತರರ ಮೇಲೆ ಅನೇಕ ವರ್ಷಗಳ ಕಾಲ ಧಾಳಿ ನಡೆಸಿದರು. ಆಮೇಲೆ ಒಕ್ಕಲಿಗರು ಬಹುಮಂದಿ ಇರತಕ್ಕ ರಾಜ್ಯವಾಯಿತು.

5-00 P.M.

ಶ್ರೀ ವಿ. ಎನ್. ಪಾಟೀಲ್.—ಹಿಸ್ಟಾರಿಕಲ್ ಇವೆಂಟ್ಸ್ ಇಲ್ಲಿ ಜ್ಞಾಪಿಸಿಕೊಳ್ಳಬಹುದು, ವಿಷದ ಬೀಜ ಎಲ್ಲಿ ಬಿತ್ತುತ್ತಾರೋ, ಅಲ್ಲಿ ವಿಷಯ ಬೆಳೆಯೇ ಬರುತ್ತದಲ್ಲದೆ ಬೇರೆ ಏನೂ ಬರಲಾರದು. ಹಿಂದೆ ಹಿಂದುಗಳಮೇಲೆ ಮುಸ್ಲಿಂ ಧಾಳಿಯಾಯಿತು, ಮುಸ್ಲಿಂಮರಮೇಲೆ ಹಿಂದುಗಳ ಧಾಳಿ ಯಾಯಿತು, ಕ್ರಿಶ್ಚಿಯನ್ಸ್‌ಮೇಲೆ ಮುಸ್ಲಿಂ ಧಾಳಿಯಾಯಿತು ; ಇವೆಲ್ಲಾ ಆದರೂ ಇಂದು ಅವೆಲ್ಲಾ ಮತಗಳೂ ಇದ್ದೂ ಒಂದು ಸೆಕ್ಯೂಲರ್ ಸ್ಟೇಟಾಗಿದೆ. ಅದನ್ನು ಬೆಳೆಸಿಕೊಂಡು ಬರುತ್ತಿದ್ದೇವೆ. ಹಿಂದೆ ಬ್ರಾಹ್ಮಣರ ದಬ್ಬಾಳಿಕೆಯಾಯ್ತು, ಲಿಂಗಾಯತರ ದಬ್ಬಾಳಿಕೆಯಾಯಿತು ಎಲ್ಲಾ ಆಯಿತು. ಹಿಂದೆ ಎಷ್ಟೋ ಮಸೀದಿಗಳನ್ನು ಕೆಡವಿದ್ದಾರೆ, ಎಷ್ಟೋ ಗುಡಿಗಳನ್ನು ಕೆಡವಿದ್ದಾರೆ. ಇವೆಲ್ಲಾ ಕ್ಯಾಸ್ಟ್ ಫೀಲಿಂಗ್ಸ್‌ಮೇಲೆ ಆಯಿತು. ಇದಕ್ಕೆ ಎಲ್ಲಾ ಕಾರಣರು ಯಾರು ?

ಶ್ರೀ ಎಚ್. ಎನ್. ನಂಜೇಗೌಡ.—ತಾವು ಹೇಳಿದ್ದು ನಿಜ. ಆದರೆ ನಾನು ಏಕೆ ಹೇಳುತ್ತೇನೆ ಎಂದರೆ, ಮನುಷ್ಯನು ಎಲ್ಲಾ ಸಮಾಜದಲ್ಲೂ ಒಂದೇ ತರನಾಗಿ ಇರುವುದಿಲ್ಲ. ಕೆಲವರು ಉಗ್ರ ವಾದಿಗಳು, ಕೆಲವರು ಕೆಲವು ಧ್ಯೇಯಗಳನ್ನು ಇಟ್ಟುಕೊಂಡು ಹೋಗುತ್ತಾರೆ, ಕೆಲವರು ಎಷ್ಟು ಬೇಕು ಅಷ್ಟನ್ನೇ ಮಾಡಿ ಜೀವನ ಸಾಗಿಸುತ್ತಾರೆ. ಈಗ ನಮ್ಮ ಪಾಟೀಲರು ಸಮತಾವಾದವನ್ನು

(ಶ್ರೀ ಎಚ್. ಎನ್. ನಂಜೇಗೌಡ)

ಒಪ್ಪಿದ್ದಾರೆ. ಅವರು ರಾಜ್ಯದ ರಥವನ್ನು ಹಿಡಿಯಬೇಕಾದರೂ ಅದಕ್ಕೆ ಮನೋಭೂಮಿಕೆ ತಯಾರಾಗಬೇಕು. ನಿಜಲಿಂಗಪ್ಪನವರು ಏನು ಹುಕುಂ ಕೊಡುತ್ತಾರೆ, ಕೃಷ್ಣಪ್ಪನವರು ಏನು ಹುಕುಂ ಕೊಡುತ್ತಾರೆ, ರೆಡ್ಡಿಯವರು ಏನು ಹುಕುಂ ಕೊಡುತ್ತಾರೆ ಎಂಬುದು ಅವರವರ ತತ್ವದ ಮೇಲೆ ಹೋಗುತ್ತದೆ. ಆದ್ದರಿಂದ ಪಾಟೀಲರವರೇ ಅದನ್ನು ಅರ್ಥ ಮಾಡಿಕೊಳ್ಳಲಿ. ಇನ್ನು ರಾಜ್ಯದಲ್ಲಿ ಏನಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಸ್ವಾತಂತ್ರ್ಯದ ಹೊತ್ತಿಲಲ್ಲಿ ನಮ್ಮ ಈ ರಾಷ್ಟ್ರದಲ್ಲಿ ಒಂದು ದೊಡ್ಡದಾದ ತೇಜಸ್ಸು, ಮತ್ತು ಬೆಳಕಿನಿಂದ ಪ್ರಜೆಗಳ ಮನಸ್ಸು ಸ್ವಚ್ಛವಾಗಿತ್ತು. ಗಾಂಧೀಜಿಯವರು ಇದ್ದಾಗ ಜನರು ಸರಿಯಾಗಿ ನಡೆದುಕೊಳ್ಳುತ್ತಿದ್ದರು. ಆದರೆ ಸ್ವಾತಂತ್ರ್ಯದನಂತರ ಮನುಷ್ಯನಿಗೆ ಸುಖ ಪ್ರಾಪ್ತವಾದಾಗ ಅದೆಲ್ಲವೂ ಮರೆತು ಹೋಗುತ್ತದೆ. ಯಾರ ಮನೆಯಲ್ಲೂ ಯಾರಾದರೂ ಸತ್ತರೂ ಕೂಡ, ಅವನು ವೈರಿಯಾಗಿದ್ದರೂ, ಅಯ್ಯೋ ಸತ್ತುಹೋದರೇ ಎಂದು ಹೇಳುವರು. ಆದರೆ ಸುಖಪಡುವಾಗ ಆ ರೀತಿ ಮನೋಭಾವನೆ ಇರುವುದಿಲ್ಲ. ಇದು ನನ್ನದು, ಏಕೆ ಅವನಿಗೆ ಇವನ್ನು ಕೊಡಬೇಕು, ಅವನು ಏಕೆ ಸುಖಪಡಬೇಕು, ಎಂಬ ವಿಚಾರ ಬರುತ್ತದೆ. ಆಗ ತ್ಯಾಗ ಬುದ್ಧಿ ಎಲ್ಲಾ ಹೊರಟು ಹೋಗುತ್ತದೆ. ರಾಷ್ಟ್ರಕ್ಕೆ ಸ್ವಾತಂತ್ರ್ಯ ಪ್ರಾಪ್ತವಾಗುವ ಕಷ್ಟ ಕಾಲದಲ್ಲಿ ಪ್ರತಿಯೊಬ್ಬರೂ ತ್ಯಾಗ ಮಾಡಿದರು. ಸ್ವಾತಂತ್ರ್ಯ ಪಡೆಯುವುದಕ್ಕೋಸ್ಕರ ಯಾರ್ಯಾರು ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ. ಅಂಥವರೂ ಇವತ್ತು ಕಳ್ಳರಾಗಿದ್ದಾರೆ. ತ್ಯಾಗಿಗಳು, ಭೋಗಿಗಳಾಗಿ ಪರಿಣಾಮ ಹೊಂದಿದ್ದಾರೆ. ಅದು ಮಾನವನ ಸ್ವಭಾವ. 1947ಕ್ಕೆ ಮುಂಚೆ ಎಲ್ಲರೂ ಭಾವಿಸಿದ್ದು ಇಲ್ಲಿರತಕ್ಕ ಎಲ್ಲಾ ಹೊಲಸು ಹೋಗಬೇಕು, ಪರಕೀಯರಿಂದ ನಾನು ಬಿಡುಗಡೆಯಾಗಬೇಕೆಂದು. ಅದಕ್ಕೆ ಮುಂಚೆ ಬ್ರಾಹ್ಮಣರು ಬ್ರಾಹ್ಮಣೇತರರಮೇಲೆ ಸವಾರಿ ಮಾಡಿದ್ದರು. 1947ರ ನಂತರ ಸ್ವಾತಂತ್ರ್ಯ ಬಂದ ಎರಡು ಮೂರು ವರ್ಷಗಳು ಸರಿಯಾಗಿ ನಡೆಯಿತು. ಅಷ್ಟು ಹೊತ್ತಿಗೆ ಸುಖ ಹಂಚಿ ಕೊಳ್ಳುವುದರಲ್ಲಿ ವ್ಯಾಜ್ಯ ಶುರುವಾಯಿತು. ಅವನೊಬ್ಬನೇ ಏಕೆ ಆಡಳಿತ ನಡೆಸಬೇಕು, ನಾನೂ ಏಕೆ ನಡೆಸಬಾರದು ಎಂದು ಎಲ್ಲಾ ಬಂತು. ನಂತರ ಒಕ್ಕಲಿಗರು ಒಕ್ಕಲಿಗರೇತರಮೇಲೆ ಸವಾರಿ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಶ್ರೀಮಾನ್ ಹನುಮಂತಯ್ಯನವರು ಆಡಳಿತ ವ್ಯವಹಾರ ನಡೆಸಿದರು. ಆದರೆ ಏನಾಯಿತು, ಒಕ್ಕಲಿಗರ ರಾಜ್ಯದಲ್ಲಿ ಬೇರೆಯವರಿಗೆ ಉಳಿಗಾಲವಿಲ್ಲವೆಂಬುದಾಗಿ ಉಳಿದವರ ಮನಸ್ಸಿನಲ್ಲಿ ಬೇಸರ ಬಂದಿದೆ ಎಂಬುದನ್ನು ಅನುಭವಸ್ಥರು ಹೇಳುತ್ತಾರೆ, ಅನಂತರ ರಾಜ್ಯದ ಪುನರ್ವಿಂಗಡಣೆಯ ಮಾತು ಬಂತು. ಪುನರ್ವಿಂಗಡಣೆಯಾಯಿತು. ಅದು ಆದಮೇಲೆ ಕೆಲವು ಅನುಮಾನಗಳೂ ಬಂದವು. ಸ್ಟೇಟ್ ರೀಆರ್ಗನೈಸೇಶನ್ ಕಮಿಟಿಯವರು ಏನು ಅನುಮಾನಪಟ್ಟರೆಂಬುದನ್ನು ನಾನು ಹೇಳುತ್ತೇನೆ. ಅದನ್ನು ಹೇಳುವಾಗ ನನ್ನ ಮನಸ್ಸಿಗೆ ಬಹಳ ನೋವು ಉಂಟಾಗುತ್ತದೆ. ತಂದೆಯ ತಿಥಿಯನ್ನು 11ನೇ ದಿವಸ ಮಗ ಮಾಡುವಾಗ ಎಷ್ಟು ಅವನಿಗೆ ದುಃಖವಾಗುತ್ತದೋ, ಅಷ್ಟೇ ದುಃಖವು ನನಗೆ ಈಗ ಆಗುತ್ತದೆ. ಈ ಒಂದು ಸ್ಟೇಟ್ ರೀಆರ್ಗನೈಸೇಶನ್ ಆಕ್ಟಿನ ನಾಲ್ಕನೇ ಚಾಪ್ಟರಿನಲ್ಲಿ, 95ನೇ ಪುಟದಲ್ಲಿರುವ ವಿಷಯಕ್ಕೆ ತಮ್ಮೆಲ್ಲರ ಗಮನವನ್ನು ಸೆಳೆಯುತ್ತೇನೆ. ಅಲ್ಲಿ ಏನು ಹೇಳುತ್ತಾರೆಂದರೆ, ಅದು ಈ ರೀತಿ ಇದೆ :

> "It is not unnatural in these circumstances for those who expect to be reduced in their relative position to view the proposed change with disfavour. It is also, perhapes, not entirely ununderstandable, if some of these minorities fear that one result of the political position which the Lingayats will occupy in the future Karnataka State may be the dominance or extension of Veerasaivism at the cost of other religious faiths. However, in the respective of the political and economic development of the Karnataka State which we have in view, the importance of narrow communal jealousies should not be exaggerated. There is as much reason to expect that a more balanced communal distribution will be conducive good government as there is for fears or apprehensions."

ಮೆಜಾರಿಟಿ ಇರತಕ್ಕ ಒಂದೇ ಜಾತಿಯ ಜನ ಎಂದರೆ ಲಿಂಗಾಯಿತರು ಉಳಿದ ಮೈನಾರಿಟಿ ಜನಾಂಗದವರಮೇಲೆ ಧಾಳಿ ಮಾಡುತ್ತಾರೆ ಎಂದು ಕೆಲವರು ಆಗ ಅನುಮಾನವನ್ನು ವ್ಯಕ್ತಪಡಿಸಿದರು. ಆಮೇಲೆ ಅವರು ಇನ್ನೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅದು ಈ ರೀತಿ ಇದೆ.

"There is as much reason to expect that a more balanced communal distribution will be conducive to good Government"

ಈ ರೀತಿಯಾಗಿ ಒಂದೇ ಜಾತಿಯ ಜನರಿಂದ ಎಂದರೆ ಲಿಂಗಾಯಿತರಿಂದ ಉಳಿದ ಮೈನಾರಿಟಿ ಜನಾಂಗದವರಮೇಲೆ ಈಗ ಧಾಳಿ ನಡೆಯುತ್ತಿದೆ.

ಶ್ರೀ ಎಂ. ನಾಗಪ್ಪ.—ಒಬ್ಬರಮೇಲೆ ಒಬ್ಬರು ಧಾಳಿ ಮಾಡುತ್ತಾರೆ ಎನ್ನುವ ಇತಿಹಾಸವನ್ನು ಈಗ ಹೆಚ್ಚಿಗೆ ಹೇಳುವುದು ಬೇಡಿ.

ಶ್ರೀ ಎಚ್. ಎನ್. ನಂಜೇಗೌಡ.—ಆ ರೀತಿ ಧಾಳಿ ಮಾಡುವುದಾದರೆ ಸಮತೋಲನ ಇರುವುದಿಲ್ಲ. ಸಮತೋಲನವನ್ನು ಕಾಪಾಡತಕ್ಕ ಎರಡು ಜನಾಂಗದವರು ಏನಿದ್ದಾರೆ ಅವರಿಂದ ಆ ಕಾರ್ಯ ಆಗಲಿಲ್ಲ. ರಾಜಕೀಯ ಕಾರಣದಿಂದ ಪ್ರಜಾಪ್ರಭುತ್ವದ ಯಶಸ್ಸಿಗೆ ಭಾಷಾವಾರು ಪ್ರಾಂತ ಪೂರಕವಾಗದೆ ಮಾರಕವಾಗಿದೆ. ರಾಜ್ಯದ ಬೆಳವಣಿಗೆ ಸಾಕಷ್ಟು ನಡೆಯಲಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮುಂದೆ ಇನ್ನೊಂದು ಹೆದರಿಕೆ ಇದೆ. ಅದು ಏನೆಂದರೆ ಇವೊತ್ತು ನಮ್ಮ ರಾಜ್ಯಮಟ್ಟದಲ್ಲಾಗಲೀ, ರಾಷ್ಟ್ರ ಮಟ್ಟದಲ್ಲಾಗಲೀ ಇನ್ನೊಂದು ಬಹುಸಂಖ್ಯಾತ ಜಾತಿ ಇದೆ. ಅದು ಯಾವುದೆಂದರೆ ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರ ಜನಾಂಗವಾದ ಹರಿಜನರು. ಆದ್ದರಿಂದ ನಾಳೆ ರಾಜ್ಯಮಟ್ಟದಲ್ಲಾಗಲೀ, ರಾಷ್ಟ್ರಮಟ್ಟದಲ್ಲಾಗಲೀ ಹರಿಜನರಿಂದ ಇತರ ಜನಾಂದವರಮೇಲೆ ಧಾಳಿ ನಡೆಯುವುದಕ್ಕೆ ಸಾಧ್ಯ ಇದೆ.

ಶ್ರೀ ಎಂ. ನಾಗಪ್ಪ.—ನಾನು ಒಂದು ವಿಷಯವನ್ನು ಹೇಳುತ್ತೇನೆ. ಅದೇನೆಂದರೆ ಲಿಂಗಾಯಿತರ ರಾಜ್ಯಭಾರವೇ ಬರಲಿ, ಬ್ರಾಹ್ಮಣರ ರಾಜ್ಯಭಾರವೇ ಬರಲಿ, ಒಕ್ಕಲಿಗರ ರಾಜ್ಯಭಾರವೇ ಬರಲಿ, ಮುಸ್ಲಿಮ್ ರಾಜ್ಯಭಾರವೇ ಬರಲಿ, ಅಥವಾ ಯಾವ ರಾಜ್ಯಭಾರವೇ ಬರಲಿ ಮುಖ್ಯವಾಗಿ ಜನಗಳ ಬಡತನವನ್ನು ನಿವಾರಣೆ ಮಾಡುವುದನ್ನು ಯೋಚನೆ ಮಾಡಬೇಕು.

ಶ್ರೀ ಎಚ್. ಎನ್. ನಂಜೇಗೌಡ.—ಈಗ ಗ್ರಹಚಾರ ಬಂದಿರುವುದನ್ನು ನಾನು ಮೊದಲು ಹೇಳುತ್ತೇನೆ. ರಾಷ್ಟ್ರದ ಐಕ್ಯ ಸಾಧನೆ ದೃಷ್ಟಿಯಿಂದ ರಾಜ್ಯಗಳನ್ನು ಪುನರ್ವಿಂಗಡಣೆ ಮಾಡಿದರು. ಆದರೆ ಅವು ಪ್ರಜಾಪ್ರಭುತ್ವದ ಯಶಸ್ಸಿಗೆ ಪೂರಕವಾಗದೆ ಮಾರಕವಾಗಿವೆ.

ಛೇರ್ಮನ್‌ರವರು.—ಇದು ರಾಜ್ಯಕ್ಕೆ ಹೆಸರಿಡುವ ವಿಷಯ. ಆದ್ದರಿಂದ ಮಾನ್ಯ ಸದಸ್ಯರು ನಿರ್ಣಯಕ್ಕೆ ಸಂಬಂಧಪಟ್ಟಹಾಗೆ ಮಾತನಾಡಿದರೆ ಒಳ್ಳೆಯದು.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ ನಾನು ಇನ್ನೂ ಮನೋಭೂಮಿಕೆಯಲ್ಲಿ ಇದ್ದೇನೆ ನಿರ್ಣಯಕ್ಕೆ ಸಂಬಂಧಪಟ್ಟ ವಿಷಯಗಳನ್ನೇ ನಾನು ಹೇಳುತ್ತಿರುವುದು. ಏಕೆಂದರೆ ನಾನಿನ್ನೂ ಚಿಕ್ಕವಯಸ್ಸಿನವನು. ಇಲ್ಲದ ವಿಷಯಗಳನ್ನು ಹೇಳಿ ನಾನೇಕೆ ಪಾಪ ಕಟ್ಟಿಕೊಳ್ಳಲಿ. ಮದುವೆ ಮಾಡಬೇಕಾದರೆ ಗಂಡು ಬೇಕು, ಗಂಡೇ ಇಲ್ಲದೆ ಮದುವೆಯನ್ನು ಯಾವರೀತಿ ಮಾಡುವುದಕ್ಕಾಗುತ್ತದೆ. ಷಂಡನಿಗೆ ಮದುವೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈಗ ಮೊದಲು ರಾಜ್ಯಕ್ಕೆ ಮನೋಭೂಮಿಕೆ ತಯಾರಾಗಬೇಕು. ಅನೇಕ ಸಂದರ್ಭಗಳಲ್ಲಿ ನನ್ನ ಪ್ರಜ್ಞೆಗೆ, ನನ್ನ ಗಮನಕ್ಕೆ ಬಂದಿದೆ ಕೆಲವು ಸದಸ್ಯರು ಪಕ್ಷವನ್ನೇ ಮರೆತು ರಾಜ್ಯದ ಐಕ್ಯತೆಗೆ ಒಂದಾಗಬಹುದು. ರಾಷ್ಟ್ರದ ಐಕ್ಯತೆಗೆ ಒಂದಾಗಬಹುದು ಹಿತಕ್ಕೆ ಜಾತಿಯ ಮಟ್ಟದಲ್ಲಿ ಒಂದಾಗಬಹುದು. ಈಗ ಉದಾರಣೆಗೆ ಹೇಳುವುದಾದರೆ ವಿರೋಧಪಕ್ಷದಲ್ಲಿರತಕ್ಕ ಒಬ್ಬರು ಗೌಡರು ಕಾಂಗ್ರೆಸ್ಸಿನಲ್ಲಿರತಕ್ಕ ಇನ್ನೊಬ್ಬರು ಗೌಡರು ಹೇಳಿದಹಾಗೆ ಕೇಳಬಹುದು, ಸಹಕಾರ ನೀಡಬಹುದು, ಅದೇ ರೀತಿಯಲ್ಲಿ ವಿರೋಧ ಪಕ್ಷದಲ್ಲಿರತಕ್ಕ ಒಬ್ಬರು ಲಿಂಗಾಯಿತರು ಕಾಂಗ್ರೆಸ್ಸಿನಲ್ಲಿರತಕ್ಕ ಇನ್ನೊಬ್ಬರು ಲಿಂಗಾಯಿತರು ಹೇಳಿದ ಹಾಗೆ ಕೇಳಬಹುದು, ಅವರು ಹೇಳುವ ಮಾತು ಅವರಿಗೆ ಹಿಡಿಸಬಹುದು. ಹಾಗೆಯೇ ಮಾನ್ಯ ರಾಚಯ್ಯನವರು ಹೇಳುವ ಮಾತು ನಮ್ಮ ಕಡೆಯ ಜಯಪ್ರಕಾಶ ನಾರಾಯಣ್ ಅವರಿಗೆ ಸರಿಯಾಗಿ ಕಂಡು ಅವರು ಹೇಳಿದಹಾಗೆ ಕೇಳಬಹುದು. ಈ ವಿಚಾರವನ್ನು ಬೇಡ ಎಂದರೂ ಸಹ ಅದನ್ನು ಹಾದಿ ಬೀದಿಯಲ್ಲಿ, ಮನೆ ಮನೆಗಳಲ್ಲಿ ಜನಗಳು ಮಾತನಾಡಿಕೊಳ್ಳುತ್ತಿದ್ದಾರೆ. ಇದು ಇವೊತ್ತು ರಾಜ್ಯಮಟ್ಟದಲ್ಲಿ ನಡೆಯುತ್ತಿದೆ.

ಶ್ರೀ ವಿ. ಎನ್. ಪಾಟೀಲ್.—ಒಂದು ಸನ್ನಿವೇಶ ನನ್ನ ಜ್ಞಾಪಕಕ್ಕೆ ಬರುತ್ತಿದೆ. ಆಗ ನಾನು ಬೆಳಗಾಂನಲ್ಲಿ ಲಾ ಕಾಲೇಜ್ ಸ್ಟೂಡೆಂಟ್ ಆಗಿದ್ದೆ. ಅಲ್ಲಿ ಹೆಂಡತಿ ಹೇಳಿದ ಮಾತನ್ನು ಗಂಡ ಕೇಳುವುದಿಲ್ಲ, ಗಂಡ ಹೇಳುವ ಮಾತನ್ನು ಹೆಂಡತಿ ಕೇಳುವುದಿಲ್ಲ. ಇಲ್ಲಿ ಬೆಳಗಾಂನ ಮಿತ್ರರೂ ಕೂಡ ಇದ್ದಾರೆ. ಉದಾಹರಣೆಗೆ ಹೇಳುವುದಾದರೆ ಗಂಡ ಮರಾಠಿಯವನಾಗಿದ್ದು, ಹೆಂಡತಿ ಕನ್ನಡದವಳಾಗಿದ್ದರೆ, ಆಕೆ ಸೆನ್ಸಸ್‌ನಲ್ಲಿ ತನ್ನ ಮಕ್ಕಳ ಮಾತೃಭಾಷೆ ಕನ್ನಡವೆಂದೇ ಬರೆಸುತ್ತಾಳೆ. ಅದೇ ಗಂಡ ಕನ್ನಡದವನಾಗಿದ್ದು, ಹೆಂಡತಿ ಮರಾಠಿಯವಳಾಗಿದ್ದರೆ ಆಕೆ ಸೆನ್ಸಸ್‌ನಲ್ಲಿ ತನ್ನ ಮಕ್ಕಳ ಮಾತೃಭಾಷೆ ಮರಾಠಿ ಎಂದೇ ಬರೆಸುತ್ತಾಳೆ. ಕೇವಲ ರಾಜಕೀಯವನ್ನೇ ಗುರಿಯಾಗಿಟ್ಟುಕೊಂಡು ಈ ರೀತಿ ಮಾಡುತ್ತಿದ್ದಾರೆ. ಜಾತಿಯ ಹೆಸರಿನಲ್ಲಿ, ಭಾಷೆಯ ಹೆಸರಿನಲ್ಲಿ ಅನೇಕ ಅನ್ಯಾಯಗಳು ನಡೆಯುತ್ತಿವೆ. ಇದು ಸರಿಯಲ್ಲ ಎಂಬುದು ನನ್ನ ಭಾವನೆ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಪಾಟೀಲ್ ಅವರಿಗೆ ನಾನು ಯಾವ ಉತ್ತರವನ್ನೂ ಸಹ ಕೊಡದೆ ನನ್ನ ಭಾಷಣವನ್ನು ಮುಂದುವರೆಸುತ್ತೇನೆ. ಒಬ್ಬ ಮನುಷ್ಯ ದುಃಖದಲ್ಲಿ ಇದ್ದಾಗ ಯಾವ ತ್ಯಾಗಬೇಕಾದರೂ ಮಾಡುವುದಕ್ಕೆ ತಯಾರು ಇರುತ್ತಾನೆ.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಒಂದು ಜಾತಿ ಇನ್ನೊಂದು ಜಾತಿಯನ್ನು ತುಳಿಯುವುದಕ್ಕೆ ಹೊರಟಾಗ ನಡುವಿನ ಜಾತಿಯ ಸಮಸ್ಯೆ ಏನಾಗುತ್ತದೆ ಎಂಬುದನ್ನು ಮಾನ್ಯ ಸದಸ್ಯರು ವಿಶದಪಡಿಸಬೇಕು.

ಶ್ರೀ ಎಚ್. ಎನ್. ನಂಜೇಗೌಡ.—ಅದನ್ನೂ ಹೇಳುತ್ತೇನೆ.

ಛೇರ್‌ಮನ್‌ರವರು.—ಮಾನ್ಯ ಸದಸ್ಯರು ನಿರ್ಣಯದಮೇಲೆ ಮಾತನಾಡಿದರೆ ಒಳ್ಳೆಯದು.

ಶ್ರೀ ಎಚ್. ಎನ್. ನಂಜೇಗೌಡ.—ನಿರ್ಣಯದಮೇಲೆ ಹೇಳುತ್ತಿದ್ದೇನೆ. ಒಕ್ಕಲಿಗರು ಒಕ್ಕಲಿಗರೇತರರಮೇಲೆ ಧಾಳಿ ಮಾಡುತ್ತಿದ್ದಾರೆ ಎಂದು ಹೇಳಿದರೆ ಒಕ್ಕಲಿಗರು ಒಕ್ಕಲಿಗರೇತರರ ಜುಟ್ಟನ್ನು ಕುಯ್ದು ಹೊಳೆಗೆ ಹಾಕಿದರು ಎಂದು ಅರ್ಥವಲ್ಲ. ಇವತ್ತು ಏನು ನಡೆಯುತ್ತಿದೆ ಎಂದರೆ ಅಧಿಕಾರದಲ್ಲಿರುವವರು ತಮಗೆ ಬೇಕಾದವರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳುವುದು, ತಮಗೆ ಬೇಕಾದವರಿಗೆ ಹುದ್ದೆಗಳನ್ನು ಕೊಡುವುದು, ಪ್ರಮೋಷನ್ ಕೊಡುವುದು, ಬೆಂಗಳೂರಿನಲ್ಲಿ ಸೈಟ್‌ಗಳನ್ನು ಅಲಾಟ್ ಮಾಡುವುದು ಮುಂತಾದುವೆಲ್ಲಾ ನಡೆಯುತ್ತಿದೆ. ಈ ವಿಷಯವನ್ನು ಹೊರಗಿನ ಜನರು ಹೇಳುತ್ತಿದ್ದಾರೆ ಮತ್ತು ಆಡಿಕೊಳ್ಳುತ್ತಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಕಾಲಕ್ಕೆ ಸಂಗ್ರಹಿಸಿದ ಅಂಕಿ ಅಂಶಗಳೂ ಇವೆ, ಈ ಕಾಲಕ್ಕೆ ಸಂಗ್ರಹಿಸಿದ ಅಂಕಿ ಅಂಶಗಳೂ ಇವೆ, ಎರಡನ್ನೂ ಕೂಡ ಹೋಲಿಕೆ ಮಾಡಿ ನೋಡಿದರೆ ಏನು ನಡೆಯುತ್ತಿದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಬಿ. ಪಿ. ಗಂಗಾಧರ್.—ವಿಷಯಕ್ಕೆ ಸಂಬಂಧಪಡದ ವಿಷಯವನ್ನೇ ಮಾತನಾಡುವುದಾದರೆ, ಅದು ಪತ್ರಿಕೆಗಳಲ್ಲೆಲ್ಲಾ ಬರುತ್ತದೆ. ಹೊರಗಿನ ಜನರಲ್ಲಿ ಇಲ್ಲದ ಗೊಂದಲ ಏರ್ಪಡುವುದಕ್ಕೆ ಅವಕಾಶವಾಗುತ್ತದೆ. ಈಗ ನಿರ್ಣಯವಿರುವುದಾದರೂ ಇಷ್ಟೆ. ಈ ರಾಜ್ಯದ ಹೆಸರು ಮೈಸೂರು ಎಂದೇ ಇರಬೇಕೇ, ಕನ್ನಡನಾಡು ಎಂದು ಇರಬೇಕೇ ಅಥವಾ ಕರ್ನಾಟಕ ಎಂದು ಇರಬೇಕೇ ಎಂಬ ಬಗ್ಗೆ. ಇದರ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದರೆ ಒಳ್ಳೆಯದು ಎಂದು ಕಾಣುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಸದಸ್ಯರಾದ ಶ್ರೀ ಗಂಗಾಧರ್ ಅವರ ಭಾಷಣವನ್ನೂ ಕೂಡ ನಾನು ಕೇಳಿದ್ದೇನೆ.

ಛೇರ್‌ಮನ್‌ರವರು.—ಮಾನ್ಯ ಸದಸ್ಯರು ದಯವಿಟ್ಟು ನಿರ್ಣಯದ ಬಗ್ಗೆ ಸಾಧಕಬಾಧಕಗಳನ್ನು ಹೇಳಿದರೆ ಒಳ್ಳೆಯದು.

ಶ್ರೀ ಎಚ್. ಎನ್. ನಂಜೇಗೌಡ.—ನನ್ನ ಮಾನ್ಯಮಿತ್ರರನೇಕರು ಕೆಲವು ಪ್ರಶ್ನೆಗಳನ್ನು ಕೇಳಿದ್ದರಿಂದ ನಾನು ಇಷ್ಟೆಲ್ಲಾ ವಿವರಿಸಬೇಕಾಯಿತು. ಅಲ್ಲದೆ ಅವರ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದುದು ನನ್ನ ಕರ್ತವ್ಯ. ನಾನು ಈ ಸಭೆಯ ಸದಸ್ಯನಾದಮೇಲೆ ಅನೇಕ ವಿಷಯಗಳು ಈ ಸಭೆಯ ಮುಂದೆ ಬಂದಿವೆ. ಕೆಲವರು ನನ್ನನ್ನು ಬೆಳ್ಳಗಿದ್ದಾನೆ ಎಂದು ಹೇಳಬಹುದು. ಆದರೆ ನನ್ನದು ಕಾಗೆಯ ಬಣ್ಣ ಎಂಬುದು ನನಗೆ ಗೊತ್ತು. ಈ ರಾಜ್ಯಕ್ಕೆ ಕನ್ನಡನಾಡು ಎಂದು ಹೆಸರಿಡುವ ಬಗ್ಗೆ ನನ್ನ ಅಭಿಪ್ರಾಯವನ್ನು ಮಾತ್ರ ಹೇಳುವುದಕ್ಕಾಗುವುದಿಲ್ಲ. ನಾನು ಸಾರ್ವಜನಿಕರ ಪ್ರತಿನಿಧಿಯಾಗಿರುವಾಗ, ಅವರ ಅಭಿಪ್ರಾಯ ಈ ನಿರ್ಣಯದ ಬಗ್ಗೆ ಏನಿದೆ ಎಂಬುದನ್ನು ಸಹ ಹೇಳಬೇಕಾಗಿದೆ. ನಾನು ಮಾತನಾಡುವ ವಿಷಯಗಳಲ್ಲಿ ನನ್ನ ಸ್ವಂತ ಅಭಿಪ್ರಾಯ ಶೇಕಡ 5

ಇದ್ದರೆ, ಸಾರ್ವಜನಿಕರ ಅಭಿಪ್ರಾಯ ಶೇಕಡ 95 ಇರುತ್ತದೆ. ಅದ್ದರಿಂದ ಈ ನಿರ್ಣಯವನ್ನು ಈ ಸಭೆ ಅಷ್ಟೇ ಒಪ್ಪಿದರೆ ಸಾಲದು, ಈ ನಿರ್ಣಯವನ್ನು ಇಡೀ ದೇಶದ ಜನರು ಒಪ್ಪಬೇಕು. ಆ ರೀತಿ ಸಾರ್ವಜನಿಕರ ಅಭಿಪ್ರಾಯವನ್ನು ಈ ನಿರ್ಣಯದ ಬಗ್ಗೆ ಪಡೆದರೆ ಅದು ಸ್ವಾಗತಾರ್ಹವಾಗುದೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕಾಗಿ ನಮ್ಮ ರಾಜ್ಯದ ಜನತೆಯ ಮನೋಭಾವನೆ ಯಾವ ರೀತಿ ಇದೆ ಎನ್ನುವುದನ್ನು ನಾನು ಇಲ್ಲಿ ಹೇಳಬೇಕಾಗಿದೆ. ಏಕೆಂದರೆ ಸಾಮಾನ್ಯ ಜನರಲ್ಲಿರುವ ಕೆಲವು ಅನುಮಾನಗಳನ್ನು ಬಗೆಹರಿಸುವುದಕ್ಕೆ ದೇಶದಲ್ಲಿ ಇಂತಹ ಪೆಡಂಭೂತಗಳು ಬಂದು ಆಗದೇ ಇರಬಹುದು ಹೀಗೆ ಇದೆ ಎಂದು ನಾವು ತಿಳಿದುಕೊಂಡರೆ ಅದು ಸರಿಯಾಗುವುದಿಲ್ಲ. ಇದಕ್ಕಾಗಿ ಮಾನ್ಯ ಸದಸ್ಯರಾದ ಶ್ರೀ ಗಂಗಾಧರ್‌ರವರಲ್ಲಿ ನಾನು ಇಲ್ಲಿ ಹೇಳುವುದನ್ನು ಅವರು ತಪ್ಪಾಗಿ ತಿಳಿದುಕೊಳ್ಳಬಾರದು ಎಂದು ಅವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕಾಗಿಯೇ ನಾನು ಒಂದು ನಿರ್ಣಯವನ್ನು ಕೂಡ ಕಳಿಸಿದ್ದೇನೆ. ಅದರಲ್ಲಿ ನಾನು ಹೇಳಿರುವುದು :

5-30 P.M.

'to assess the regional imbalances in the spheres of economic, political and administratve activities of the State since 1956'

ಇದರ ಅರ್ಥ ನಮ್ಮ ರಾಜ್ಯವನ್ನು ಎರಡು ಹೋಳಾಗಿ ಮಾಡಬೇಕೆನ್ನುವ ಅರ್ಥವಲ್ಲ. ಈ ರಾಜ್ಯದಲ್ಲಿ ಜಾತೀಯವಾದ ಇದೆ ಎಂದು ನಾನು ನಂಬಿಕೊಂಡಿಲ್ಲ. ಜಾತೀಯವಾದದಮೇಲೆ ರಾಜ್ಯವನ್ನು ರಚನೆ ಮಾಡಕೂಡದು ಎನ್ನುವ ವಾದವನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ಏನಾದರೂ ಒಂದು ಕೆಲಸವನ್ನು ಮಾಡಬೇಕಾದರೆ ಅದನ್ನು ಮೊದಲು ನಾನು ಒಪ್ಪಬೇಕು. I am to be convinced first. ಆ ರೀತಿ ಮೊದಲು ನನಗೆ ಕನ್‌ವಿನ್ಸ್ ಆಗಬೇಕು. ನಮ್ಮ ಈ ನಿರ್ಣಯದಮೇಲೆ ನಡೆಯುತ್ತಿರುವ ಚರ್ಚೆ ನೋಡಿದರೆ ಇದು ಯಾವ ಮಟ್ಟಕ್ಕೆ ಹೋಗುತ್ತದೋ ಹೇಳುವುದಕ್ಕೆ ಆಗುವುದಿಲ್ಲ. ಇದರಿಂದ ಜನತೆಯಮೇಲೆ ಯಾವ ರೀತಿ ಪರಿಣಾಮವಾಗುತ್ತದೆ ಎನ್ನುವುದನ್ನು ನೋಡಿಕೊಂಡು ನಾವು ಒಪ್ಪಬೇಕಾಗುತ್ತದೆ. ಇದರಲ್ಲಿ ನನಗೆ ಕಂಡುಬರುವ ಅನುಮಾನಗಳನ್ನು ಇಲ್ಲಿ ಹೇಳುತ್ತಿದ್ದೇನೆ. ಯಾರು ಯಾರು ಯಾವ ಯಾವ ಭಾಗಗಳಲ್ಲಿ ಇದರ ಬಗ್ಗೆ ಏನು ಹೇಳುತ್ತಿದ್ದಾರೆ ಅದನ್ನೆಲ್ಲಾ ನಾನು ಕೇಳಿದ್ದೇನೆ. ಕಾರವಾರ ಕ್ಯಾಪಿಟಲ್ಲು ಪುನರ್ವಿಂಗಡಣೆಯಾದಾಗ ಜನ ಏನು ಹೇಳಿದರು ಅದನ್ನೂ ಕೇಳಿದ್ದೇನೆ. ಕೃಷ್ಣಾ ಬೇಸಿನ್ ಮಾಡಲಿಲ್ಲ ಎಂದು ಅಲ್ಲಿರುವ ಜನ ಏನು ಹೇಳುತ್ತಿದ್ದಾರೆ ಅದನ್ನೂ ಕೇಳಿದ್ದೇನೆ. ಅದೂ ಅಲ್ಲದೆ ನಮ್ಮ ಮುಖ್ಯ ಮಂತ್ರಿಗಳು ಹಿಂದೆ ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿದ್ದಾಗ ಅವರ ಕ್ಷೇತ್ರವಾದ ಗುಲ್ಬರ್ಗಾ ಪ್ರದೇಶವನ್ನು ಯಾವ ರೀತಿ ಅಭಿವೃದ್ಧಿ ಮಾಡಿದರು ಎನ್ನುವುದನ್ನು ಅಲ್ಲಿಯ ಜನರಿಂದ ಕೇಳಿದ್ದೇನೆ. ನಾನು ಕೇವಲ ಹಳೆಯ ಮೈಸೂರಿನ ಜನರನ್ನೆ ಕೇಳಲಿಲ್ಲ. ಮತ್ತು ಕೆಲವು ಕಡೆಗಳಲ್ಲಿ ಜನರು ಇಲ್ಲಿ ಲಿಂಗಾಯಿತರ ಪ್ರಾಬಲ್ಯ ಹೆಚ್ಚಾಗುತ್ತಿದೆ ಎನ್ನುವ ವಾದವನ್ನೂ ಕೇಳಿದ್ದೇನೆ. ಇದರಿಂದಾಗಿ ಅವರಿಗೆ ಬೇಕಾದವರಿಗೆ ಕೆಲಸಗಳನ್ನು ಕೊಡುತ್ತಿದ್ದಾರೆ ಎನ್ನುವ ಮಾತುಗಳನ್ನೂ ಕೇಳಿದ್ದೇನೆ. ಹಾಗೇ ಇಂದು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಯಾವ ರೀತಿಯಾದ ಒಂದು ರೀತಿ ಜಾತೀಯವಾದ ಎದ್ದಿದೆ ಎನ್ನುವುದನ್ನೂ ನಾನು ಕೇಳಿದ್ದೇನೆ ಮತ್ತು ಇಲ್ಲಿನ ವಿದ್ಯಾರ್ಥಿಗಳ ತಂಡದವರು ಯಾವ ಮಟ್ಟಕ್ಕೆ ಇಳಿದಿದ್ದಾರೆ ಎನ್ನುವುದನ್ನು ಕೂಡ ನಾನು ಇಲ್ಲಿನ ಜನರಿಂದ ಕೇಳಿದ್ದೇನೆ. ಜವಾಬುದಾರಿ ಹೊತ್ತವರು ಅವರ ಕರ್ತವ್ಯ ನಿರ್ವಹಣೆಯನ್ನು ಸರಿಯಾದ ಜವಾಬುದಾರಿಯಿಂದ ಮಾಡದೇಹೋದರೆ ಆಗ ಏನು ಮಾಡುವುದಕ್ಕೆ ಆಗುವುದಿಲ್ಲ. ಇದರಲ್ಲಿ ಯಾರೇ ಏನು ಹೇಳಲಿ ಮೊದಲು ನನ್ನ ಆತ್ಮಕ್ಕೆ ಒಪ್ಪುವಂತಹ ವಿಚಾರ ಆದರೆ ಅದರಂತೆ ಕೆಲಸ ಮಾಡುವುದಕ್ಕೆ ತಯಾರಾಗುತ್ತೇನೆ. ಇಲ್ಲದಿದ್ದರೆ ಇಲ್ಲ. ಆದುದರಿಂದ ನಾನು ಹೇಳುವುದನ್ನು ಇತರರಮೇಲೆ ರಿಫ್ಲೆಕ್ಟ್ ಆಗುವಂತೆ ಹೇಳಿದರು ಎಂದು ಯಾರೂ ತಿಳಿದುಕೊಳ್ಳಬಾರದು.

ಮುಖ್ಯವಾಗಿ ಇಲ್ಲಿರುವುದು ರಾಜ್ಯದ ಹೆಸರನ್ನು ಯಾವ ರೀತಿ ಇಡಬೇಕು ಎನ್ನುವುದು. ರಾಜ್ಯದ ಹೆಸರನ್ನು ಯಾವ ರೀತಿ ಇಡಬೇಕೆನ್ನುವುದನ್ನು ಹೇಳುವಾಗ ಇದು ದೊಡ್ಡದಾಗಿರಬೇಕೇ ಇಲ್ಲವೇ ಸಣ್ಣ ರಾಜ್ಯವಾಗಿರಬೇಕೇ ಎನ್ನುವುದನ್ನು ಹೇಳಬೇಕಾದರೆ ಅದು ಒಂದು ದೊಡ್ಡ ಕತೆಯೇ ಆಗುತ್ತದೆ. ಏಕೆಂದರೆ ಇವೊತ್ತು ಈ ಭೂಮಿಯಲ್ಲಿ ಒಂದೇ ತರಹದ ರಾಜ್ಯಗಳು ಇರಬೇಕು ಎನ್ನುವುದಕ್ಕೆ ಒಂದು ರೀತಿಯಾದ ಪ್ರಯೋಗ ಮಾಡಿದ್ದಾರೆ. ಅನೇಕ ಭಾಷೆಗಳ ಜನರು ಒಟ್ಟಾಗಿ ಒಂದೇ ರೀತಿಯಾದ ರಾಜ್ಯವನ್ನು ಮಾಡಿಕೊಂಡು ಆಡಳಿತ ನಡೆಸಿರತಕ್ಕ ಉದಾಹರಣೆಗಳೂ ಕೆಲವು ಇಂದಿನ ಪ್ರಜಾಪ್ರಭುತ್ವದಲ್ಲಿ ಯೂರೋಪಿನಲ್ಲಿ ಕೆಲವು ಕಡೆಗಳಲ್ಲಿವೆ. ಚಿಕ್ಕ ಚಿಕ್ಕ ರಾಜ್ಯಗಳೂ ಆಡಳಿತ ನಡೆಸಿರುವ ಉದಾಹರಣೆಗಳೂ ಇವೆ. ಬೇರೆ ರಾಜ್ಯಗಳಲ್ಲಿ ಕೆಲಸ ಯಾವ ರೀತಿ ನಡೆಯು

(ಶ್ರೀ ಎಚ್. ಎನ್. ನಂಜೇಗೌಡ)

ತ್ತಿವೆ ಎನ್ನುವುದನ್ನು ನಾವು ನೋಡಿದ್ದೇವೆ. ಉದಾಹರಣೆಯಾಗಿ ಕೆಲವು ಕಡೆ ದೊಡ್ಡ ರಾಜ್ಯಗಳು ಎಂದರೆ ಯು. ಪಿ. ಅಂತಹ ದೊಡ್ಡ ರಾಜ್ಯಗಳಲ್ಲಿ ಯಾವ ರೀತಿ ಆಡಳಿತ ನಡೆಸುತ್ತಿವೆ ಎನ್ನುವುವನ್ನೂ ನಾವು ನೋಡಿದ್ದೇವೆ. ಇದೇ ರೀತಿ ಅಮೇರಿಕಾ ಸಂಸ್ಥಾನದಲ್ಲಿ ಸುಮಾರು ನಲವತ್ತು ಲಕ್ಷ ಜನಸಂಖ್ಯೆ ಇರುವ ಕಡೆಗಳಲ್ಲಿ ಯಾವ ರೀತಿ ಕೆಲಸಗಳನ್ನು ಮಾಡುತ್ತಿದ್ದಾರೆ ಎನ್ನುವುದನ್ನೂ ನಾವು ತಿಳಿದಿದ್ದೇವೆ. ಇದೇ ರೀತಿ ರಷ್ಯಾ ದೇಶದಲ್ಲೂ ಕೂಡ ಅಲ್ಲಿರುವ ಸೋವಿಯಟ್ ಪೊಲಿಟೀಬ್ಯೂರೋ ಮೂಲಕ ಯಾವ ರೀತಿ ಆಡಳಿತ ನಡೆಸುತ್ತಿದ್ದಾರೆ ಎನ್ನುವುದನ್ನು ನಾವು ಕೇಳಿ ತಿಳಿದುಕೊಂಡಿದ್ದೇವೆ. ಇವನ್ನೆಲ್ಲಾ ನಾವು ಗಮನದಲ್ಲಿ ಇಟ್ಟುಕೊಂಡು ವಿಚಾರ ಮಾಡುವಾಗ ಬಹಳ ಪ್ರಾಮುಖ್ಯವಾದ ಬೇರೆ ಬೇರೆ ರಾಜ್ಯಗಳ ಜನರು ಬೇರೆ ಬೇರೆ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದ್ದಾರೆ. ಪ್ರಜಾಪ್ರಭುತ್ವದ ಪದ್ಧತಿಗಳಲ್ಲಿ ಆಡಳಿತ ನಡೆಸುತ್ತಿರುವ ಚಿಕ್ಕ ಪುಟ್ಟ ರಾಜ್ಯಗಳು ಕೂಡ ದಕ್ಷತೆಯಿಂದ ಆಡಳಿತ ನಡೆಸುತ್ತಿವೆ ಎನ್ನುವುದನ್ನು ಕೇಳಿ ತಿಳಿದುಕೊಂಡಿದ್ದೇವೆ, ದೊಡ್ಡ ರಾಜ್ಯಗಳು ಇರುವ ಕಡೆ ಯಾವ ರೀತಿಯಾಗಿ ಆಡಳಿತ ನಡೆಸುತ್ತಿದ್ದಾರೆ ಎನ್ನುವುವನ್ನೂ ನೋಡಿ ನಾವು ತಿಳಿದುಕೊಂಡಿದ್ದೇವೆ. ಬೃಹದಾಕಾರವಾಗಿರುವ ದೊಡ್ಡ ರಾಜ್ಯಗಳಲ್ಲಿ ಆಡಳಿತ ನಡೆಸಲು ಯಾವ ರೀತಿಯಾಗಿ ಪ್ರಜಾಪ್ರಭುತ್ವದ ನೀತಿಗಳನ್ನು ಅನುಸರಿಸುತ್ತಿದ್ದಾರೆ ಎನ್ನುವುದನ್ನೂ ಕೇಳಿ ತಿಳಿದಿದ್ದೇವೆ. ಮತ್ತು ಪ್ರಜಾಪ್ರಭುತ್ವಕ್ಕೆ ಧಕ್ಕೆ ಬಾರದ ರೀತಿಯಲ್ಲಿ ದಕ್ಷತೆಯಿಂದ ಆಡಳಿತ ನಡೆಸುತ್ತಿದೆ ಎನ್ನುವುದನ್ನೂ ಅನೇಕ ಜನರು ಒಪ್ಪಿಕೊಂಡಿದ್ದಾರೆ. ಆದುದರಿಂದ ಪ್ರಜಾಪ್ರಭುತ್ವದಲ್ಲಿರುವ ಪ್ರತಿನಿಧಿಗಳು ಇರುವ ಕಡೆ ಸಾಮಾನ್ಯ ಪ್ರಜೆಗೆ ಅನುಕೂಲವಾಗುವಂತೆ ಯಾವ ರೀತಿ ಆಡಳಿತ ನಡೆಯುತ್ತಿದೆ ಎನ್ನುವುದನ್ನೂ ನಾವು ಕೇಳಿ ತಿಳಿದುಕೊಂಡಿದ್ದೇವೆ. ಬಹುಶಃ ಅಮೇರಿಕಾದಲ್ಲಿ ಇರುವ ರಾಜ್ಯಾಂಗವನ್ನು ನೋಡಿದರೆ ಮತ್ತು ಇಲ್ಲಿರುವ ಪದ್ಧತಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ನಮಗೆ ಇನ್ನೂ ಚೆನ್ನಾಗಿ ಎಲ್ಲ ವಿಚಾರಗಳೂ ತಿಳಿಯುತ್ತವೆ. ಸೋವಿಯಟ್ ರಾಜ್ಯಾಂಗದಲ್ಲೂ ಕೂಡ ಅಲ್ಲಿನ ಆಡಳಿತ ನಡೆಸತಕ್ಕವರು ಒಂದು ರೀತಿಯಾದ ಪದ್ಧತಿ ಅನುಸರಿಸುತ್ತಿದ್ದಾರೆ. ಇದರಂತೆ ಅಮೇರಿಕಾದಲ್ಲಿ ಕೂಡ ಒಂದು ರೀತಿಯಾದ ಪದ್ಧತಿ ಅನುಸರಿಸುತ್ತಿದ್ದಾರೆ. ಇಲ್ಲಿನ ಜನತೆಯು ಕೂಡ ದಕ್ಷತೆಯಿಂದ ರಾಜ್ಯಭಾರ ನಡೆಸುತ್ತಾ ಬರುತ್ತಿದ್ದಾರೆ. ರಾಜ್ಯ ದೊಡ್ಡದಾಗಿರಬೇಕೇ ಇಲ್ಲವೇ ಚಿಕ್ಕದಾಗಿರಬೇಕೇ ಎಂದರೆ ಇದರ ಸಮಸ್ಯೆಯೇ ಬೇರೆಯಾಗುತ್ತದೆ. ಇಲ್ಲಿ ಆ ಪ್ರಶ್ನೆ ಬರುವುದಿಲ್ಲ. ಇಲ್ಲಿ ಇರುವುದು ಬರೀ ರಾಜ್ಯಕ್ಕೆ ಹೆಸರು ಇಡುವ ಪ್ರಶ್ನೆ ಇಷ್ಟೇ. ಇದರಲ್ಲಿ ಆಡಳಿತ ಚೆನ್ನಾಗಿ ನಡೆಯಬೇಕು ಅಥವಾ ನಡೆಯುತ್ತಿಲ್ಲ ಎನ್ನುವುದು ಮುಖ್ಯವಲ್ಲ. ಇದು ಬೇರೆ ವಿಷಯವಾಯಿತು. ಇಲ್ಲಿ ಇರುವುದು ಬರೀ ಹೆಸರು ಇಡುವ ಪ್ರಶ್ನೆ. ಇಂತಹ ಪ್ರಶ್ನೆ ಬಂದಾಗ ಜನತೆಯಲ್ಲಿ ಯಾವ ರೀತಿಯಾದ ಮನೋಭಾವನೆ ಇರುತ್ತದೆ ಎನ್ನುವುದಕ್ಕಾಗಿ ಇಲ್ಲಿ ನಿರ್ಣಯ ತಂದಿದ್ದಾರೆ. ಇದೇ ಇಲ್ಲಿರುವ ಪ್ರಾಮುಖ್ಯವಾದ ಅಂಶ. ಕರ್ಣಾಟಕ ಎನ್ನುವ ಹೆಸರು ಇಡಬೇಕೇ ಇಲ್ಲವೇ ಹಳೆಯ ಮೈಸೂರಿನ ಜನ ಹೇಳುವಂತೆ ಕನ್ನಡ ನಾಡು ಎಂದಿರಬೇಕೇ ಎನ್ನುವ ವಿಚಾರದಲ್ಲಿ ಒಂದು ನಿರ್ಣಯ 1942—48ರಲ್ಲಿ ಆಗಿರುವ ಪ್ರಜಾಪ್ರತಿನಿಧಿ ಸಭೆಯಲ್ಲಿ ತಂದಿದ್ದರೆ, ಅದನ್ನು ಒಪ್ಪುತ್ತಿದ್ದರು. ಏಕೆಂದರೆ ಆಗ ಇದ್ದುದು ಕೇವಲ ಒಂಬತ್ತು ಜಿಲ್ಲೆಗಳಿಂದ ಕೂಡಿದ ಹಳೇ ಮೈಸೂರು ರಾಜ್ಯ. ರಾಜ್ಯ ಚಿಕ್ಕ ಸಂಸ್ಥಾನವಾಗಿತ್ತು ಆ ರಾಜ್ಯದವರು ಬೇಕಾದರೆ ಕನ್ನಡ ನಾಡು ಎಂದು ಆಗಲೇ ಹೆಸರು ಇಡಬಹುದಾಗಿತ್ತು ಮತ್ತು ಆಗ ಮಹಾರಾಜರು ಇದ್ದ ಕಾಲ. ಆಗಿನ ಜನ ಮಹಾರಾಜರನ್ನು ದೇವರು ಎಂದು ಕರೆಯುತ್ತಿದ್ದ ಕಾಲ. ಅಂದಿನ ಜನ ಇಂತಹ ಭಾವನೆಗೆ ಒಪ್ಪುತ್ತಿದ್ದರು. ಆಗಿನ ಜನ ಇಂತಹ ಒಂದು ನಿರ್ಣಯವನ್ನು ಯಾವ ಅನುಮಾನವೂ ಇಲ್ಲದೆ ಒಪ್ಪುತ್ತಿದ್ದರು ಎನ್ನುವುದು ನನ್ನ ಮನಸ್ಸಿಗೆ ಅರಿವಾಗುತ್ತದೆ.

ಅಂದು ಜನತೆ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದರು. ಆವೊತ್ತು ಕನ್ನಡ ನಾಡು ಎನ್ನುವ ಹೆಸರನ್ನು ಇಡಿ ಎಂದು ನಿರ್ಣಯ ತಂದಿದ್ದರೆ, ಶ್ರೀಮಾನ್ ರಾಚಯ್ಯನವರಾಗಲಿ, ಶ್ರೀಮಾನ್ ದೇವರಾಜ ಅರಸರವರಾಗಲಿ, ಶ್ರೀಮತಿ ನಾಗರತ್ನಮ್ಮನವರಾಗಲಿ, ಎಲ್ಲರೂ ಒಪ್ಪುತ್ತಿದ್ದರು. ಆದರೆ ಈವೊತ್ತಿನ ದಿವಸ ಆ ಪರಿಸ್ಥಿತಿ ಇಲ್ಲ. ಭಾಷೆಯ ಹೆಸರಿನಲ್ಲಿ ರಾಜ್ಯವಾಗಬೇಕು ಅದಕ್ಕಾಗಿ ಕನ್ನಡನಾಡು ಎಂದು ಹೆಸರಿಡಬೇಕು ಎಂದು ನಿರ್ಣಯ ಸೂಚಿಸಿದವರು ಹೇಳುತ್ತಿದ್ದಾರೆ. ಶ್ರೀಮಾನ್ ಗಂಗಾಧರರವರು ಒಂದು ತಿದ್ದುಪಡಿ ತಂದು ಸಂಸ್ಕೃತಿ ಮತ್ತು ಇತರ ಆಧಾರದ ಮೇಲೆ ಕರ್ನಾಟಕ ಎಂದು ಹೆಸರು ಇಡುವುದೇ ಸರಿಯಾಗಿದೆ ಎಂದು ಹೇಳಿದ್ದಾರೆ. 1947–48 ರಲ್ಲಿ ಕರ್ನಾಟಕ ಅಥವಾ ಕನ್ನಡನಾಡು ಎಂದು ಹೆಸರಿಸಿ ಎನ್ನುವ ನಿರ್ಣಯ ತಂದಿದ್ದರೆ ಆವೊತ್ತಿನ ದಿನ ಜನ ಒಪ್ಪುತ್ತಿದ್ದರು. ಈವೊತ್ತಿನ ಪರಿಸ್ಥಿತಿ ಏನಿದೆ ಎಂದರೆ ರಾಜ್ಯ ಇಬ್ಭಾಗವಾಗಬೇಕು ಎನ್ನುವಂಥ ಕೂಗು ಕೇಳುತ್ತಿದ್ದೇವೆ. 1958 ರಿಂದ 1969 ರವರೆಗೆ ಈ ರಾಜ್ಯದಲ್ಲಿ ಇದ್ದಂಥ ಮನೋಭೂಮಿಕೆ

ನೋಡಿದರೆ ಈ ತಿದ್ದುಪಡಿಯನ್ನು ಒಪ್ಪುತ್ತದೆಯೋ ಎನ್ನುವ ಅನುಮಾನವಾಗಿದೆ. ಈಗ ರಾಜ್ಯ ಒಮ್ಮುಖವಾಗಿದೆಯೇ? ರಾಜ್ಯದ ಜನತೆಯ ಮನಸ್ಸಿನಲ್ಲಿ ಭಾಷೆಯ ಗಮನ ಇದೆಯೋ ಅಥವಾ ಸಂಸ್ಕೃತಿ ಕಡೆ ಅವರ ಗಮನ ಇದೆಯೋ ಎಂದು ನೋಡಿದರೆ ಆ ಪರಿಸ್ಥಿತಿ ಈವೊತ್ತಿಲ್ಲ. ರಾಜ್ಯದ ಮನೋಭೂಮಿಕೆಯಲ್ಲಿ ರಾಜ್ಯವನ್ನು ತುಂಡು ಮಾಡಬೇಕು ಎನ್ನತಕ್ಕಂಥ ಚಿತ್ರ ಈವೊತ್ತು ಬಹಳ ಮಟ್ಟಿಗೆ ಇದೆ. ಇದು ದುಃಖಕಾರಕವಾದ ಸಂಗತಿ. ನಾನು ಸಾಹಿತಿಯೊಬ್ಬರನ್ನು ನಮ್ಮ ರಾಜ್ಯಾಡಳಿತದ ಬಗ್ಗೆ ನಿಮ್ಮ ಅಭಿಪ್ರಾಯ ಏನು ಎಂದು ಕೇಳಿದೆ. ಅವರು ಬುದ್ಧಿಜೀವಿಗಳ ಮೇಲೆ ಬುದ್ಧಿಯೇತರರ ಧಾಳಿಯಾಗಿದೆ ಎಂದು, ಅಂದರೆ ಜಾಣರಮೇಲೆ ದಡ್ಡರು ನಡೆಸುತ್ತಾ ಇರತಕ್ಕಂಥ ಧಾಳಿ. ಇದು ತಪ್ಪೋ ಸರಿಯೋ ಎನ್ನುವ ಪ್ರಶ್ನೆ ಬೇರೆ. ಒಬ್ಬ ಪ್ರಾಜ್ಞರು ಹೇಳಿದ ಮಾತನ್ನು ಇಲ್ಲಿ ಹೇಳಿದ್ದೇನೆ. ಈರೀತಿ ಅವರು ಹೇಳಿದುದನ್ನು ಜ್ಞಾಪಿಸಿಕೊಂಡರೆ ನನಗೆ ಚೇಳು ಕುಟುಕಿದಂತಾಗುತ್ತದೆ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ದಡ್ಡರಿಗೆ ಓಟು ಕೊಟ್ಟಿದ್ದಾರಲ್ಲಾ.

ಶ್ರೀ ಹೆಚ್. ಎನ್. ನಂಜೇಗೌಡ.—ಈ ಪ್ರಜಾಪ್ರಭುತ್ವದಲ್ಲಿ Men of eminence; men of knowledge, men of integrity and character ಇರಬೇಕು. ಆದರೆ ಸಾಮಾನ್ಯವಾಗಿ ರಾಜಕೀಯ ವಾತಾವರಣ ಹೇಗಿದೆ ಎಂದರೆ, ಎಲ್ಲಿ ಯಾವ ಜಾತಿಯವರು ಅಧಿಕ ಸಂಖ್ಯೆಯಲ್ಲಿದ್ದಾರೋ ಆ ಜಾತಿಯವರನ್ನೇ ನಿಲ್ಲಿಸಿ, ಅಂಥವರು ಆರಿಸಿ ಬರುವ ಪರಿಸ್ಥಿತಿ ಇದೆ. ಆದರೆ ದೇವರಾಜ ಅರಸರು ಮತ್ತು ಚನ್ನಬಸಪ್ಪನಂಥವರು ಈ ತರಹ ಚುನಾವಣೆಯಲ್ಲಿ ಆರಿಸಿ ಬರುವುದು ಬಹಳ ವಿರಳ. ನನ್ನ ವಿಷಯವನ್ನೇ ಹೇಳುವುದಾದರೆ ನಾನು ಅಂತಹ ಜಾಣನಲ್ಲವೇ ಇದ್ದರೂ ಅಲ್ಲಿಯ ಜನಗಳು ಈ ಸಭೆಯಲ್ಲಿ ನಾಲ್ಕು ಮಾತಗಳನ್ನಾಡುವ ಹಾಗೆ ನಮ್ಮ ಜಾತಿಯವರು ಯಾರಾದರೂ ಇದ್ದಾರೆಯೇ ಎನ್ನುವುದನ್ನು ನೋಡಿಕೊಂಡು ನನ್ನನ್ನು ಚುನಾವಣೆಗೆ ನಿಲ್ಲಿಸಿದರು. ಅದು ಹೇಗಾದರೂ ಇರಲಿ ಚುನಾಯಿತರಾಗಿ ಇಲ್ಲಿಗೆ ಬಂದಮೇಲೆ ಎಲ್ಲರೂ ದೇಶದ ಹಿತಕ್ಕಾಗಿ ಶ್ರಮಿಸಬೇಕು ಕಮಲ ಕೆಸರಿನಲ್ಲಿ ಹುಟ್ಟಿದರೂ ಕೂಡ, ಅದು ಮುಂದೆ ಯಾವರೀತಿ ನಿಷ್ಕಲ್ಮಷತೆಯಿಂದ—ಶೋಭಿಸುತ್ತದೋ ಅದೇರೀತಿ ನಾವು ಎಂತಹ ಕಲ್ಮಷ ವಾತಾವರಣದಲ್ಲಿ ಚುನಾಯಿತರಾಗಿ ಬಂದರೂ ಕೂಡ ಇಲ್ಲಿಗೆ ಬಂದಮೇಲೆ ಕಮಲದೋಪಾದಿಯಲ್ಲಿ ಈ ರಾಜ್ಯವನ್ನು ರೂಢಿಸದೇ ಇದ್ದರೆ ಏನು ಪ್ರಯೋಜನ? ಶ್ರೀಮಾನ್ ಚನ್ನಬಸಪ್ಪನವರ ವಿಚಾರ ತೆಗೆದುಕೊಂಡರೆ ಅವರ ಕ್ಷೇತ್ರದಲ್ಲಿ ಗೌಡರೇ ಜಾಸ್ತಿ ಸಂಖ್ಯೆಯಲ್ಲಿದ್ದಾರೆ. ಅಲ್ಲಿ ಜಾತೀಯತೆ ಇಲ್ಲದಿದ್ದ ಕಾರಣ ಅವರು ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಯಿತು. ಹೀಗೆ ನಿಜಲಿಂಗಪ್ಪನವರು ಕಾಂಗ್ರೆಸ್ಸಿನವರು, ರಂಗನಾಥ ಪಿ.ಎಸ್.ಪಿ.ಯವರು ಎಂದು ಇರಬಾರದು. ನಂಜೇಗೌಡ ಯಾವ ಜನಾಂಗದವನೇ ಆಗಿರಲಿ, ಶ್ರೀಮಾನ್ ಗಂಗಾಧರ್ ಯಾವ ಜನಾಂಗದವರೇ ಆಗಿರಲಿ ಅವರನ್ನು ಜನಾಂಗದ ಆಧಾರದಮೇಲೆ ಚುನಾಯಿಸುವ ಮನೋಭಾವ ಹೋಗಬೇಕು. ಶ್ರೀ ರಂಗನಾಥ್ ನಮ್ಮ ಜನಾಂಗದವರು ಎಂದು ಯೋಚನೆ ಮಾಡುವುದು, ಈ ಮಟ್ಟದಲ್ಲಿ ನಡೆದುಕೊಳ್ಳುವುದಕ್ಕೆ ಇಳಿದರೆ ಈ ರಾಜ್ಯದ ಹೆಸರನ್ನು ಸಂಸ್ಕೃತಿಗೆ ಸರಿಯಾಗಿ ಇಡುವ ಮಟ್ಟಕ್ಕೆ ತಲುಪಿದ್ದೇವೆಯೇ ಎಂದು ಅಧ್ಯಕ್ಷರನ್ನು ಕೇಳುತ್ತೇನೆ. ಈ ನಿರ್ಣಯದ ಚರ್ಚೆಗೆ ಏಕೆ ಅವಕಾಶ ಕೊಟ್ಟಿರಿ ಎನ್ನುವುದು ನನಗೆ ಅರ್ಥವಾಗಿಲ್ಲ. ನಮ್ಮ ರಾಜ್ಯಾದಲ್ಲಿನ ಮನೋ ಭೂಮಿಕೆ ಸರಿಯಿಲ್ಲದೆ, ವಾತಾವರಣ ಸರಿಯಿಲ್ಲದೆ ಇರುವಾಗ ರಾಜ್ಯವನ್ನು ಎರಡು ಮಾಡಬೇಕು ಎನ್ನುವ ಮಾತು ಕೇಳಿ ಬರುತ್ತಿರುವಾಗ ಇಂಥ ಪೂಜ್ಯವಾದ ನಿರ್ಣಯವನ್ನು ತಂದು ಸಭೆಯಮುಂದೆ ಚರ್ಚೆಗೆ ಇಟ್ಟಿರುವುದು ಸರಿಯೇ ಎನ್ನುವ ಮಟ್ಟಕ್ಕೆ ನಾನು ತಲುಪಬೇಕಾಗಿದೆ. ಇದರ ವಿಷಯ ಕುರಿತು ಚರ್ಚೆ ಮಾಡುವಾಗ ಕೆಲವಾರು ವಿಷಯಗಳನ್ನು ನಾವು ಚರ್ಚೆ ಮಾಡಬೇಕಾಗುತ್ತದೆ. ತಂದೆ ಸತ್ತಾಗ ಹನ್ನೊಂದನೇ ದಿನದ ಕರ್ಮವನ್ನು ಮಾಡುವಾಗ ಮಗನ ಮನಸ್ಸು ಹೇಗಿರುತ್ತದೆ, ದುಃಖ ಜಾಸ್ತಿ ಆಗಬಾರದು, ದುಃಖ ಪ್ರದರ್ಶನ ಮಾಡಿದರೂ ಕೆಲವಾರು ದುಃಖಗಳನ್ನು ಅದಗಿಸಿಕೊಂಡಿರುವಂಥ ಸಂದರ್ಭದಲ್ಲಿ ಈ ದಿನದ ಚರ್ಚೆಯಲ್ಲಿ ಭಾಗವಹಿಸಿರುವ ಕಾಲದಲ್ಲಿ ನಾನು ಅನೇಕ ಸಂಗತಿಗಳನ್ನು ನುಂಗಿಕೊಂಡು ಮಾತನಾಡುತ್ತಿದ್ದೇನೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಏಕೆ ಹೀಗಾಯಿತು, ಏನು ಕಾರಣದಿಂದ ಒಳ್ಳೆಯ ವಾತಾವರಣ ಸೃಷ್ಟಿಯಾಗಿಲ್ಲ? ಸ್ವಜನ ಪಕ್ಷಪಾತ ಮುಂತಾದುವು ತಲೆ ಹಾಕಿ ಮಂತ್ರಿಮಂಡಲವನ್ನು ರಚಿಸುವುದಕ್ಕೆ ಹೋಗುವುದು, ಇಂಥವೇ ಕಾರಣ ಎಂದು ಹೇಳಬಹುದು. ಈ ರೀತಿಯಾಗಿ ಸ್ವಜನಪಕ್ಷಪಾತದಿಂದ ಹೋದಾಗ ಬುದ್ಧಿ ಜೀವಿಗಳಿಗೆ ಪ್ರಾಮುಖ್ಯತೆ ಬರುವುದಿಲ್ಲ. ಬುದ್ಧಿ ಜೀವಿಗಳಿಗೆ ಯಾವಾಗ ಪ್ರಾಮುಖ್ಯತೆ ಬರುವುದಿಲ್ಲವೋ ಆವಾಗ ಒಳ್ಳೆಯ ಆಡಳಿತವಿರುವುದಿಲ್ಲ. ಸ್ವಜನ ಪಕ್ಷಪಾತದಿಂದ

(ಶ್ರೀ ಎಚ್. ಎನ್. ನಂಜೇಗೌಡ)

ಏನಾಗಿವೆ ಎಂದರೆ ಒಂದು ಮಗುವಿಗೆ ಒಂದು ದೊಡ್ಡ ಬಂಡೆಯನ್ನು ತಲೆಯಮೇಲೆ ಎತ್ತಿಕೋ ಎಂದು ಹೇಳಿದರೆ ಎಷ್ಟು ಕಷ್ಟವಾಗುತ್ತದೆಯೋ ಹಾಗೆ ಆಗಿವೆ. ಎಲ್ಲರಿಗೂ ಒಂದು ಲಿಮಿಟೇಷನ್ಸ್ ಇರುತ್ತವೆ. ಆಡಳಿತದಲ್ಲಿ ಶ್ರದ್ಧೆ ವಹಿಸಿ ಕೆಲಸ ಮಾಡಬೇಕಾದರೆ ಮನುಷ್ಯನಿಗೆ ಅನುಭವ ಇರಬೇಕು, ಇದೆಲ್ಲ ಇದ್ದರೆ ಅವರಿಗೆ ಫೇಲ್ಯೂರ್ಸ್ ಇರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಮಾನ್ಯ ಚನ್ನಬಸಪ್ಪನವರ ವಿಷಯವನ್ನು ತೆಗೆದುಕೊಂಡರೆ ಅವರು ದಕ್ಷ ಆಡಳಿತಗಾರರು, ಅಂಥ ಮಂತ್ರಿಗಳು ದೊರೆಯುವುದಿಲ್ಲವೆಂದು ಹೇಳುತ್ತಾರೆ. ಕೆಲವರು ಅವರಿಗೆ ಯಾವ ಮಾತೂ ಹೇಳುವುದಕ್ಕೆ ಆಗುವುದಿಲ್ಲ. ಅವರಂತೆ ಹೆಚ್ಚು ಸ್ಟ್ರಿಕ್ಟ್ ಆದರೂ ರಾಜಕೀಯದಲ್ಲಿ ನಿರ್ವಹಿಸುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಹತ್ತು ಜನರ ಮುಖಂಡರಾಗಿರುವುದಕ್ಕೆ ಅವರು ಅನ್‌ಫಿಟ್, ನಾಯಕರಾಗುವುದಕ್ಕೆ ಅನ್‌ಫಿಟ್, ಅವರಲ್ಲಿ ದಕ್ಷತೆ ಇದ್ದರೂ ಟ್ಯಾಕ್ಟ್ ಇಲ್ಲ ಎಂದು ಕೆಲವರು ಹೇಳುತ್ತಾರೆ. ಮಂತ್ರಿಮಂಡಲದಲ್ಲಿ ತೆಗೆದುಕೊಂಡಮೇಲೆ ಅವರಿಗೆ ಮೆಜಾರಿಟಿ ಬರಬೇಕು, ಸಪ್ಪೋರ್ಟ್ ಇರಬೇಕು ಅವಿಶ್ವಾಸ ಸೂಚನೆಯೇನಾದರೂ ಬಂದರೆ ಅದರ ವಿರುದ್ಧ ಸರಿಯಾದ ಬೆಂಬಲವಿರಬೇಕು ಇಂಥ ವಿಚಾರಗಳಿಗೇ ಗಮನ ಕೊಡುತ್ತಾರೆ. ನಮ್ಮ ಊರಿಗೆ ರಸ್ತೆ ಮಾಡಿಸಿ, ಬಾವಿ ಕೊಡಿಸಿ ಎನ್ನುವ ಸಣ್ಣ ಸಣ್ಣ ವಿಚಾರಗಳನ್ನು ಸದಸ್ಯರು ಕೇಳಬೇಕೆ ಹೊರತು ರಾಜ್ಯದ ಸಮಸ್ಯೆಗಳ ಬಗ್ಗೆ ವಿಚಾರ ಮಾಡಕೂಡದು, ಕಾವೇರಿ ಬೇಸಿನ್‌ನಲ್ಲಿ ಏಕೆ ಏನೂ ಆಗುವುದಿಲ್ಲ, ಕೃಷ್ಣ ಬೇಸಿನ್‌ನಲ್ಲಿ ಏಕೆ ಏನನ್ನೂ ಮಾಡಿಲ್ಲ ಎಂದು ಕೇಳಬಾರದು, ಫರ್ಟಿಲೈಸರ್ಸ್ ಫ್ಯಾಕ್ಟರಿ ಏನಾಯಿತು, ಸ್ಟೀಲ್ ಫ್ಯಾಕ್ಟರಿ ಏಕೆ ಹೋಯಿತು ಎಂದು ಕೇಳಬಾರದು. ಹೇಳಿದುದನ್ನು ಕೇಳುವವರಿರಬೇಕು. ಅಂಥವರ ಆಡಳಿತವಿದ್ದರೆ ರಾಜ್ಯದಲ್ಲಿ ಒಳ್ಳೆಯ ಮನೋಭೂಮಿಕೆ ತಯಾರಾಗಬೇಕಾದರೆ ಏನಾಗಬೇಕು ಎಂಬುದನ್ನು ಯೋಚನೆ ಮಾಡಬೇಕು. ನಾನು ಇರುವ ಕೊಠಡಿಗೆ ನನ್ನ ಕ್ಷೇತ್ರದ ಜನರು ಬಂದಾಗ ಅವರನ್ನು ಕೊಠಡಿ ಬಿಟ್ಟು ಹೋಗಿ ಎಂದು ಹೇಳುವುದಕ್ಕಾಗುವುದಿಲ್ಲ. ಎಂಥ ಜನರು ಬರುತ್ತಾರೆಂದೂ ಹೇಳುವುದಕ್ಕೆ ಆಗುವುದಿಲ್ಲ. ನಾವು ಏನೇನೋ ಮಾತನಾಡುತ್ತೇವೆ. ಮಕ್ಕಳ ಮನಸ್ಸು ಇದ್ದ ಹಾಗೆ ಜನರ ಮನಸ್ಸು ಇರುತ್ತದೆ. ಜಾತೀಯತೆಯ ಮಾತು, ಎರಡು ಮೈಸೂರು ಮಾತು ಇವನ್ನೆಲ್ಲ ಮಾತಾನಾಡುತ್ತ ಹೋದರೆ ಜನರೂ ಅದನ್ನೇ ನೆನೆದುಕೊಂಡು ಊರುಗಳಿಗೆ ಹೋಗುತ್ತಾರೆ. ಅವರ ಪ್ರಚೋದನೆಯಿಂದ ಅದು ರಾಜ್ಯದಲ್ಲೆಲ್ಲ, ಹರಡುತ್ತಿದೆ, ಇಂಥ ಮನೋಭೂಮಿಕೆ ರಾಜ್ಯದಲ್ಲಿ ತಯಾರಾಗುತ್ತಿದೆ. ಇದಕ್ಕೆ ಏಕೆ ಅವಕಾಶ ಕೊಡಬೇಕು ?

ನಮ್ಮ ಮುಂದೆ ಇರುವ ನಿರ್ಣಯವನ್ನು ಒಪ್ಪಬೇಕೋ ಬಿಡಬೇಕೋ ಎನ್ನುವುದು ಬೇರೆ ವಿಷಯ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಇದು ಒಂದು ಒಳ್ಳೆಯ ನಿರ್ಣಯ. ನಮ್ಮ ಸಂಸ್ಕೃತಿಯ ಆಧಾರದಮೇಲೆ, ಒಳ್ಳೆಯ ಪುಣ್ಯ ಕೆಲಸಗಳನ್ನು ಸ್ಮರಣೆಗೆ ತರತಕ್ಕ, ಕಿತ್ತೂರು ಚನ್ನಮ್ಮ, ಬೆಳವಾಡಿ ಮಲ್ಲಮ್ಮ ಇಂಥವರನ್ನು ನೆನಪಿಗೆ ತರತಕ್ಕ ಸಂಸ್ಕೃತಿಯ ಆಧಾರದಮೇಲೆ ಇರತಕ್ಕ ಕರ್ಣಾಟಕ ಎನ್ನುವ ಹೆಸರನ್ನು ಇಡಬೇಕು ಎಂದು ತಂದಿರುವ ತಿದ್ದುಪಡಿ ನಿರ್ಣಯ ಒಳ್ಳೆಯ ನಿರ್ಣಯ. ಈ ಹೊತ್ತು ಈ ನಿರ್ಣಯವನ್ನು ತಂದಿರುವುದರಿಂದ ಒಳ್ಳೆಯ ಪರಿಣಾಮವೇ ಆಗಬಹುದು. ಮದುವೆ ಮನೆಯಲ್ಲಿ ಸೇರಿರುವ ಜನಗಳಿಗೆ ಮದುವೆ ಮಾಡಿದಷ್ಟು ಸಂತೋಷವಾಗಬಹುದು. ತಂದೆ ತಾಯಿಗಳಿಗೆ ಹಿರಿಯ ಮಗನಿಗೆ ಮಾಡತಕ್ಕ ಮೊದಲನೇ ಮದುವೆಯಲ್ಲಿ ಎಷ್ಟು ಸಂತೋಷವಾಗಬಹುದೋ ಅಷ್ಟು ಸಂತೋಷವಾಗಬಹುದು, ಅಂಥ ಸಂಭ್ರಮ ರಾಜ್ಯದಲ್ಲಿ ಕಂಡು ಬರಬಹುದು ಅಂಥಾ ಸಂಭ್ರಮ ಕಂಡುಬರಬೇಕಾದರೆ, ಜನತೆಯ ಮನೋಭೂಮಿಕೆಯ ತಯಾರಿ ನಡೆಯಬೇಕು. ಅದನ್ನು ಹೇಗೆ ನಡೆಸಬೇಕು ? ನಮ್ಮ ರಾಜ್ಯ, ನಮ್ಮ ಬಯಕೆಯಂತೆ ವಿಶಾಲವಾಗಿ ದೊಡ್ಡದಾದಮೇಲೆ ರಾಜ್ಯದ ಪ್ರಗತಿ ಸಮಷ್ಟಿ ದೃಷ್ಟಿಯಿಂದ ಆಗಿ ಸರ್ವರಿಗೂ ಸಾರ್ವತ್ರಿಕವಾಗಿ ಸಮಾಜದಲ್ಲಿ ನ್ಯಾಯ ದೊರೆತಿದೆ ಎನ್ನುವ ನಂಬಿಕೆ ಹುಟ್ಟುವುದನ್ನು ಮೊದಲು ಮಾಡಬೇಕು. ಅನೇಕ ಭಾಗಗಳಲ್ಲಿರುವವರಿಗೆ ಕೆಲವೇ ಭಾಗದಲ್ಲಿರುವವರು ಅಥವಾ ಕೆಲವೇ ಜನರೆ ರಾಜ್ಯ ಸರ್ಕಾರವನ್ನು ನಡೆಸುವುದಕ್ಕೆ, ಅದರಿಂದ ಪ್ರಯೋಜನ ಪಡೆಯುವುದಕ್ಕೆ ಅವಕಾಶವಾಗಿದೆ ಎನ್ನುವುದು ಹೋಗಬೇಕು. ಈ ಹೊತ್ತು ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಎಂದರೆ ನಮ್ಮ ಆಡಳಿತ ಪದ್ಧತಿಯನ್ನು ಕುರಿತು ಮಾತನಾಡಿಕೊಳ್ಳುವುದು ಹೇಸಿಗೆ ಎನ್ನುವ ಮಟ್ಟಕ್ಕೆ ಬಂದಿದೆ. ಮನಸ್ಸು ಬಂದಹಾಗೆ ಮಾಡಬಹುದು ಎಂದು ಹೇಳುವಂಥ ಮಟ್ಟಕ್ಕೆ ಬಂದಿದೆ. ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ನಿಜಲಿಂಗಪ್ಪನವರು ಅಧಿಕಾರವನ್ನು ಬಿಟ್ಟು ಹೋಗುವುದಕ್ಕೆ ಒಂದು ಒಂದೂವರೆ ತಿಂಗಳಿಗೆ ಮುಂಚೆ ವಿದ್ಯುಚ್ಛಕ್ತಿ ದರವನ್ನು ಏರಿಸಿ ಹೋದರು. ಆಗ ಮಾನ್ಯ ವೀರೇಂದ್ರ ಪಾಟೀಲರೇ ಪಿ. ಡಬ್ಲ್ಯು. ಇಲಾಖೆಯ ಮಂತ್ರಿಗಳಾಗಿದ್ದರು. ಇವರು ಮುಖ್ಯ ಮಂತ್ರಿಗಳಾದಮೇಲೆ ಹಿಂದಿನ ರೇಟಿಗೆ ಇಳಿಸಲಾಗಿದೆ ಎಂದು ಹೇಳಿದರು. ಮೊದಲು ಇದ್ದ ದರವನ್ನು ಏರಿಸುವುದು, ಅದರಲ್ಲಿ ಆ ನಂತರ ಸ್ವಲ್ಪ ಕಡಿಮೆ

ಮಾಡುವುದು. ಹೀಗೆ ಮಾಡಿ ಜಿನರಲ್ಲಿ ಏನೂ ಅನುಕೂಲ ಮಾಡಿಕೊಟ್ಟರು ಎನ್ನುವ ಭಾವನೆ ಉಂಟು ಮಾಡುವುದಕ್ಕೆ ಪ್ರಯತ್ನ ಮಾಡುವುದು. ಇಂಥ ಟ್ಯಾಕ್ಟಿಕ್ಸ್ ಮಾಡಿದರೆ ಜನರಲ್ಲಿ ಒಳ್ಳೆಯ ಭೂಮಿಕೆ ಸೃಷ್ಟಿಯಾಗುತ್ತದೆಯೇ ? ವಿಶಾಲ ದೃಷ್ಟಿಯಿಂದ ರಾಜ್ಯದ ಹಿತಕ್ಕೆ, ರಾಜ್ಯದ ಜನತೆಯ ಸಮಷ್ಟಿ ದೃಷ್ಟಿಯಿಂದ, ಅವರು ಉದ್ಧಾರವಾಗಲಿ ಎನ್ನುವ ದೃಷ್ಟಿಯಿಂದ ಕಾರ್ಯಕ್ರಮವನ್ನು ನೀವು ತೆಗೆದುಕೊಂಡಿದ್ದೀರಿ ಎನ್ನುವ ಅಭಿಪ್ರಾಯ ಬಂದರೆ ಆವಾಗ ಜನತೆಯ ಮನೋಭೂಮಿಕೆ ವಿಶಾಲ ವಾಗುವುದಕ್ಕೆ ಅವಕಾಶವಾಗುತ್ತದೆ. ಜನರಿಗೆ ಮನಸ್ಸಿನಲ್ಲಿ ಕಲಸುಮೇಲೋಗರವಾಗಿ ಅವರು ತಳಮಳಗೊಂಡು ಈ ನಿರ್ಣಯವನ್ನು ಸ್ವೀಕಾರಮಾಡಲು ಸಿದ್ಧರಾಗಿಲ್ಲ. ಅವರಿಗೆ ಮನಸ್ಸಿಲ್ಲ. ದೇವರ ಪೂಜೆ ಮಾಡಬೇಕಾದರೆ ಮುಖ್ಯವಾಗಿ ಭಕ್ತಿ ಬೇಕು. ಅದಿದ್ದರೆ ಚೆನ್ನಾಗಿ ಪೂಜೆ ಮಾಡುವರು. ಪೂಜೆ ಮಾಡಬೇಕಾದರೆ ಮನಸ್ಸಿನಲ್ಲಿ ಕಲ್ಮಷವಿರಬಾರದು. ಈಗ ಕಲ್ಮಷವಿದೆ, ಅದು ಹೋಗಬೇಕು. ಸರಕಾರದವರು ಬೊಕ್ಕಸವನ್ನು ಲೂಟಿಮಾಡಿ ಕೆಲವೇ ಪ್ರದೇಶದವರಿಗೆ ಉದ್ಧಾರಮಾಡಿದ್ದಾರೆ ಎಂಬ ಸಂಶಯವುಂಟಾಗಿದೆ ಎಂಬ ಭಾವನೆಯಿದೆ. ಅದು ಸರಿಯೋ, ತಪ್ಪೋ ಗೊತ್ತಿಲ್ಲ. ಸರಕಾರ ಹಾಗೆ ಮಾಡಿದೆಯೋ ಇಲ್ಲವೋ ತಿಳಿಯದು ಇಂದು ಕೆಲವು ಪ್ರದೇಶಗಳಲ್ಲಿ ರಾಜ್ಯ ಸರಕಾರ ಹಣ ಖರ್ಚು ಮಾಡಿ ಕೆಲಸ ಬೇಕಾದ್ದನ್ನು ಮಾಡಿಕೊಟ್ಟು ತನ್ನ ಅಧಿಕಾರ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ ಎಂಬ ಅಭಿಪ್ರಾಯವಿದೆ. ಅದು ಹೋಗಬೇಕು.

6.00 P.M.

ಶ್ರೀ ಎಂ. ನಾಗಪ್ಪ.—ಈಗ ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ತಾಲ್ಲೂಕುವಾರು ಹಂಚಿದರೆ ಸರಿಹೋಗಬಹುದೇ ?

ಶ್ರೀ ಎಚ್. ಎನ್. ನಂಜೇಗೌಡ.—ಗಾಂಧೀಜೀಯವರು ಒಂದು ಪುಸ್ತಕ ಬರೆದಿದ್ದಾರೆ, ಅದರಲ್ಲಿ ನೇರವಾಗಿ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ಕೊಡಬೇಕು ಎಂದು ತಿಳಿಸಿದ್ದಾರೆ.

ಶ್ರೀ ಎಂ. ನಾಗಪ್ಪ.—ಸ್ವಜನಪಕ್ಷಪಾತ, ಬೇಕಾದವರಿಗೆ ಅಧಿಕಾರ ಕೊಡುವುದು ಮುಂತಾ ದ್ದೆಲ್ಲಾ ನಡೆಯುತ್ತಿದೆ ಎಂದು ಹೇಳುವಾಗ ಇರುವ ಅಧಿಕಾರವನ್ನು ವಿಕೇಂದ್ರೀಕರಣಮಾಡಿದರೆ ಅನುಕೂಲವಾಗಬಹುದಲ್ಲವೇ ?

ಶ್ರೀ ಎಚ್. ಎನ್. ನಂಜೇಗೌಡ.—ಆದರೆ ನಮ್ಮ ರಾಜ್ಯದಲ್ಲಿ ಅನೇಕ ಸಮಸ್ಯೆಗಳಿವೆ, ಕೃಷ್ಣಾ ನೀರಿನ ಸಮಸ್ಯೆಯಿದೆ, ಕಾವೇರಿ ನದಿ ನೀರಿನ ಸಮಸ್ಯೆ ಬೃಹದಾಕಾರವಾಗಿದೆ, 1974ರೊಳಗಾಗಿ ಕಾವೇರಿ ನೀರನ್ನುಪಯೋಗಿಸಿಕೊಳ್ಳದಿದ್ದರೆ ನಂತರ ತೊಂದರೆಯಾಗುವುದು. ಹಾಗಿರುವಾಗ ರಾಜ್ಯದ ಮುಖ್ಯಮಂತ್ರಿಗಳು ರಾಜ್ಯದ ಪ್ರಥಮ ಪ್ರಜೆಯಾಗಿ ಇರುವ ಸಮಸ್ಯೆಗಳಿಗೆ ಸಾಕಷ್ಟು ಗಮನ ಕೊಡಬೇಕಾಗಿದೆ.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಶ್ರೀ ನಾಗಪ್ಪನವರು ಹೇಳುವುದು ಕನಸಿನ ಕಜ್ಜಾಯ. ನಮ್ಮ ದೇಶದಲ್ಲಿ ಜಾತೀಯ ಭೂತ ಉಲ್ಬಣವಾಗಿದೆ. ಪಂಚಾಯಿತಿ ರಾಜ್ಯದ ಉದ್ದೇಶ ಸಾರ್ಥ ಕವಾಗಿಲ್ಲ, ಅದರಿಂದ ಹಿಂದುಳಿದವರಿಗೆ ನೋವಾಗಿದೆ, ಲಾಭವಾಗಿಲ್ಲ. ಅಧಿಕಾರ ವಿಕೇಂದ್ರೀ ಕರಣವಾದರೂ ಪ್ರಯೋಜನವಾಗುವುದಿಲ್ಲ.

ಶ್ರೀ ಎಂ. ನಾಗಪ್ಪ.—ಅಧಿಕಾರ ವಿಕೇಂದ್ರೀಕರಣವಾದರೆ, ಸಾಕಷ್ಟು ಕೆಳಮಟ್ಟಕ್ಕೆ ಹೋದರೆ ಉಪಯೋಗವಾಗುವುದು.

ಶ್ರೀ ವಿ. ಎನ್. ಪಾಟೀಲ್.—ಪ್ರೈವೇಟ್ ಆಸ್ತಿ ಇರಬಾರದು, ಎಲ್ಲವೂ ರಾಷ್ಟ್ರದ್ದಾಗಬೇಕು. ಹಾಗಾದಾಗ ಜಾಸ್ತಿ ಹೊಡೆದಾಟವಿರುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಮ್ಮ ಮೂಲಕ ಒಂದು ಕ್ಲಾರಿಫಿಕೇಷನ್ ಕೇಳಬೇಕೆಂದು ಅಪೇಕ್ಷೆಪಡುತ್ತೇನೆ. ಅಧಿಕಾರ ವಿಕೇಂದ್ರೀಕರಣದ ಮಾತು ಬಂತು. ಅಧಿಕಾರ ವಿಕೇಂದ್ರೀಕರಣ ಮಾಡಿದರೆ ಕೆಲವರಿಗೆ ಕೆಲವು ಪಾಕೆಟ್ಸ್ ಬರುವಹಾಗೆ ಆಗಿಬಿಟ್ಟು, ಸರ್ವಾಧಿಕಾರ ಬಂದು ಉಳಿದವರು ಏನೂ ಅಲ್ಲಿ ನಿರೀಕ್ಷಿಸಲು ಸಾಧ್ಯವಾಗದೇ ಇರುವ ಕಾಲ ಬಂದರೂ ಬರಬಹುದು ಎಂಬ ಭಯ ಇದೆ ಎಂಬುವುದು ಗೊತ್ತೇ ?

ಶ್ರೀ ಎಚ್. ಎನ್. ನಂಜೇಗೌಡ.—ಶ್ರೀಮಾನ್ ಪಾಟೀಲ್‌ರವರು ಕೇಳುತ್ತಾ ಇದ್ದರು, ಕೊಳಕು ಇದೆ ಅಂತ ಹೇಳುತ್ತಾಇದ್ದಾರೆ, ಅದನ್ನು ನಿರ್ಮೂಲ ಮಾಡುವುದಕ್ಕೆ ಔಷಧಿ ಹಾಕಬೇಕು. ಯಾವಾಗಲೂ ಸಮತವಾದಿಗಳಿಗೆ ಬಹಳ ಆತುರ ಸ್ವಲ್ಪ ತಡೆದುಕೊಳ್ಳಿರಿ. ನಾನು ಸೌಮ್ಯವಾದಿ. ಶ್ರೀಮಾನ್ ಕೆ. ಪ್ರಭಾಕರ್‌ರವರು ಅನ್ಯಾಯವಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದೇವೆ ಎಂದು ಹೇಳಿದರು. ನಾವು ಯಾವುದನ್ನು ಒಪ್ಪಿಕೊಂಡಿದ್ದೇವೆ ಯಾವುದನ್ನು ಒಪ್ಪಿಕೊಂಡಿಲ್ಲ ಅಂತ ಅನ್ನುವುದು ಪ್ರಶ್ನೆ ಅಲ್ಲ.

ಚೇರ್ಮನ್‌ರವರು.—ಈಗ ನಿರ್ಣಯದ ವಿಷಯ ಹೇಳಿ.

ಶ್ರೀ ಎಚ್. ಎನ್. ನಂಜೇಗೌಡ.—ಅದಕ್ಕೆ ಭೂಮಿಕೆ ತಯಾರಾಗಬೇಕಲ್ಲಾ, ಮೊದಲು ಭೂಮಿಕೆ ಹೇಳಿದೆ, ಶ್ರೀಮಾನ್ ಪ್ರಭಾಕರ್‌ರವರಿಗೆ ಅನುಭವ ಇದೆ. ಅವರು ಅಂಕಿಅಂಶ ಕೊಟ್ಟು ಹೇಳಲಿ. ನಾನು ಚೀಫ್ ಮಿನಿಸ್ಟರು ಕೊಟ್ಟದ್ದನ್ನೂ ಒಪ್ಪುವವನಲ್ಲ. ನನಗೆ ಒಪ್ಪಿಗೆ ಆಗುವ ಹಾಗೆ ಹೇಳಬೇಕು. ಶ್ರೀಮಾನ್ ಶ್ರೀಕಂಠಯ್ಯನವರು ಒಂದು ನಿರ್ಣಯವನ್ನು ತಂದರು ಅದಕ್ಕೆ ನನ್ನ ಗೆಳೆಯರು ಶ್ರೀಮಾನ್ ಗಂಗಾಧರ್‌ರವರು ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದಕ್ಕೆ ಶಾಸನವಾಗಬೇಕು ಎನ್ನುವ ಅಭಿಪ್ರಾಯ ಇದ್ದರೆ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸರ್ಕಾರದವರೇ ಇದಕ್ಕೆ ಲೀಡ್ ಕೊಡಬೇಕು. ಇವತ್ತು ಏನು ಅನಿಸುತ್ತದೆ ! ಮಾನ್ಯ ಮುಖ್ಯಮಂತ್ರಿಗಳು ಇಂತಹ ಒಂದು ನಿರ್ಣಯವನ್ನು ತಂದಿದ್ದರು ಇನ್ನಿ ಆಗಲೂ ಅದು ಕೇಂದ್ರಕ್ಕೆ ಹೋಗಬೇಕು. ಏನೇ ಆದರೂ ಜನರ ಮನಸ್ಸಿನಲ್ಲಿರತಕ್ಕ ಕಲ್ಮಷವನ್ನು ತೊಳೆಯಬೇಕು. ಪಾಪ ನಾಗಪ್ಪನವರು ಡೀಸೆಂಟ್ರಲೈಸ್ ಆಗಬೇಕೆಂದು ಹೇಳುತ್ತಾರೆ. ಅದೇನು ಆಗುತ್ತದೆಯೋ ಬಿಡುತ್ತದೆಯೋ ಮದುವೆಯೇ ಆಗಿಲ್ಲ ಮಗುವಿನ ಹೆಸರು ರಾಮಕೃಷ್ಣ ಅಂತ ಇಟ್ಟರಂತೆ ಆ ರೀತಿ ಇದಕ್ಕೆ ಬೆರೆ ಕಟ್ಟುವುದು ಅಲ್ಲ. ರಾಜ್ಯದಲ್ಲಿ ಕಾಣುತ್ತಾ ಇರುವುದು, ಗಂಭೀರವಾದಂತಹ ಕೆಲವು ಸಮಸ್ಯೆಗಳು ಇವೆ. 74ನೇ ಇಸವಿಯಲ್ಲಿ ಕಾವೇರಿ ನದಿ ನೀರಿನ ಹಕ್ಕನ್ನು ಕಳೆದುಕೊಳ್ಳುತ್ತೇವೆ, ಕೃಷ್ಣಾ ನದಿ ನೀರಿನ ಸಮಸ್ಯೆ ಇದೆ. ಈ ರಾಜ್ಯವನ್ನು ಸರಿಯಾದ ಮಾರ್ಗದಲ್ಲಿ ನಡೆಸಿ ರಾಜ್ಯದ ಹಿತಾಸಕ್ತಿಗಳನ್ನು ಕಾಪಾಡತಕ್ಕ ಒಂದು ದೈತ್ಯ ಶಕ್ತಿಯಹಾಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಇರಬೇಕು. ಅವರಿಗೆ ಕಷ್ಟಗಳು ಇರುತ್ತದೆ ನಿಜ, ಬೇರೆ ಕಾರ್ಯಗಳು ಬೇಕಾದಷ್ಟು ಇವೆ. ಯಾವ ರೀತಿ ನಮ್ಮ ರಾಜ್ಯವನ್ನು ಉದ್ಧಾರ ಮಾಡಬೇಕೆಂಬ ಒಂದು ತಳಮಳವನ್ನು ಇಟ್ಟುಕೊಂಡು ಬೇರೆ ಯಾವ ಕೆಲಸವನ್ನೂ ಕೂಡ ಇಟ್ಟುಕೊಂಡಿಲ್ಲದೇ ಇರಬೇಕಾದಂತಹ ಸಂದರ್ಭ ಇದೆ. ಅಂತಹ ಪರಿಸ್ಥಿತಿಯಲ್ಲಿ ಅವರು ಭಾರಿ ನೀರಾವರಿ ಯೋಜನೆಯನ್ನು ಇಟ್ಟುಕೊಂಡಿದ್ದಾರೆ ಅದರ ಜೊತೆಗೆ ಜನರಲ್ ಅಡ್ಮಿನ್‌ಸ್ಟ್ರೇಷನ್, ಗೃಹ ಖಾತೆ ಇವುಗಳೂ ಸಹ ಇವೆ. ಪಾಪ, ನಮ್ಮ ಜಿಲ್ಲೆಯವರಾದ ಶ್ರೀಮಾನ್ ಲಕ್ಕಪ್ಪನವರು ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿದ್ದುಕೊಂಡು ಬರೀ ಸುಣ್ಣ ಬಣ್ಣ ಹೊಡೆಯುವ ಕೆಲಸ ಮಾತ್ರ ಮಾಡುವುದಾಗಿದೆ. ಇವರಿಗೆ ಇನ್ನಾವ ಅಧಿಕಾರವೂ ಇಲ್ಲ, ಇದರ ಜೊತೆಗೆ ಪಾಪಾ ಇವರು ಸಂಪೂರ್ಣವಾಗಿ ತಬ್ಬಲಿಯಹಾಗೆ ನಿದ್ರೆ ಮಾಡುತ್ತಾ ಕುಳಿತಿರುತ್ತಾರೆ, ಇವರಿಗೆ ಒಂದು ಆಫೀಸು ಕೊಟ್ಟು ಒಂದು ಕಾರು ಕೊಟ್ಟು ಏನೇನೂ ಕೆಲಸವಿಲ್ಲದವರಿಗೆ ಏನಾದರೂ ಒಂದು ಕೆಲಸ ಕೊಟ್ಟಿರುತ್ತಾರೆಯಲ್ಲಾ ಆ ರೀತಿ ಆನ್ಯುಯಲ್ ರಿಪೋರ್ಟ್ಸ್ ನೋಡುವುದು ಮುಂತಾದ ಕೆಲಸ ಅವರದಾಗಿದೆ. ಇವರು ಒಬ್ಬ ಫುಲ್‌ಫ್ಲಡ್ಜಡ್ ಮಂತ್ರಿಗಳು ಪಿ.ಡಬ್ಲ್ಯು.ಡಿ. ಮಿನಿಸ್ಟರು ಅಂತ ಹೆಸರು, ಶೇಕಡ 80 ಭಾಗ ಎಲ್ಲಾ ಮುಖ್ಯಮಂತ್ರಿಗಳೇ ಇಟ್ಟುಕೊಂಡು ಇನ್ನು 20 ಭಾಗ ಅವರಿಗೆ ಕೊಟ್ಟಿದ್ದಾರೆ ಅದರಲ್ಲೂ ಕೂಡ ಒಬ್ಬರು ಡೆಪ್ಯುಟಿ ಮಿನಿಸ್ಟರು ಮಾಗಾವಿಯವರು ಇದ್ದಾರೆ ಅವರು ಶೇಕಡ 18ರಷ್ಟು ಕೆಲಸ ಮಾಡಿಕೊಂಡು ಹೋಗುತ್ತಾರೆ ಇನ್ನು ಉಳಿದಿರುವುದು 2 ಪರ್ಸೆಂಟ್ ಕೆಲಸ ಲಕ್ಕಪ್ಪನವರಿಗೆ ಈ ಮಟ್ಟದಲ್ಲಿರುವಾಗ ನಾವು ಇಲ್ಲಿ ವಿಕೇಂದ್ರೀಕರಣವಾಗಲಿ ಎಂದು ನಿರೀಕ್ಷೆ ಮಾಡಿದರೆ ಅದನ್ನು ಕನಸಿನಲ್ಲೂ ಕೂಡ ನಾನು ಕಾಣಲಾರೆ. ಆದ್ದರಿಂದ ಶ್ರೀಮಾನ್ ನಾಗಪ್ಪನವರಲ್ಲಿ ನನ್ನ ಅರಿಕೆ ಇಷ್ಟೆ ಅದಕ್ಕೆ ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಇನ್ನೊಂದು ಪ್ರಾಮುಖ್ಯವಾದ ಅಂಶವನ್ನು ಬಿಟ್ಟುಬಿಟ್ಟರು, ಇದು ಬಹಳ ಗಂಭೀರವಾದ ಸಮಸ್ಯೆ ನಾಗಪ್ಪನವರಾಗಲಿ, ರಂಗನಾಥ್‌ರವರಾಗಲಿ ನಾನಾಗಲೀ ತಿಳಿದುಕೊಂಡಿರುವಹಾಗೆ ಇದು ಲಘುವಾದ ಪ್ರಶ್ನೆಯಲ್ಲ. ಪ್ರಜಾಪ್ರಭುತ್ವದಲ್ಲಿ ಆಡಳಿತ ನಡೆಸುವುದು ಒಂದು ಬಂದೋಬಸ್ತು ಸರ್ಕಾರ ಕೊಡುವುದು ಭಾರಿ ಕಷ್ಟದ ಕಲಸವೇ. 7 ದಿನದ ಒಂದು ಮಂತ್ರಿಮಂಡಲ ಆಯಿತು, ವಾರಕ್ಕೆ ಒಂದು ಮಂತ್ರಿಮಂಡಲ ಆಯಿತು. ಸುಭದ್ರವಾದ ಮಂತ್ರಿಮಂಡಲ ಇರಬೇಕಾದರೆ ಮುಖ್ಯಮಂತ್ರಿಗಳು ಕೆಲವಾರು ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಜಿಲ್ಲೆಗಳಲ್ಲಿ, ಗ್ರಾಮಗಳಲ್ಲಿ ಏನೇ ಕಾರ್ಯಕ್ರಮವಾಗಬೇಕಾದರೂ ಕೂಡ ನಾವು ಯಾರು ಹೇಳಿದರೂ ನಿಜವಾಗಿಯೂ ಆಗುತ್ತಿಲ್ಲ. ಏನಾದರೂ ಮಾಡಬೇಕಾದರೆ ಪಿ.ಡಬ್ಲ್ಯು.ಡಿ. ಮಿನಿಸ್ಟರು ಅಂತ ಹಾಕಿ, ಚೀಫ್ ಮಿನಿಸ್ಟರ್ ಮುಖಾಂತರ ಹೋಗಬೇಕು

ಎಂದು ಸೆಕ್ರೆಟೆರಿಗಳು ಬರೆಯತಕ್ಕ ಸಂದರ್ಭ ಇದೆ ಎಂದು ಹೇಳುತ್ತಾರೆ. ಅಲ್ಲಿಗೆ ಏನೇ ಒಂದು ರೆಪ್ರೆಸೆಂಟೇಷನ್ ಬರಲಿ ಅದು ಮುಖ್ಯಮಂತ್ರಿಗಳಿಗೂ ತಲುಪಲೇಬೇಕು. ಅಂಥ ಒಂದು ಸುಭದ್ರವಾದ ಸರ್ಕಾರವನ್ನು, ಒಂದು ಸುಭದ್ರವಾದ ಆಡಳಿತವನ್ನು ಮತ್ತು ಒಂದು ಸಮತೋಲನವಾದ ಆಡಳಿತವನ್ನು ಕಾಪಾಡಿಕೊಂಡು ಬರುವುದು ಬಹಳ ಮುಖ್ಯವಾದ ವಿಷಯವೇ. ಯಾವ ಒಂದು ವಿಷಯವೇ ಆಗಲಿ ಅದು ಮುಖ್ಯ ಮಂತ್ರಿಗಳ ಗಮನಕ್ಕೆ ಬಾರದೆ ಫೈಸಲಾಗುವುದಕ್ಕೆ ಅವಕಾಶವೇ ಇಲ್ಲ. ಅಂತೂ ಯಾವ ಒಂದು ಕೆಲಸವಾಗಬೇಕಾಗಿದ್ದರೂ ಅದು ಆ ಮುಖ್ಯಮಂತ್ರಿಗಳ ದಾಕ್ಷಿಣ್ಯದಿಂದಲೇ ಆಯಿತೆನ್ನುವಂತೆ ಅದು ನಡೆಯಬೇಕು. ಇಂಥ ಒಂದು ಪದ್ಧತಿಯಿಂದ ಪ್ರತಿಯೊಬ್ಬರೂ ಮುಖ್ಯಮಂತ್ರಿಗಳ ಮನೆಯ ಮುಂದೆ ಹೋಗಿ ನಿಲ್ಲಲೇಬೇಕಾಗಿದೆ.

ಛೇರ್ಮನ್‌ರವರು.—ಈಗ ಸಭೆಯ ಮುಂದಿರತಕ್ಕ ವಿಷಯ—ರಾಜ್ಯದ ಹೆಸರು ಕನ್ನಡ ರಾಜ್ಯ ಎಂದಿರಬೇಕೇ ಅಥವಾ ಕರ್ಣಾಟಕ ಎಂದಿರಬೇಕೇ ಎಂಬುದು. ಅದರ ಬಗ್ಗೆ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವೇನೆಂಬುದನ್ನು ತಿಳಿಸಿದರೆ ಸಾಕು.

ಶ್ರೀ ಎಚ್. ಎನ್. ನಂಜೇಗೌಡ.—ರಾಜ್ಯದ ಹೆಸರು—ಮೈಸೂರು ಎಂದಿರಬೇಕೇ ಅಥವಾ ಕನ್ನಡ ನಾಡು ಎಂದಿರಬೇಕೇ ಇಲ್ಲವೇ ಅದರ ಹೆಸರು ಕರ್ಣಾಟಕ ಎಂದಿರಬೇಕೇ ಎಂಬುದಾಗಿ ಮೂರು ಚೀಟಿಗಳನ್ನು ಬರೆದು ಮೂರು ಪೆಟ್ಟಿಗೆಗಳನ್ನು ಇಟ್ಟು ಓಟ್ ಹಾಕಿದರೆ ಈ ವಿಚಾರ ತೀರ್ಮಾನವಾದಂತೆ ಆಯಿತು ಅನ್ನುವಂತಿಲ್ಲ. ಇದು ಅಷ್ಟು ಹಗುರವಾದ್ದಲ್ಲ. ನಾವು ಇಂಥ ಒಂದು ಸನ್ಮಾನ್ಯ ತೀರ್ಮಾನವನ್ನು ಕೈಗೊಳ್ಳಬೇಕಾಗಿದ್ದರೆ ಈ ಸಮಸ್ಯೆಯ ಬಗ್ಗೆ ರಾಜ್ಯದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಯ ಅಭಿಪ್ರಾಯವನ್ನೂ ಪಡೆಯಬೇಕಾಗುವುದು. ಅದನ್ನು ಪಡೆಯದೆ ಇದನ್ನು ನಾವು ನಾವೇ ಇಲ್ಲಿ ಕುಳಿತು ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ನಾನಾಗಲೇ ಆ ಭಕ್ತಿ ಪೂಜೆ, ವಿಭೂತಿ ಪೂಜೆಗಳ ಬಗ್ಗೆ ಹೇಳಿದ್ದೇನೆ. ಅಂದ ಹಾಗೇ ನಾವೀದಿವಸ ಇಲ್ಲಿ ಇದರ ಚರ್ಚೆಗೆ ತೊಡಗಿರುವುದಕ್ಕೆ ಕಾರಣವೇನೆಂದರೆ ನಾವೆಲ್ಲರೂ ಮೊದಲು ವಿಭೂತಿ ಪುರುಷರಾಗಬೇಕು. ನಮ್ಮ ನಮ್ಮ ತಪ್ಪುಗಳನ್ನು ನಾವು ಮೊದಲು ತಿದ್ದಿಕೊಳ್ಳಬೇಕು. ಆ ತಪ್ಪುಗಳನ್ನೆಲ್ಲಾ ಸರಿಪಡಿಸಿಕೊಂಡು ಮೊದಲು ಇಲ್ಲಿ ಒಂದು ಒಳ್ಳೆಯ ವಾತಾವರಣವನ್ನು ಉಂಟುಮಾಡಬೇಕು. ಅದಕ್ಕಾಗಿ ನಾವೀದಿವಸ ಈ ಚರ್ಚೆಯಲ್ಲಿ ತೊಡಗಿದ್ದೇವೆ.

ಛೇರ್ಮನ್‌ರವರು.—ಮಾನ್ಯ ಸದಸ್ಯರಿಗೆ ವೇಳೆ ಇನ್ನೂ ಎಷ್ಟು ಬೇಕಾಗಬಹುದು ?

ಶ್ರೀ ಎಚ್. ಎನ್. ನಂಜೇಗೌಡ.—ಸಭಾಧ್ಯಕ್ಷರ ಪೀಠದಲ್ಲಿರತಕ್ಕ ಮಾನ್ಯ ಸಿದ್ದಯ್ಯನವರ ಭಾಷಣವನ್ನು ಕೇಳುವುದಕ್ಕೆ ನಾನು ಬಹಳ ತವಕದಿಂದ ಕಾಯುತ್ತಿದ್ದೇನೆ. ಅದೇ ರೀತಿ ನಮ್ಮ ಶ್ರೀಮತಿ ನಾಗರತ್ನಮ್ಮನವರ ಭಾಷಣವನ್ನು ಕೇಳಲು ಬಹಳ ಕಾತುರನಾಗಿದ್ದೇನೆ. ಶ್ರೀಮಾನ್ ದೇವರಾಜ ಅರಸರ ಭಾಷಣವನ್ನೂ ಕೇಳುವುದಕ್ಕೆ ತವಕದಿಂದ ಕಾಯುತ್ತಿದ್ದೇನೆ. ಮೇಲಾಗಿ ಇಂಥ ವಿಷಯಗಳಲ್ಲಿ ಮಹಿಳೆಯರ ಅಭಿಪ್ರಾಯವನ್ನು ಪಡೆಯುತಕ್ಕದ್ದು ಬಹಳ ಮಂಗಳಕರವಾದದ್ದು. ಆದ್ದರಿಂದ ಇದಿನ್ನೂ ನಾಲ್ಕಾರು ದಿನಗಳು ಚರ್ಚೆಯಾಗಬೇಕಾಗಿದೆ. ಇಂದೇನೂ ಇದು ಮುಗಿಯತಕ್ಕದ್ದಲ್ಲ. ಹೊರಗಡೆ ಇರತಕ್ಕ ಜನರ ಮನಸ್ಸಿನಲ್ಲಿ ಸೇರಿರತಕ್ಕ ಕಲ್ಮಷ ದೂರವಾಗಬೇಕು. ಮೊದಲದಕ್ಕೆ ಚಿಕಿತ್ಸೆ ಮಾಡಬೇಕಾಗಿದೆ. ಆ ಚಿಕಿತ್ಸೆಯನ್ನು ಮೊಟ್ಟಮೊದಲನೆಯದಾಗಿ ಮುಖ್ಯಮಂತ್ರಿಗಳೇ ಪ್ರಾರಂಭ ಮಾಡಬೇಕು. ನಾವೀದಿವಸ ಬಹಳ ಅದೃಷ್ಟಶಾಲಿ. ನಮ್ಮ ಸಭಾನಾಯಕರು ಸಭೆಯಲ್ಲಿದ್ದಾರೆ. ರಾಜ್ಯಕ್ಕೆ ಯಾವ ಹೆಸರನ್ನೇ ಇಡಲಿ—ಅದು ಕನ್ನಡ ನಾಡಾದರೂ ಆಗಿರಲಿ ಅಥವಾ ಕರ್ಣಾಟಕ ಆದರೂ ಆಗಿರಲಿ ಆ ಹೆಸರನ್ನು ಇಡುವುದಕ್ಕೆ ಮೊದಲು ಜನರ ಮನಸ್ಸಿನಲ್ಲಿರತಕ್ಕ ಕಲ್ಮಷಗಳನ್ನು ತೊಳೆಯುವುದಕ್ಕೆ ಮೊದಲು ಚಿಕಿತ್ಸೆಯನ್ನು ನಡೆಸಬೇಕಾಗಿದೆ. ಜನರ ಮನಸ್ಸಿನಲ್ಲಿ ಏನೇನೋ ಕಲ್ಮಷಗಳಿವೆ. ಆದರೆ ನನ್ನ ಮನಸ್ಸಿನಲ್ಲಿ ಅಷ್ಟು ಕಲ್ಮಷಗಳಿಲ್ಲ. ನನ್ನ ಮನಸ್ಸಿನಲ್ಲಿರತಕ್ಕ ಕಲ್ಮಷವಾದರೋ ರಾಜ್ಯದಲ್ಲಿ ನಡೆಸಿರತಕ್ಕ ಅಭಿವೃದ್ಧಿ ಕಾರ್ಯಗಳಲ್ಲಿ ಎಲ್ಲಾದರೂ ರೀಜನಲ್ ಇಂಬಾಲೆನ್ಸ್ ಆಗಿದೆಯೋ ಎಂಬುದನ್ನು ಕುರಿತುದ್ದಾಗಿದೆ. ಹೊರಗಡೆ ಇರತಕ್ಕ ಜನರ ಮನಸ್ಸಿನಲ್ಲಿ ಅದೇನು ಸರಿಯೋ ತಪ್ಪೋ ಅವರ ಮನಸಿನಲ್ಲಿ ಸ್ವಜನ ಪಕ್ಷಪಾತ ಹಳೇ ಮೈಸೂರು ವಿಭಾಗದ ಅಭಿವೃದ್ಧಿಯನ್ನು ಮೊಟಕು ಮಾಡಿ ಇಲ್ಲಿಯ ಹಣವನ್ನು ಹೊಸ ಮೈಸೂರು ಭಾಗದಲ್ಲಿ ಹೆಚ್ಚಿಗೆ ಖರ್ಚು ಮಾಡಿದ್ದಾರೆ ಇತ್ಯಾದಿ ಅನೇಕ ಕಲ್ಮಷಗಳು ಅವರ ಮನಸ್ಸಿನಲ್ಲಿ ಸೇರಿವೆ. ಆ ಕಲ್ಮಷಗಳನ್ನೆಲ್ಲಾ ಮೊದಲು ತೊಳೆದು ಅವರನ್ನು ಪುನೀತರನ್ನಾಗಿ ಮಾಡಬೇಕು. ಅದು ಆಯಿತೆಂದರೆ ಆಗ ನಾನು ಯಾವುದಕ್ಕೂ ಸಿದ್ಧ. ಕನ್ನಡ ರಾಜ್ಯವೆಂದು ಕರೆಯೋಣ ಎಂದರೆ ನಾನು ಅದಕ್ಕೂ ಒಕೆ ಎನ್ನುತ್ತೇನೆ. ಅಥವಾ ಈ ರಾಜ್ಯದ ಹೆಸರನ್ನು ಕರ್ಣಾಟಕ ಎಂದು ಇಡೋಣ ಎಂದರೆ ನಾನು ಅದಕ್ಕೂ ಒಕೆ

(ಶ್ರೀ ಎಚ್. ಎನ್. ನಂಜೇಗೌಡ)

ಎನ್ನುತ್ತೇನೆ. ಹಿಂದೆ ಆ ಮಹಾತ್ಮಾ ಗಾಂಧಿಯವರು ದಂಡೀ ಸತ್ಯಾಗ್ರಹ ಮಾಡುತ್ತಿದ್ದಾಗ ಅವರು ಸತ್ಯಾಗ್ರಹ ಯಾವ ಟೈಮಿನಲ್ಲಿ ಸಾಕು ನಿಲ್ಲಿಸಿ ಎಂದರೆ ಅದು ಅಲ್ಲೇ ಅಷ್ಟಕ್ಕೆ ಹಾಲ್ಟ್ ಆಗುತ್ತಿತ್ತು. ಅದಕ್ಕೆ ಕಾರಣ ಏನೆಂದರೆ ಜನರು ಗಾಂಧೀಜಿಯವರಲ್ಲಿ ಅಂಥ ಒಂದು ನಂಬಿಕೆ ವಿಶ್ವಾಸಗಳನ್ನು ಇಟ್ಟುಕೊಂಡಿದ್ದರು. ಅವರು ತಾವೇ ಯಾದರೂ ತಪ್ಪನ್ನು ಮಾಡಿದ್ದರೆ ತಮ್ಮನ್ನು ತಾವೇ ಅವರು ಶಿಕ್ಷಿಸಿಕೊಳ್ಳುತ್ತಿದ್ದರು. ಅವರ ತಪ್ಪಿಗಾಗಿ ಅವರು ಅನೇಕ ದಿವಸ ಉಪವಾಸ ವ್ರತವನ್ನು ಮಾಡಿದ್ದಾರೆ. ಆದರೆ ಇಲ್ಲಿ ನಾನು ಆ ಮಟ್ಟವನ್ನು ಅಪೇಕ್ಷೆ ಪಡುತ್ತಿಲ್ಲ. ಅವರು ಶಿಕ್ಷೆ ಮಾಡಿಕೊಳ್ಳುವುದು ಬೇಡ. ಅವರು ಜನರ ಮನಸ್ಸಿನಲ್ಲಿ ಹಾಗೂ ನನ್ನ ಮನಸ್ಸಿನಲ್ಲಿ ಹೊಕ್ಕಿರತಕ್ಕ ಕಲ್ಮಷವನ್ನು ತೊಳೆಯುವುದಕ್ಕೆ ಇರತಕ್ಕ ಸತ್ಯಸಂಗತಿಗಳನ್ನು ಕೂಲಂಕಷವಾಗಿ ತಿಳಿಸಲಿ ಎಂದು ಕೇಳುತ್ತಿದ್ದೇನೆ. ಹಳೇ ಮೈಸೂರು ಭಾಗವಾಗಲಿ—ಹೊಸ ಮೈಸೂರು ಭಾಗವಾಗಲಿ ಅಥವಾ ಆ ಪ್ರದೇಶ ಕಾರವಾರವಾಗಿರಲಿ ಇಲ್ಲವೇ ರಾಯಚೂರಾಗಿರಲಿ ಯಾವ ಒಂದು ಭಾಗಕ್ಕೂ ಅನ್ಯಾಯವಾಗಿಲ್ಲ ಎನ್ನುವುದರ ಬಗ್ಗೆ ಕೂಲಂಕಷ ತಿಳುವಳಿಕೆಗಳನ್ನು ಕೊಡಲಿ. ರಾಜ್ಯದಲ್ಲಿ ಯಾವ ಭಾಗದಲ್ಲೂ ಹಾಗೆ ಇಂಬ್ಯಾಲೆನ್ಸ್ ಆಗಿಲ್ಲ ಎಂಬುದನ್ನು ಸರ್ಕಾರದವರು ರುಜುವಾತು ಮಾಡಬೇಕು. ಆದರೆ ಕೆಲವಾರು ದಿನಗಳಿಂದ ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ವಿವರವಾಗಿ ಅಂಕೀ ಅಂಶಗಳನ್ನು ಶೇಖರಣೆ ಮಾಡುವುದಾಗಿ ಹೇಳುತ್ತಿದ್ದರು. ಅವರು ಕಾರಣಾಂತರಗಳಿಂದ ಯಾವುದೇ ಒಂದು ಭಾಗಕ್ಕೆ ಹೆಚ್ಚು ಹಣವನ್ನು ಖರ್ಚುಮಾಡಲಾಗಿದೆ ಎಂದು ಹೇಳಿದರೆ ಅದಕ್ಕೂ I am not worried. ಸಕಾರಣವಾಗಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಬಿಡಲಾಯಿತೆಂದು ಹೇಳಿ ಅದಕ್ಕೆ ನ್ಯಾಯವಾದ ಕಾರಣಗಳನ್ನು ಕೊಟ್ಟರೆ ಅದಕ್ಕೂ ಸಹಾ ನನಗೆ ಸಂಕಟವಿಲ್ಲ. ಅಂದರೆ ಈ ಎಲ್ಲವೂ ಸಕಾರಣವಾಗಿಯೇ ಆಗಿರಬೇಕು, ಅದು ಮುಖ್ಯ. ನನಗೆ ಈ ವಿಚಾರಗಳಲ್ಲಿ ಅಷ್ಟು ಅಪನಂಬಿಕೆ ಬರುತ್ತಿರಲಿಲ್ಲ. ಆದರೆ ಅದೇನೋ ಇತ್ತೀಚೆಗೆ ಕೆಲವು ಬಾಬುಗಳಲ್ಲಿ ನನಗೆ ಅನುಮಾನ ಹೆಚ್ಚಾಗಿದೆ. ಅದು ಮೊದಲು ಪರಿಹಾರವಾಗಬೇಕು. ನನ್ನ ಅನುಮಾನಕ್ಕೆ ಒಂದು ಕಾರಣ ಏನೆಂದರೆ ಮಾನ್ಯ ಮುಖ್ಯ ಮಂತ್ರಿಗಳೇ ಈ ಬಗ್ಗೆ ಅಂಕೀ ಅಂಶಗಳನ್ನು ಸಂಗ್ರಹಣೆ ಮಾಡುತ್ತಿದ್ದಾರೆ ಅನ್ನುವುದೇ ಆಗಿದೆ. ಕೆಲವಾರು ದಿನಗಳ ಹಿಂದೆ ಪತ್ರಿಕೆಗಳಲ್ಲಿ ಮುಖ್ಯಮಂತ್ರಿಗಳು ಒಂದು ರಿಪೋರ್ಟರ್—ವರದಿ ಎಂದು ಬಂದಿದ್ದ ಒಂದು ಹೇಳಿಕೆಯಲ್ಲಿ ವಿದ್ಯುಚ್ಛಕ್ತಿಯ ಸೌಲಭ್ಯವನ್ನು ಕೆಲವು ಪ್ರದೇಶಗಳಿಗೆ ಹೆಚ್ಚಿಗೆ ಕೊಟ್ಟಿದ್ದರೂ ಅದನ್ನು ಮಾರೆಮಾಚಿ ಆ ಭಾಗದಲ್ಲಿ ಹಣ ಕಡಮೆ ಖರ್ಚಾಗಿದೆ ಎಂಬುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಆದರೆ ಇದೇನೂ ಜಾತೀಯತೆ ವಿಚಾರಕ್ಕೆ ಸಂಬಂಧಪಟ್ಟಿದ್ದಲ್ಲ.

6–30 P.M.

ಮಾನ್ಯ ಶ್ರೀ ಎಂ. ವಿ. ಕೃಷ್ಣಪ್ಪನವರು, ಶ್ರೀ ದೇವರಾಜ್ ಅರಸ್ ಅವರು ಮತ್ತು ಶ್ರೀಮತಿ ನಾಗರತ್ನಮ್ಮನವರು ಹೇಳಿದ್ದು ಸರಿಯಾಗಿದೆಯೆಂದು ಹೇಳಿದಮೇಲೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದು ತಪ್ಪು ಇರಬಾರದು. ಆ ಸಂದರ್ಭದಲ್ಲಿ ನಾನು ಬೆಂಗಳೂರಿಗೆ ಬಂದು ಇಲ್ಲಿ 4 ತಿಂಗಳು ಕಾಲ ಇದ್ದು ಈ ವಿಚಾರಗಳೆಲ್ಲವನ್ನೂ ಮನಗಂಡು. ವಿದ್ಯುಚ್ಛಕ್ತಿಯ ಬಗ್ಗೆ ಕೆಲವಾರು ಸ್ಟೇಟ್‌ಮೆಂಟ್‌ಗಳನ್ನು ತಂದಿದ್ದೇನೆ. ಅದು ಚರ್ಚೆಗೆ ಬಂದಾಗ್ಗೆ ತಮ್ಮ ಅವಗಾಹನೆಗೆ ತರುತ್ತೇನೆ. ಮುಖ್ಯ ಮಂತ್ರಿಗಳ ಹೇಳಿಕೆ ಸತ್ಯಕ್ಕೆ ದೂರವಾದುದಾಗಿತ್ತು. ಪ್ರೈಮರಿ ಮತ್ತು ಸೆಕೆಂಡರಿ ಟ್ರಾನ್ಸ್‌ಮಿಷನ್ ಲೈನ್ಸ್ ಬಿಟ್ಟು ಶರಾವತಿಯಲ್ಲಿ ಇವರು ಏನೇನು ಮಾಡಿದ್ದಾರೆಂಬುದನ್ನು ಗಮನಿಸಬೇಕು. ನನ್ನ ಅಂಕಿ ಅಂಶಗಳಿಗೂ ಅವರು ಹೇಳಿದ್ದಕ್ಕೂ ಭಾರಿ ಅಜಗಜಾಂತರವಿಲ್ಲ ಕೇವಲ 20 ಕೋಟಿ ರೂಪಾಯಿಗಳೊಳಗೇ ವ್ಯವಹಾರ. ಅವರಿಗೂ ನನಗೂ 7 ಕೋಟಿ ರೂಪಾಯಿಗಳ ವ್ಯತ್ಯಾಸ ಬಂತು. ಸಬ್ಸಿಡಿಯರಿ ಟ್ರಾನ್ಸ್‌ಮಿಷನ್ ಲೈನ್ಸ್ ದೊಡ್ಡದೂ ಸೇರಿದರೆ 27 ಕೋಟಿ ರೂಪಾಯಿಗಳ ವ್ಯತ್ಯಾಸ ಎಲೆಕ್ಟ್ರಿಸಿಟಿ ಬೋರ್ಡ್‌ನಿಂದ ಬಂತು ಎಂಬುದಾಗಿ ಹೇಳಬಹುದು. ಸತ್ಯಸಂಧತೆಯನ್ನು ಮೀರಿ ಮಾಡಿದ್ದಾರೆ. ಅವರು ನನ್ನನ್ನು ಪ್ರತಿಪಾದಿಸಿ ಹೇಳಿಕೆ ಕೊಟ್ಟಿಲ್ಲ. ಅದು ಪತ್ರಿಕೆಗಳಲ್ಲಿ ಈ ರೀತಿ ಬಂತು. Primary and Secondary transmission lines, subsidiary transmission lines and their bad implications have been reported. ಸರ್ಕಾರ ಕೊಡತಕ್ಕ ಅಂಕಿ ಅಂಶಗಳಮೇಲೆ ನನ್ನ ಕಲ್ಮಶ ತೀರ್ಮಾನವಾಗುವುದಿಲ್ಲ. ನನ್ನ ಅನುಮಾನ ಬಗೆಹರಿಯಬೇಕಾದರೆ, ಅವರಮೇಲೆ ಈ ಅಧಿಕಾರ ವಹಿಸಿದ್ದ ಕಾಲದಲ್ಲಿ ಅವರು ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿ ಹೇಳಿದ ಕಾಲದಲ್ಲಿ ಅವರು ಹೇಳಿದ್ದ ಸ್ಟೇಟ್‌ಮೆಂಟ್‌ಮೇಲೆ ಈ ಮುಖ್ಯಮಂತ್ರಿಗಳಾಗಿ ತೀರ್ಪು ಕೊಟ್ಟರೆ, ಅದು ಅಪರಾಧಿಯೇ ತೀರ್ಮಾನ ಕೊಟ್ಟಂತಾಗು

ತ್ತದೆ. ಈ ಸಭಾನಾಯಕರಿಗೆ ಅಪಕೀರ್ತಿ ಬಂದರೆ, ಅದು ನನಗೂ ಬಂದಂತೆಯೇ. ಶ್ರೀಮತಿ ನಾಗರತ್ನಮ್ಮನವರಿಗೂ ಬಂದಂತೆಯೇ. ಆದ್ದರಿಂದ ನನ್ನ ಕಲ್ಮಶ ಪರಿಹಾರವಾಗಬೇಕಾದರೆ ಒಂದು ಜುಡಿಷಿಯಲ್ ಫ್ಯಾಕ್ಟ್ ಫೈಂಡಿಂಗ್ ಕಮಿಟಿಯನ್ನು ರಚಿಸಬೇಕು. ಒಂದು ನ್ಯಾಯಾಂಗ ಸಮಿತಿಯನ್ನು ನೇಮಿಸಬೇಕು. ಅದಕ್ಕಾಗಿ ಮಾನ್ಯ ಶ್ರೀ ನಾಗಪ್ಪನವರು ರಾಯಚೂರಿಗೆ ಕಡಿಮೆ ಯಾಯಿತು ಎಂದಾಗಲೀ, ಹಳೇ ಮೈಸೂರಿಗೆ ಕಡಿಮೆಯಾಯಿತೆಂದು ಮಾನ್ಯ ಶ್ರೀ ಪ್ರಭಾಕರ್ ಅವರಾಗಲೀ, ಅಥವಾ ಹುಚ್ಚಮಾಸ್ತಿಗೌಡರಾಗಲೀ ಹೇಳಬಾರದು. ಆದ್ದರಿಂದ ಅಂಕಿ ಅಂಶ ಗಳನ್ನು ಸಮಗ್ರದೃಷ್ಟಿಯಿಂದ ಸಂಗ್ರಹಮಾಡಿ ಈ ಸಭೆಯಮುಂದೆ ಅವನ್ನು ತಂದು ನನ್ನ ಅನುಮಾನಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದ್ದರೆ ನಂಜೇಗೌಡರು ಹೇಳತಕ್ಕಂಥ ರೀಜನಲ್ ಇಂಬ್ಯಾಲೆನ್ಸಸ್ಸನ್ನು ಕಂಡುಹಿಡಿಯಬಹುದು. ಇದರ ಜೊತೆಗೆ ಕಾಂಗ್ರೆಸ್ಸಿನ ಒಳಗಡೆ ಇರುವ ಜನಗಳ ಕಲ್ಮಶ ಹೋಗಬೇಕು. ಪೊಲಿಟಿಕಲ್ ಇಂಬ್ಯಾಲೆನ್ಸಸ್ ಹೋಗಬೇಕು. ನಾವು ವಿರೋಧಪಕ್ಷದವರು ಎಂದು ಅವರಲ್ಲಿ ಒಂದು ಭಾವನೆ ಬರಬಾರದು. ಮಾನ್ಯ ಶ್ರೀ ಗಂಗಾಧರ್ ಅವರಿಗೇ ಆಗಲೀ ಮಾನ್ಯ ಶ್ರೀ ನಾಗಪ್ಪನವರಿಗೇ ಆಗಲಿ ಇವರು ಶೆಟ್ಟರು, ಇವರು ಗೌಡರು, ಇವರು ಲಿಂಗಾಯಿತರು ಎಂಬ ಭೇದಭಾವವಿಲ್ಲ. ವಿರೋಧ ಪಕ್ಷದವರಲ್ಲಿ ನಮಗೆ ಯಾವ ಕಲ್ಮಶವೂ ಇಲ್ಲವೆಂದು ಹೇಳಬಹುದು. ರಾಜ್ಯದ ಕಲ್ಮಷ ಇವೆಲ್ಲವೂ ಆ ಪಕ್ಷದಲ್ಲಿಯೇ ಇರುವುದು. ಇವರ ಮನಸ್ಸಿನಲ್ಲಿ ನಿಷ್ಕಾರುಣಿಕವಾದ, ನಿರಾಳವಾದ ಹಾಗೂ ಸರಳವಾದ ಅಭಿಪ್ರಾಯವನ್ನು ಹಾಕಿ ಕೊಳ್ಳಬೇಕಾಗಿದೆ.

ಶ್ರೀ ಸದಾಶಿವಪ್ಪ ಪಾಟೀಲ್.—ಅದಕ್ಕೆ ಅವರು ಅಧಿಕಾರ ಬೇಡವೆಂದು ಹೇಳಿದ್ದು.

ಶ್ರೀ ಎಚ್. ಎನ್. ನಂಜೇಗೌಡ.—ಇವರ ಮನೋಭಾವನೆ ಆ ರೀತಿ ಆಗಬೇಕಾಗಿದೆ. ಆಗ ಎಲ್ಲಾ ಜನಗಳಿಗೂ ನಮ್ಮ ಈ ಸಭೆಯಲ್ಲಿ ರಕ್ಷಣೆಯಾಗುತ್ತದೆನ್ನುವ ಅಭಿಪ್ರಾಯ ಬರಬೇಕು. ಮೈನಾರಿಟಿಗಳಿಗೆ ಅನುಮಾನ ಹೋಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ರೋಡ್ ರೋಲರ್ ಇದ್ದಹಾಗೆ ಇರುವುದರಿಂದ ಅವರು ನಮ್ಮನ್ನು ಜಮಾ ಖರ್ಚಿಗೇ ಇಟ್ಟುಕೊಂಡಿಲ್ಲವೆಂಬುದು ನಮ್ಮ ಕಿವಿಗೆ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ರೋಡ್ ರೋಲರ್ ಎಂದು ಇದ್ದು ಮೈನಾರಿಟಿ ಪಕ್ಷದಲ್ಲಿ ರುವಂತವವರನ್ನು ಅರಿತುಕೊಳ್ಳುತ್ತಾ ಇಲ್ಲವೆಂದು ಜನಗಳ ಬಾಯಿಗೆ ಹೋಗಿದೆ. ಅಂಥಾದ್ದು ಕೂಡಲೇ ಹೋಗಬೇಕಾದುದು ಭಾರೀ ಪ್ರಾಮುಖ್ಯವಾಗಿದೆ. ಅವರು ಅದಕ್ಕೂ ಕೂಡ ಕಾರ್ಯ ಕ್ರಮವನ್ನು ತೆಗೆದುಕೊಳ್ಳಬೇಕು. ಇವತ್ತು ಇದರ ಬಗ್ಗೆ ಒಂದು ಮಹತ್ವವಾದಂಥ ನಿರ್ಣಯ ವನ್ನು ನಾವು ಕೈಗೊಳ್ಳಬೇಕಾಗಿದೆ. It is like accused delivering the Judgement. There should be judicial fact finding body to probe into regional imbalance.

ಶ್ರೀ ಎಸ್. ಭೀಮಣ್ಣ.—ಈಗ ಮೂರು ಗಂಟೆಗಳ ಕಾಲ ಮಾನ್ಯ ಶ್ರೀ ನಂಜೇಗೌಡರು ಮಾತನಾಡುತ್ತಿದ್ದಾರೆ. ಇರತಕ್ಕ ವಿಷಯವಾಗಿ ಮಾತನಾಡಲಿ ಅದು ಬಿಟ್ಟು ಪ್ರತಿ ಯೊಬ್ಬೊಬ್ಬರನ್ನೂ ಅಡ್ರೆಸ್ ಮಾಡುತ್ತಿದ್ದಾರೆ. ನಾಲ್ಕಾರು ಜನರನ್ನೂ ಸಹ ಟೀಕೆಮಾಡಿದ್ದಾರೆ. ಅವರು ಎಷ್ಟು ಟೈಂ ಹೀಗೆ ಟೀಕೆಮಾಡಿದ್ದಾರೋ ಅಷ್ಟು ಟೈಂ ನಮಗೂ ಕೊಡಬೇಕು.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಯಾರ ಹೆಸರನ್ನೂ ತೆಗೆದುಕೊಂಡು ಹೇಳುವುದಕ್ಕೆ ಹೋಗಿಲ್ಲ. ಈ ದೇಶಕ್ಕೆ ಹೆಸರು ಇಡಬೇಕಾದರೆ ಎಲ್ಲರ ಹೆಸರನ್ನೂ ತೆಗೆದುಕೊಳ್ಳಬೇಕು.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಪ್ರಕೃತಿಯೂ ಹಾಗೆ ಇದೆ. ತಿರುಳಿನಲ್ಲಿಯೇ ಇರುವುದು ಪ್ರಕೃತಿಯ ಧರ್ಮ. ಬಾಳೆಯ ಮರಗಳಾಗಲೀ, ತೆಂಗಿನಮರಗಳಾಗಲೀ ಬೆಳೆದರೆ, ಅದರಲ್ಲಿರುವ ತಿರುಳೇ ಮುಖ್ಯವಾದುದು. ಆ ರೀತಿ ಮನುಷ್ಯನಿಗೂ ಕೂಡ ಬುರುಡೆಗೇ ಇರುವುದು ಬೆಲೆ. ಆದ್ದರಿಂದ ಇದರ ಬಗ್ಗೆ ಜನಗಳ ಮನೋಭೂಮಿಕೆಯನ್ನು ನಮ್ಮ ರಾಜ್ಯ ಸರ್ಕಾರ ತಿಳಿಯಲಿ. ಆಗ ಈ ರಥ ನಡೆಸುವುದಕ್ಕೆ ಸಹಾಯವಾಗುತ್ತದೆ. ರಾಜಕೀಯಮಟ್ಟದಲ್ಲಿ ಈ ಕಲ್ಮಶ ಹೋಗಬೇಕು. ಒಕ್ಕಲಿಗರು 8 ಜನರಿ ದ್ದಾರೆ ಅವರನ್ನು ತರಾಟೆಗೆ ತೆಗೆದುಕೊಳ್ಳುತ್ತೇವೆಂದು ಮಾನ್ಯ ಶ್ರೀ ಲಕ್ಕಪ್ಪನವರು ಹೇಳುತ್ತಾ ರೆಂದು ಜನ ಮಾತನಾಡುತ್ತಿದ್ದಾರೆ. ನನಗೇನು ತಿಳಿಯುತ್ತದೆಂದರೆ, ಏನೂ ಕೆಲಸವಿಲ್ಲದೇ ಇರುವ ವರನ್ನು ಮಂತ್ರಿಗಳನ್ನಾಗಿ ಮಾಡಿದ್ದಾರೆ. ಅವರಿಂದ ಇಷ್ಟು ಇಂಬ್ಯಾಲೆನ್ಸ್ ಆಗಿದೆಯೆಂದು. ಇವತ್ತು ಈ ಒಂದು ಇಂಬ್ಯಾಲೆನ್ಸ್ ಹೋಗಿ ಅವರ ಮನಸ್ಸಿನಲ್ಲಿರತಕ್ಕ ಕಲ್ಮಶ ಹೋಗಬೇಕು. ಅಂಥ ಸಮಯದಲ್ಲಿ ಇಂಥ ನಿರ್ಣಯ ಬಂದರೆ ಬಾರೀ ಒಳ್ಳೆಯದು.

(ಶ್ರೀ ಎಚ್. ಎನ್. ನಂಜೇಗೌಡ)

ಇನ್ನೊಂದು ವಿಚಾರ. ಆಡಳಿತ ಪಕ್ಷದಲ್ಲಿ ಕೆಲವೇ ಭಾಗದ ಜನರು, ಕೆಲವೇ ಜಿಲ್ಲೆಯ ಜನರು ಬಹಳ ಪ್ರಭಾವಯುತ ಮಂತ್ರಿಯ ಖಾತೆಗಳನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಅವರೇ ಎಲ್ಲಾ ಪ್ರಭಾವಿತರಾಗಿ ನಮ್ಮನ್ನು ಅರೆಯುತ್ತಿದ್ದಾರೆಂಬುದು ಪ್ರಾಮುಖ್ಯವಾದ ವಿಚಾರ.

ಶ್ರೀ ಬಿ. ವಿ. ಬಸವರಾಜ ಮಾಗಾವಿ (ಲೋಕೋಪಯೋಗಿ ಶಾಖೆಯ ಉಪಮಂತ್ರಿಗಳು).—ತಮ್ಮ ಕತೆ ಯಾವಾಗ ಬರುತ್ತದೆ ?

ಶ್ರೀ ಎಚ್. ಎನ್. ನಂಜೇಗೌಡ.—ಕತೆ ನಾನು ಪ್ರಾರಂಭ ಮಾಡುವುದಿಲ್ಲ. ಅದನ್ನು ನಿಮ್ಮ ನಾಯಕರು ಮಾಡಬೇಕಾದ್ದು. ಕತೆ ಪ್ರಾರಂಭವಾಗಬೇಕಾದರೆ, ಕನ್ನಡ ನಾಡು ನಿರ್ಣಯ ಅಂಗೀಕಾರವಾಗಬೇಕಾದರೆ, ಒಂದು ಒಳ್ಳೆಯ ಮನೋಸ್ಥಿತಿ ಜನರಲ್ಲಿ ಬರಬೇಕಾದರೆ, ಈ ಒಂದು ಮನಸ್ಸಿನ ಕಲ್ಮಷ ಏನಿದೆ, ಅದು ಹೋಗಬೇಕಾದರೆ ಅವಕ್ಕೆ ಒಂದು ಜುಡಿಶಿಯಲ್ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಮಾಡಬೇಕು, ಆಗ ಕತೆ ಪ್ರಾರಂಭವಾಗುತ್ತದೆ. ಇವತ್ತು ಜನರಲ್ಲಿ ಒಂದು ಒಳ್ಳೆಯ ಮನೋಭಾವ ರೂಢಿತವಾಗಬೇಕಾದರೆ, ಈ ಅಧಿಕಾರಿ ವರ್ಗದವರಲ್ಲಿ ಅದು ಪ್ರಾರಂಭವಾಗ ಬೇಕೆಂಬುದನ್ನು ಮರೆಯಬಾರದು. ಒಬ್ಬ ಐ.ಎ.ಎಸ್. ಆಫೀಸರಿಂದ ಹಿಡಿದು ತೋಟಿ ತಳವಾರಿಯ ವರೆಗೂ ಒಂದು ಭಾವೈಕ್ಯತೆ ಯಾಗಬೇಕು. ಅವರಲ್ಲಿ ಈ ರೀತಿಯಾಗಬೇಕಾದರೆ ಅದು ಯಾವ ರೀತಿ ಯಲ್ಲಿ ಆಗಬೇಕು ? ಅವರಿಗೆ ಅನ್ಯಾಯ, ಮೋಸಗಳು ಬರದಂತೆ ಆಗಬೇಕು. ಒಂದು ದಿವಸ ನಾನು ಒಬ್ಬ ಸದಸ್ಯರೊಡನೆ ಒಂದು ಆಫೀಸರಲ್ಲಿ ಹೋಗಿದ್ದೆ. ಅವರು ಒಬ್ಬ ಸಂಸ್ಥಾನ ಮಟ್ಟದ ಅಧಿಕಾರಿ. ಮಾಗಾವಿಯವರಿಗೆ ಸಂಬಂಧಪಟ್ಟ ಅಧಿಕಾರಿ. ಅವರಮೇಲೆ ಒಂದು ರಿಪೋರ್ಟ್ ಕೂಡ ಕೊಟ್ಟಿದ್ದೇನೆ. ಇವತ್ತು ಅದಕ್ಕೆ ನಿಮ್ಮಲ್ಲಿ ಪವರ್ ಇದೆಯೋ ಎಂದು ಗೊತ್ತಿಲ್ಲ. ಯಾವ್ಯಾವ ಮಂತ್ರಿಯವರಿಗೆ ಯಾವ್ಯಾವ ಅಧಿಕಾರ ಕೊಟ್ಟಿದ್ದಾರೆಂದು ಗೊತ್ತಿಲ್ಲ. ಆ ಅಧಿಕಾರಿಯು ಅಲ್ಲಿ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಲಿಲ್ಲ, ದುರದೃಷ್ಟವಶಾತ್ ಆ ಮನುಷ್ಯ ಹೊಸ ಮೈಸೂರು ಸಂಸ್ಥಾನದ ಅಧಿಕಾರಿ. ನಾನು ಹೊರಗೆ ಬಂದಾಗ, ಇತರ ಕ್ಲಾಸ್ II, III ಅಧಿಕಾರಿಗಳು ಅಲ್ಲಿ ಇದ್ದರು. ಅವರು ಹೇಳುತ್ತಾರೆ "ಸ್ವಾಮಿ, ಹಳೆಯ ಮೈಸೂರು ಎಂ.ಎಲ್.ಎ.ಗಳನ್ನು ಅವರು ಕಂಡರೆ ಹೀಗೇ ಮಾಡುವುದು, ಯಾರೂ ಬಂದರೂ ಕೂಡ ಅವರು ಹೀಗೆ ಮಾಡುತ್ತಾರೆ" ಎಂದು ಹೇಳಿದರು. ಹೀಗೆ ಇದೆ ಆ ಪ್ರಸಂಗ. ಆದ್ದರಿಂದ ನಾವು ಇವತ್ತು ಇಲ್ಲಿರುವುದು ಕತೆ ಕೇಳುವುದಕ್ಕೆ, ಪ್ರಾರಂಭ ಮಾಡುವುದಕ್ಕೆ ಅಲ್ಲ. ಕೆಲವೇ ಜನ ವಿಧಾನಸಭಾ ಸದಸ್ಯರನ್ನು ಕಾನ್‌ಫಿಡೆನ್ಸ್‌ನಲ್ಲಿ ಇಟ್ಟುಕೊಂಡು ಅವರು ಆಡಳಿತವನ್ನು ನಡೆಸುತ್ತಿದ್ದಾರೆಂಬುದು ಜನಜನಿತವಾಗಿದೆ. ಪುನಃ ಆ ಅಧಿಕಾರಿಯ ವಿಚಾರಕ್ಕೆ ಈಗ ಬರುತ್ತೇನೆ. ಈ ಅಧಿಕಾರಿಗಳಿಗೆ ಹಳೆಯ ಮೈಸೂರು ಎಂದರೆ ಆಗುವುದಿಲ್ಲ. ಅದೇ ರೀತಿ ಹೊಸ ಮೈಸೂರು ಎಂದರೆ, ಇನ್ನಿತರ ಕೆಲವು ಅಧಿಕಾರಿಗಳಿಗೆ ಆಗುವುದಿಲ್ಲ. ಅಧಿಕಾರಿ ವರ್ಗದವರಲ್ಲಿ ಯಾವಾಗ ಇದು ಪ್ರಾರಂಭವಾಯ್ತು ? When there is demoralisation and moral degradation you must know that you cannot punish them. ನಮ್ಮ ಸಮಾಜಕ್ಕೆ ನ್ಯಾಯ ದೊರೆಯಬೇಕಾದರೆ, ಅಧಿಕಾರಿ ವರ್ಗದಲ್ಲಿರತಕ್ಕ ಅಧಿಕಾರಿಗಳಿಂದ ದೊರೆಯಬೇಕು. ಯಾವಾಗ ಈ ಒಂದು ಅಭಿಪ್ರಾಯವನ್ನು ಇಟ್ಟುಕೊಂಡಿರುತ್ತಾರೋ, ಆಗ ನಮ್ಮ ಆಡಳಿತ ಎಲ್ಲಿ ಕಲ್ಮಶಹೀನವಾಗುತ್ತದೆ ? ನಿಮ್ಮ ಮುಖ್ಯ ಮಂತ್ರಿಯವರು ಸತ್ಯ ಹರಿಶ್ಚಂದ್ರರಿರಬಹುದು, ಶ್ರೀ ಮಾಗಾವಿಯವರು ರೋಹಿತಾಶ್ವರಿರಬಹುದು, ಆದರೆ, ಅವರಿಗೆ ಒಳ್ಳೆಯ ಹೆಸರು ಬರಬೇಕಾದರೆ, ಅಧಿಕಾರ ವರ್ಗ ಕೆಲಸ ಮಾಡತಕ್ಕ ರೀತಿ ನೀತಿಗಳನ್ನು ಸರಿಮಾಡಬೇಕು. ಯಾವುದಾದರೂ ಒಂದು ಆಫೀಸಿಗೆ ಹೋದರೆ ಜನರ ಮನದಲ್ಲಿ ಯಾವ ಒಂದು ಕೊಳಕು ಇದೆ, ಅದು ಮಾಯವಾಗಬೇಕು. ಅದು ಮಾಯವಾಗಬೇಕಾದರೆ, ಒಳ್ಳೆಯ ಆಡಳಿತ ಬರಬೇಕಾದರೆ, ಇದು ಕಣ್ಣುಮುಚ್ಚಿಕೊಂಡು ಆಡಳಿತ ಮಾಡಿದರೆ ಆಗುವುದಿಲ್ಲ. ಇವತ್ತು ಹಳೆಯ ಮೈಸೂರಿನ ಆಫೀಸರುಗಳಿಗೆ ಹೊಸ ಮೈಸೂರಿನವರನ್ನು ಕಂಡರೆ ಆಗುವುದಿಲ್ಲ, ಹೊಸ ಮೈಸೂರಿನ ಆಫೀಸರುಗಳಿಗೆ ಹಳೆಯ ಮೈಸೂರಿನವರನ್ನು ಕಂಡರೆ ಆಗುವುದಿಲ್ಲ. ನಾನು ನಂಜೇಗೌಡ, ಹಾಸನ ಜಿಲ್ಲೆ ಎಂದರೆ, ಹಳೆಯ ಮೈಸೂರಿನ ಅಧಿಕಾರಿಗೆ, ಸಂತೋಷವಾಗುತ್ತದೆ, "ಬನ್ನಿ ಸ್ವಾಮಿ, ಏನಾದರೂ ಮಾಡೋಣ, ಏನೂ ವರಿ ಮಾಡಬೇಡಿ" ಎನ್ನುತ್ತಾರೆ. ಆದರೆ ಹೊಸ ಮೈಸೂರಿನ ಆಫೀಸರ ಹತ್ತಿರ ಹೋದರೆ "No No, we have to follow certain rules and procedures beyond which we can't go. ಅದು ಹೇಗೆ ಆಗುತ್ತದೆ rules do not permit, how can it be possible ?" ಎಂದು ಹೇಳುತ್ತಾರೆ.

ಇಂಥಾ ಸನ್ನಿವೇಶದಲ್ಲಿ ಈ ಒಂದು ನಿರ್ಣಯ ಈ ಸಭೆಯ ಮುಂದೆ ಬಂದಿದೆ. ಇದನ್ನು ಯಾವ ರೀತಿ ಸ್ವೀಕಾರ ಮಾಡಬೇಕು ಎನ್ನುವ ಪ್ರಶ್ನೆ ಬಂದಿದೆ. ಧಾರವಾಡ ಜಿಲ್ಲೆಗೆ 35 ಲಿಫ್ಟ್ ಇರಿಗೇಷನ್

ಯೋಜನೆಗಳನ್ನು ಮಂಜೂರು ಮಾಡಿದರೆ ಪ್ರಾದೇಶಿಕ ಸಮತೋಲನ ಇದೆಯೇ ? ಹೊಳೆನರಸೀಪುರಕ್ಕೆ ಒಂದು ಲಿಫ್ಟ್ ಇರಿಗೇಷನ್ ಯೋಜನೆಯನ್ನು ಮಂಜೂರು ಮಾಡಿ ಶ್ರೀ ದೇವೇಗೌಡರನ್ನು ಕಾಂಗ್ರೆಸ್ಸಿಗೆ ಸೇರಿಸಿಕೊಂಡಿರಿ. ಈ ರೀತಿ ಮಾಡುವುದಾದರೆ ಭಾವೈಕ್ಯತೆ ಬಂದಿದೆಯೇ ? ಆದ್ದರಿಂದ ಈ ನಿರ್ಣಯವನ್ನು ಸ್ವೀಕಾರ ಮಾಡತಕ್ಕಂಥ ಮನೋಭೂಮಿಕೆ ಕನಸಿನಲ್ಲಿಯಾದರೂ ಕಾಣುತ್ತದೆಯೇ ಎಂದು ನಾನು ಶ್ರೀಮಾನ್ ಮಾಗಾವಿಯವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇದಲ್ಲದೆ ಹಾರಂಗಿ ಯೋಜನೆಗೆ $2\frac{1}{2}$ ಕೋಟಿ ರೂಪಾಯಿಗಳ ಟೆಂಡರನ್ನು ಕಾಲ್‌ಫಾರ್ ಮಾಡಿ ಹಣದ ಅಭಾವ ಎಂದು ಹೇಳಿ ಅದನ್ನು ಕೈಬಿಟ್ಟಿರಿ; ಅದನ್ನು ತಿರಸ್ಕರಿಸಿದಿರಿ. ಅದರಿಂದ 50 ಲಕ್ಷ ರೂಪಾಯಿಗಳು ನಷ್ಟವಾಯಿತು. ಆದರೆ ಇವೊತ್ತು ಅಲಮಟ್ಟಿ ಯೋಜನೆಗೆ $11\frac{1}{2}$ ಕೋಟಿ ರೂಪಾಯಿಗಳ ಕಾಮಗಾರಿಗಳಿಗೆ ಟೆಂಡರನ್ನು ಕರೆದಿದ್ದೀರಿ, ಇದನ್ನು ನೋಡಿದರೆ ನೀವು ಹಳೆಯ ಮೈಸೂರಿಗೆ ಅನ್ಯಾಯ ಮಾಡುತ್ತಿದ್ದೀರಿ ಎನ್ನುವ ಮಾತನ್ನು ಹೇಳಬೇಕಾಗಿದೆ. ಈ ರೀತಿಯಾಗಿ ಕೃಷ್ಣಾ ಬೇಸಿನ್ನಿಗೆ ಹೆಚ್ಚು ಹಣವನ್ನು ಕೊಟ್ಟು ಅಲ್ಲಿ ಅಭಿವೃದ್ಧಿ ಕೆಲಸವನ್ನು ಮಾಡುವುದರಲ್ಲಿ ಮುಖ್ಯ ಮಂತ್ರಿಗಳ ಖುದ್ದು ಜವಾಬ್ದಾರಿ ಇದೆ. ಹಾರಂಗಿ ಯೋಜನೆಗೆ $2\frac{1}{2}$ ಕೋಟಿ ರೂಪಾಯಿಗಳ ಟೆಂಡರನ್ನು ಕಾಲ್‌ಫಾರ್ ಮಾಡಿ ಅದನ್ನು ತಿರಸ್ಕಾರ ಮಾಡಿದ್ದರಿಂದ 50 ಲಕ್ಷ ರೂಪಾಯಿಗಳು ನಷ್ಟವಾಯಿತು. ಹಾರಂಗಿ ಯೋಜನೆಯನ್ನು ಕಾರ್ಯಗತ ಮಾಡದಿದ್ದರೆ ಅಲ್ಲಿನ ಜನಗಳಿಗೆ ದುಃಖ. ಆದ್ದರಿಂದ ಅದನ್ನು ಮಾಡುವುದಕ್ಕೆ ಹೊರಟು ಕಾಂಪಿಟಿಷನ್ ಟೆಂಡರ್ ಕರೆದರೆ ಮತ್ತೆ 50 ಲಕ್ಷ ರೂಪಾಯಿಗಳು ನಷ್ಟವಾಗುತ್ತದೆ. ಈರೀತಿ ಮಾಡುವುದಾದರೆ ಜನತೆಯ ಮನಸ್ಸಿನಲ್ಲಿರತಕ್ಕ ಕಲ್ಮಷ ಹೇಗೆ ಹೋಗುತ್ತದೆ. ಆದ್ದರಿಂದ ರಾಜ್ಯದ ಜನತೆಯ ಮನಸ್ಸಿನಲ್ಲಿರತಕ್ಕ ಕಲ್ಮಷವನ್ನು ತೊಳೆಯುವುದಕ್ಕೆ ಸಾಧ್ಯವಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ಇಷ್ಟು ಹೇಳಿ ನಾನು ನನ್ನ ಉಳಿದ ಭಾಷಣವನ್ನು ಮುಂದಿನ ಖಾಸಗೀ ಕಾರ್ಯ ಕಲಾಪದ ದಿವಸ ಮುಂದುವರಿಸುತ್ತೇನೆ.

Calling Attention Notice to a matter of urgent Public Importance *re:* Termination of Services of Teachers in Raichur District.

MR. SPEAKER.—Let us taken up the next item. There is a Call Attention notice given by Sriyuths M. Nagappa, K. Sangana Gowda and Sri Sadasivappa Patil. Let Sri Sadasivappa Patil call it.

ಶ್ರೀ ಸದಾಶಿವಪ್ಪ ಪಾಟೀಲ್.—ಸ್ವಾಮಿ ರಾಯಚೂರು ಜಿಲ್ಲೆಯ 106 ಜನ ಪ್ರಾಥಮಿಕ ಶಾಲೆಯ ಶಿಕ್ಷಕರನ್ನು ವಜಾ ಮಾಡಿದಬಗ್ಗೆ ನಾನು ಮಾನ್ಯ ಶಿಕ್ಷಣ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

† SRI N. M. KOTRABASIAH SOGI (Deputy Minister for Education).—Sir, with reference to the Call Attention Notice of Sri Sadashivappa Patil under Rule 63 (1) of Rules of Procedure and Conduct of Business in the Mysore Legislative Assembly, I beg to make the following statement:

The Chairman, (District Education Officer), District Level Recruitment Committee, Raichur, invited applications for the appointment of Teachers in Primary Schools in his Notification No. E2/251/APT/4/68-69, dated 4th November 1968. A large number of applications from candidates were received. 1,321 candidates were called for interview and the interviews took place during the period from 2nd April 1969 to 7th April 1969. During the interview, handwriting and oral tests were administered. During the oral test, credit was given for previous experience, marks obtained at the qualifying examination, personality and general knowledge. The